ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕನ್ನಡ ಎಂ.ಫಿಲ್. ಪದವಿಯ ಭಾಗವಾಗಿ ಸಾದರಪಡಿಸಿದ ನಿಬಂಧ

"ದೇಜಗೌ ಅವರ ಕನ್ನಡ ಪರಚಿಂತನೆಗಳು"

ನಿಬಂಧಕಾರರು

ಎಂ.ಎಸ್.ಮಹದೇವ

ಕನ್ನಡ ಎಂ.ಫಿಲ್.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು

ಮಾರ್ಗದರ್ಶಕರು

ಡಾ.ಬಿ.ನಂ. ಚಂದ್ರಯ್ಯ

ನಿವೃತ್ತ ಪ್ರಾಧ್ಯಾಪಕರು

ನಂ. ... ಎಚ್. ಕಾಲೇಜು ಪೂರ್ವ,

... ಮೈಸೂರು -೮.

ಕನ್ನಡ ವಿ... ವಿದ್ಯಾಲಯ, ಹಂಪಿ

221

221

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕನ್ನಡ ಎಂ.ಫಿಲ್. ಪದವಿಯ ಭಾಗವಾಗಿ ಸಾದರಪಡಿಸಿದ ನಿಬಂಧ

"ದೇಜಗೌ ಅವರ ಕನ್ನಡ ಪರಚಿಂತನೆಗಳು"

ನಿಬಂಧಕಾರರು
ಎಂ.ಎಸ್.ಮಹದೇವ
ಕನ್ನಡ ಎಂ.ಫಿಲ್.
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು

ಮಾರ್ಗದರ್ಶಕರು
ಡಾ.ಬಿ.ನಂ. ಚಂದ್ರಯ್ಯ
ನಿವೃತ್ತ ಪ್ರಾಧ್ಯಾಪಕರು
ನಂ. ೩, ಬಿ.ಎಡ್. ಕಾಲೇಜು ಪೂರ್ವ,
ಸರಸ್ವತಿಪುರಂ, ಮೈಸೂರು -೦೯.

ಕನ್ನಡ ನಿಶ್ವವಿದ್ಯಾಲಯ, ಹಂಪಿ

[illegible]

[illegible]

" [illegible] "

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕನ್ನಡ ಎಂ.ಫಿಲ್. ಪದವಿಯ ಭಾಗವಾಗಿ ಸಾದರಪಡಿಸಿದ ನಿಬಂಧ

"ದೇಜಗೌ ಅವರ ಕನ್ನಡ ಪರಚಿಂತನೆಗಳು"

ನಿಬಂಧಕಾರರು

ಎಂ.ಎಸ್.ಮಹದೇವ

ಕನ್ನಡ ಎಂ.ಫಿಲ್.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು

ಮಾರ್ಗದರ್ಶಕರು

ಡಾ.ಬಿ.ನಂ. ಚಂದ್ರಯ್ಯ

ನಿವೃತ್ತ ಪ್ರಾಧ್ಯಾಪಕರು

ನಂ. ೩, ಬಿ.ಎಡ್. ಕಾಲೇಜು ಪೂರ್ವ,

ಸರಸ್ವತಿಪುರಂ, ಮೈಸೂರು -೦೯.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ ಎಂ.ಎಸ್.ಮಹದೇವ ಅವರು ನನ್ನ ಮಾರ್ಗದರ್ಶನದಲ್ಲಿ "ದೇಜಗೌ ಅವರ ಕನ್ನಡ ಪರ ಚಿಂತನೆಗಳು" ಎಂಬ ಶೀರ್ಷಿಕೆಯ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ, ಎಂ.ಫಿಲ್ ಅಥವಾ ಯಾವುದೇ ಪ್ರಶಸ್ತಿಗಾಗಲಿ ಒಪ್ಪಿಸಿರುವುದಿಲ್ಲ ಎಂದು ದೃಢೀಕರಿಸಲಾಗಿದೆ.

ದಿನಾಂಕ: ೭/೮/೦೭
ಸ್ಥಳ : ಮೈಸೂರು

ಮಾರ್ಗದರ್ಶಕರು
(ಡಾ.ಬಿ.ನಂ.ಚಂದ್ರಯ್ಯ)
ನಿವೃತ್ತ ಪ್ರಾಧ್ಯಾಪಕರು

ಅಭ್ಯರ್ಥಿಯ ಘೋಷಣಾ ಪತ್ರ

ಡಾ.ಬಿ.ನಂ. ಚಂದ್ರಯ್ಯ ನಿವೃತ್ತ ಪ್ರಾಧ್ಯಾಪಕರು, ನಂ. ೩, ಬಿ.ಎಡ್. ಕಾಲೇಜು ಪೂರ್ವ, ಸರಸ್ವತಿಪುರಂ, ಮೈಸೂರು. ಇವರ ಮಾರ್ಗದರ್ಶನದಲ್ಲಿ **"ದೇಜಗೌ ಅವರ ಕನ್ನಡ ಪರ ಚಿಂತನೆಗಳು"** ಎಂಬ ವಿಷಯದ ಬಗ್ಗೆ ನಡೆಸಿದ ಅಧ್ಯಯನದ ಫಲವೇ ಈ ನಿಬಂಧ.

ನಾನು ಈ ನಿಬಂಧವನ್ನು ಈ ಮೊದಲು ಭಾಗಶಃ ಆಗಲಿ ಅಥವಾ ಪೂರ್ಣವಾಗಿಯಾಗಲಿ ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಎಂ.ಎಸ್.ಮಹದೇವ

ದಿನಾಂಕ : 2/8/02
ಸ್ಥಳ : ಮೈಸೂರು

ನಿಬಂಧಕಾರರು
(ಎಂ.ಎಸ್.ಮಹದೇವ)
ಎಂ.ಫಿಲ್. ವಿದ್ಯಾರ್ಥಿ

ಕೃತಜ್ಞತೆಗಳು

"ದೇಜಗೌ ಅವರ ಕನ್ನಡ ಪರಚಿಂತನೆಗಳು" ಎಂಬ ಎಂ.ಫಿಲ್. ಪದವಿಯ ಸಂಶೋಧನಾ ನಿಬಂಧವನ್ನು ರಚಿಸಲು ಮಾರ್ಗದರ್ಶನ ಹಾಗೂ ಸಲಹೆ ನೀಡಿದ ಪೂಜ್ಯ ಗುರುಗಳಾದ ಡಾ. ಬಿ.ನಂ. ಚಂದ್ರಯ್ಯ ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಸಂಶೋಧನಾ ನಿಬಂಧ ರಚನೆಗೆ ಹೆಚ್ಚಿನ ರೀತಿಯಲ್ಲಿ ವಿಷಯ ಸಂಗ್ರಹಣೆಗೆ ಪ್ರೋತ್ಸಾಹ ನೀಡಿದ ಅಧ್ಯಾಪಕರಿಗೆ ಹಾಗೂ ಪೂಜ್ಯ ತಂದೆ ತಾಯಿಯವರಿಗೆ ಹಾಗೂ ನೆಚ್ಚಿನ ಸ್ನೇಹಿತರಿಗೆ ಕೃತಜ್ಞನಾಗಿದ್ದೇನೆ. ನನ್ನ ಸಂಶೋಧನಾ ನಿಬಂಧ ರಚನೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಬಂಧುಮಿತ್ರರಿಗೂ ನನ್ನ ಕೃತಜ್ಞತೆಗಳು.

ಎಂ.ಎಸ್.ಮಹದೇವ

ದಿನಾಂಕ: 2/8/02
ಸ್ಥಳ : ಮೈಸೂರು

ನಿಬಂಧಕಾರರು
(ಎಂ.ಎಸ್.ಮಹದೇವ)
ಎಂ.ಫಿಲ್. ವಿದ್ಯಾರ್ಥಿ

ಪರಿವಿಡಿ

ಅಧ್ಯಾಯ-೧ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕರ್ನಾಟಕ ಇತಿಹಾಸದ ಇತ್ತೀಚಿನ ೨೦-೨೫ ವರ್ಷಗಳಲ್ಲಿ ತಮ್ಮ ವ್ಯಕ್ತಿತ್ವ ಮತ್ತು ಕ್ರಿಯಾಶೀಲತೆಯಿಂದ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥ ಸಿದ್ಧಿ ಸಾಧನೆಗಳನ್ನು ಮಾಡಿರುವ ಕೆಲವೇ ಮಂದಿಯಲ್ಲಿ ದೇ. ಜವರೇಗೌಡರನ್ನು ನಿಸ್ಸಂದೇಹವಾಗಿ ಒಬ್ಬರೆಂದು ಹೆಸರಿಸಬಹುದು.

ದೇ. ಜವರೇಗೌಡ ಅವರ ಹೆಸರು ಕನ್ನಡಿಗರಿಗೆ ಬರಿ ಹೆಸರಾಗಿರದೆ ಒಂದು ಶಕ್ತಿಯಾಗಿ, ತ್ರ್ಯಕ್ಷರಿ ಮಂತ್ರವಾಗಿದೆ, ಕನ್ನಡಕ್ಕೆ ಪರ್ಯಾಯನಾಮವಾಗಿದೆ. ಕನ್ನಡಕ್ಕಾಗಿ ಅವರು ಎತ್ತಿದ ಕೈ ಇನ್ನೂ ಇಳಿದಿಲ್ಲ. ಕನ್ನಡದ ಮಾತು ಬಂದರೆ ಅವರ ಧ್ವನಿ ಎತ್ತರವಾಗುತ್ತದೆ. ಅಧಿಕಾರವಿರಲಿ, ಇಲ್ಲದಿರಲಿ ಕನ್ನಡಕ್ಕಾಗಿ ಎಲ್ಲಿಯಾದರೂ ಅನ್ಯಾಯವಾಗುತ್ತಿದ್ದಲ್ಲಿ ದೇ. ಜವರೇಗೌಡ ಅವರು ಇಂದಿಗೂ ಸೇನಾನಿಯೇ. ತಮ್ಮ ವಿಶ್ರಾಂತ ಜೀವನದಲ್ಲೂ ಇತ್ತೀಚೆಗೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಬೇಕೆಂದು ಆಗ್ರಹಪಡಿಸಿ ನಡೆಸಿದ ಉಪವಾಸ ಸತ್ಯಾಗ್ರಹವನ್ನು ನೋಡಿದರೆ ದೇ. ಜವರೇಗೌಡ ಕನ್ನಡವನ್ನು ಜೀವಿತದ ಒಂದು ಮಾಧ್ಯಮವನ್ನಾಗಿ ಸ್ವೀಕರಿಸದೆ ಜೀವನದ (ಉಸಿರಾಗಿ) ಪ್ರಮುಖ ಭಾಗವಾಗಿ ಸ್ವೀಕರಿಸುವುದು ಸ್ಪಷ್ಟವಾಗಿದೆ. ಆದುದರಿಂದಲೇ ಎಚ್.ಎಂ. ಶಂಕರನಾರಾಯಣರಾಯರು "ಬಸವಣ್ಣನವರು ಭಕ್ತಿ ಭಂಡಾರಿ : ನಮ್ಮ ದೇ. ಜವರೇಗೌಡ ಅವರು ಕನ್ನಡದ ನಗಾರಿ" ಎಂದು ತಿಳಿಸಿದ್ದಾರೆ.[1]

ದೇ. ಜವರೇಗೌಡ ಅವರ ಹೋರಾಟದ ಬದುಕನ್ನು ಅವಲೋಕಿಸಿದಾಗ ಪ್ರಮುಖವಾಗಿ ಕಂಡು ಬರುವ ಅಂಶ ಅವರು ಗುಡಿಸಲಿನಿಂದ ಬಂದವರು, ಬಡತನದಲ್ಲಿ ಬೆಂದವರು. ರೆವಿನ್ಯೂ ಇಲಾಖೆಯಲ್ಲಿದ್ದು ಸತ್ತಕಾಗದಗಳ ಜೊತೆಯ ಒಡನಾಟವನ್ನು ತ್ಯಜಿಸಿ, ಅಧ್ಯಾಪನ ವೃತ್ತಿಯನ್ನು ಪ್ರೀತಿಯಿಂದ ಆರಿಸಿಕೊಂಡವರು. ಕಲಿತ ವಿಶ್ವವಿದ್ಯಾನಿಲಯದಲ್ಲೇ ಕುಲಪತಿಯಾಗಿ ತಮ್ಮ ಪ್ರೀತಿಯ ವಿಶ್ವವಿದ್ಯಾನಿಲಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡು ೬ ವರ್ಷಗಳ ಕಾಲ ನಿರಂತರ ಸೇವೆಯಿಂದ

ಮಾನಸ ಗಂಗೋತ್ರಿಗೆ ಹೊಸ ಚೈತನ್ಯವನ್ನು ನೀಡಿದವರು. ಅದರಲ್ಲೂ ಕನ್ನಡ ಅಧ್ಯಯನ ಸಂಸ್ಥೆಯ ರುವಾರಿಯಾಗಿ ಅವರು ರೂಪಿಸಿದ ಯೋಜನೆಗಳು, ಕನ್ನಡ ಭಾಷೆ ಹಾಗೂ ಸಾಹಿತ್ಯಾಭಿವೃದ್ಧಿಗೆ ಹಮ್ಮಿಕೊಂಡ ನಾನಾ ಪ್ರಕಟಣೆಗಳು ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಮೈಲಿಗಲ್ಲುಗಳಾಗಿವೆ.

ಕನ್ನಡಕ್ಕೆ ನೆಲೆ ಬೆಲೆ ದೊರೆಕೊಳ್ಳುವ ಮುನ್ನ
ಕರ್ನಾಟಕವೆಂದು ಕರೆದರೆ ನಪುಂಸಕನಿಗೆ ಮದುವೆ
ಮಾಡಿದಂತೆ; ಉತ್ತರನಿಗೆ ಸೇನಾ ಪಟ್ಟ ಕಟ್ಟಿದಂತೆ:
ಲಿಂಗವಿಲ್ಲದ ಗುಡಿಯ ಸಿಂಗರಿಸಿದಂತೆ; ಹೂವಿಲ್ಲದ
ಮರವ ಬೆಳೆಸಿದಂತೆ ನಿಷ್ಫಲವಯ್ಯ ಗುರುದೇವ.*

ಎಂಬ ವಿಶಿಷ್ಟ ವಚನ ಕೃತಿಯೊಂದರ ವಚನ.

"ನನಗೆ ಪಂಚಾಕ್ಷರಿಯು ಬೇಡ, ಷಡಕ್ಷರಿಯು ಬೇಡ, ಕನ್ನಡವೆಂಬ ತ್ರ್ಯಕ್ಷರಿಯೆ ಸಾಕಯ್ಯ ಗುರುದೇವ"* ಎನ್ನುವ ದೇ. ಜವರೇಗೌಡ ಅವರಿಗೆ ಕನ್ನಡದಷ್ಟೆ ಆರಾಧ್ಯದೈವವಾದ ಮತ್ತೊಂದು ಶಕ್ತಿಯೆಂದರೆ ಶ್ರೀಗುರುಕುವೆಂಪು 'ಕನ್ನಡಕ್ಕಾಗಿ ಕೈಯೆತ್ತು; ಕಲ್ಪವೃಕ್ಷವಾಗುವುದು' ಎಂಬ ಗುರುವಾಣಿಯನ್ನು ಬದುಕಿನಲ್ಲಿ ಆದರ್ಶವಾಗಿ ಸ್ವೀಕರಿಸಿ ತಾವೇ ಕಲ್ಪವೃಕ್ಷವಾದರು. ಕನ್ನಡದ ಸೇನಾನಿ, ಕನ್ನಡದ ಕಣ್ಮಣಿ, ಮಾನವತಾವಾದಿ, ಛಲಗಾರ, ಮಲ್ಲ, ಕನ್ನಡದ ಗಂಡುಗಲಿ ಹೀಗೆ ಸಮಾಜದ ಗಣ್ಯರಿಂದ ಮುತ್ತಿನಂಥಹ ಮೂರಕ್ಷರದ ದೇ.ಜವರೇಗೌಡರು ಮನ್ನಣೆಗೆ ಪಾತ್ರರಾಗಿರುವರು.

"ರಾಷ್ಟ್ರಕವಿ ಕುವೆಂಪು ಅವರು ಕನ್ನಡದ ನಂದನ ವನವಾದರೆ, ದೇ.ಜವರೇಗೌಡ ಆ ನಂದವನದಲ್ಲಿ ದಷ್ಟಪುಷ್ಟವಾಗಿ ಬೆಳೆದಿರುವ ಕನ್ನಡದ ಕಲ್ಪವೃಕ್ಷವಾಗಿದ್ದಾರೆ". ಪ್ರಸ್ತುತ ಸಂಶೋಧನಾ ನಿಬಂಧದಲ್ಲಿ "ದೇ. ಜವರೇಗೌಡ ಅವರ ಕನ್ನಡ ಪರ ಚಿಂತನೆಗಳು" ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಕನ್ನಡದ ರಕ್ಷಣೆಯಲ್ಲಿ ಮತ್ತು ಬೆಳವಣಿಗೆಯಲ್ಲಿ ಅವರು

* - ಗುರದೇವನಡಿಗೆ, ದೇ. ಜವರೇಗೌಡ, ಪುಟ.. ೬

ವಹಿಸಿದ ಪಾತ್ರ ಮಹತ್ವದ್ದಾಗಿದೆ. ಅದರಲ್ಲೂ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು, ಆಡಳಿತ ಮಾಧ್ಯಮವಾಗಬೇಕು, ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಬೇಕು, ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ನೌಕರಿಯಲ್ಲಿ ಆದ್ಯತೆ ಇರಬೇಕು, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಇಂಥಹ ಪ್ರಮುಖವಾದ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಅವರ ಕನ್ನಡ ಪರ ಚಿಂತನೆಗಳೇ ಕಾರಣಗಳಾಗಿವೆ.

ಅಧ್ಯಾಯ-೨ : ಜೀವನ ಚಿತ್ರಣ

ದೇ. ಜವರೇಗೌಡರ ಬದುಕು ಸಾಗಿದ್ದು ಗುಡಿಸಲಿನಿಂದ ಗಂಗೋತ್ರಿಗೆ. ನಿರ್ವಹಿಸಿದ್ದು ಗುಮಾಸ್ತೆಯ ಹುದ್ದೆಯಿಂದ ಕುಲಪತಿ ಹುದ್ದೆಯವರೆಗೆ ಎನ್ನುವುದು ಅವರನ್ನು ಬಲ್ಲವರೆಲ್ಲರಿಗೂ ತಿಳಿದಿರುವಂಥದು.

ಪ್ರೊ. ದೇ. ಜವರೇಗೌಡರು ೧೯೧೮ರ ಜುಲೈ ೬ ರಂದು ಮೈಸೂರು-ಬೆಂಗಳೂರು ರಸ್ತೆಯ ಚೆನ್ನಪಟ್ಟಣ ತಾಲ್ಲೂಕಿಗೆ ೪ ಮೈಲಿ ದೂರದಲ್ಲಿರುವ ಚಕ್ಕರೆ ಎನ್ನುವ ಕುಗ್ರಾಮದಲ್ಲಿ ಜನಿಸಿದರು. ದೇವೇಗೌಡ-ಚೆನ್ನಮ್ಮ ದಂಪತಿಗಳ ನಾಲ್ಕು ಮಕ್ಕಳಲ್ಲಿ ಮೂರನೆಯ ಮಗ ದೇ.ಜವರೇಗೌಡ. ಜನ್ಮಸ್ಥಳ ಆಡಿನ ಕೊಟ್ಟಿಗೆ. ತಂದೆ ದೃಷ್ಟಿಹೀನರಾಗಿದ್ದರೂ ವ್ಯವಸಾಯವನ್ನೇ ನಂಬಿಕೊಂಡು ಕುಟುಂಬ ನಡೆಸುತ್ತಿದ್ದರು. ತಾಯಿ ಅನಕ್ಷರಸ್ಥೆ, ಮುಗ್ಧೆ. ಹೀಗಾಗಿ ಮಕ್ಕಳ ಓದಿನ ಬಗ್ಗೆ ಅಷ್ಟು ಆಸಕ್ತಿ ಇಲ್ಲದಿದ್ದರೂ ದೇ. ಜವರೇಗೌಡರ ಅಣ್ಣ ಆಗ ಶಾಲೆಗೆ ಹೋಗುತ್ತಿದ್ದರು. ಹುಡುಗ ಜವರೇಗೌಡ ಮಾತ್ರ ಆಡು-ಕುರಿ ಮೇಯಿಸಿಕೊಂಡಿದ್ದರು. ಆದರೂ ಶಾಲೆಯ ಬಳಿ ಹೋದಾಗ ಕಿಟಕಿಯ ಹತ್ತಿರ ನಿಂತು ಪಾಠ ಕೇಳುವ ಕುತೂಹಲ ಅವರಿಗಿತ್ತು. ಶಾಲೆಯ ಮೇಷ್ಟ್ರು ಶ್ರೀರಂಗಸ್ವಾಮಯ್ಯಂಗಾರರು ಹುಡುಗನ ಆಸಕ್ತಿ ನೋಡಿ "ಅಲ್ಲೇ ನಿಲ್ಲ ಬೇಡವೋ ಬಾರೋ ಒಳಗೆ" ಎಂದು ಹಲವು ಸಾರಿ ಕರೆದದ್ದುಂಟು. ಆಗ ಶ್ರೀಯುತ ಎಚ್.ಕೆ. ವೀರಣ್ಣಗೌಡರು ಆ ಶಾಲೆಯ ಮುಖ್ಯೋಪಾಧ್ಯಾಯರು. ಹುಡುಗನ ಬಗ್ಗೆ ಅವನ ತಂದೆಯ ಹತ್ತಿರ ಮಾತಾಡಿದ ರಂಗಸ್ವಾಮಯ್ಯಂಗಾರರು ಶಾಲೆಗೆ ಕಳುಹಿಸುವ ಬಗ್ಗೆ ಕೇಳಿದಾಗ ದೇವೇಗೌಡರು "ಇಲ್ಲ ಬುದ್ಧಿ, ಸ್ಕೂಲಿಗೆ ಕಳಿಸಿದ್ರೆ, ಆಡು-ಕುರಿ ಮೇಯಿಸುವುದು ಯಾರು? ನನಗೆ ತೊಂದರೆ ಆಗುತ್ತೆ" ಎಂದರು. ಇದೇ ಮಾತನ್ನು ಅವರ ಮುಖ್ಯೋಪಾಧ್ಯಾಯರ ಕಿವಿಗೂ ಮುಟ್ಟಿಸಿದರು. ಆಗ ಶ್ರೀ ವೀರಣ್ಣಗೌಡರು ಆ ತಂದೆಗೆ "ನೀನು ನಿನ್ನ ಮಗನನ್ನು ಶಾಲೆಗೆ ಸೇರಿಸದೆ ಇದ್ರೆ, ನಿನ್ನನ್ನು ಜೈಲಿಗೆ ಹಾಕಿಸುತ್ತೇನೆ" ಎಂದು ಜೋರಾಗಿಯೇ ಹೇಳಿದಾಗ ಬಾಲಕ ದೇ.ಜವರೇಗೌಡರು ಶಾಲೆ ಸೇರಿದರು.

ಹೀಗೆ ಪ್ರಾರಂಭವಾದ ವಿದ್ಯಾಭ್ಯಾಸ ಮುಂದಿನ ಮೂರು ವರ್ಷ ಮುಂದುವರೆಯಿತು. ಆಗ ದೇ. ಜವರೇಗೌಡನ ಅಣ್ಣ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾಗಿ ಓದು ಮುಂದುವರಿಸದೆ ಶಾಲೆಯನ್ನು ಬಿಟ್ಟರು. ಹುಡುಗ ದೇ. ಜವರೇಗೌಡನ ಓದು ಮುಂದುವರಿಯಿತು. ಅಕ್ಕನಿಗೆ ಮದುವೆಯಾಗಿತ್ತು, ತಂಗಿ ಮನೆಯಲ್ಲಿದ್ದಳು. ಚಿಕ್ಕ ಮಗನ ಓದಿನಲ್ಲಿ ತಂದೆಗೆ ಆಸಕ್ತಿ ಬೆಳೆಯಿತು. ಸ್ವತಃ ಓದಿನಿಂದಲೇ ಅದರಲ್ಲೂ ಅಕ್ಷರದ ಗಂಧವೇ ಇಲ್ಲದ ಮನೆತನದಿಂದ ಬಂದ ದೇ. ಜವರೇಗೌಡರಿಗೆ ತರಗತಿಯಲ್ಲಿ ನಡೆಯುತ್ತಿದ್ದ ಪಾಠ ಮಾತ್ರವೇ ಲಭ್ಯ. ಶಾಲೆಗೆ ಹೋಗುವ ಮುನ್ನ, ಬಂದ ನಂತರ ಆಡು-ಕುರಿ ಮೇಯಿಸುವ ಕೆಲಸ. ರಾತ್ರಿ ಹೇಗೋ ಓದುವುದು. ಅಂತೂ ಪ್ರೈಮರಿ (ಪ್ರಾಥಮಿಕ) ತರಗತಿಗಳು ಮುಗಿದು ಮಿಡ್ಲ್‌ಸ್ಕೂಲ್ (ಮಾಧ್ಯಮಿಕ) ತರಗತಿಗೆ ಚನ್ನಪಟ್ಟಣಕ್ಕೆ ೪ ೧/೨ ಮೈಲಿ ನಡೆದು ಬರಬೇಕಾಯಿತು. ಆಗ ಕೆ.ಎಲ್.ಎಸ್. ಲೋಯರ್ ಸೆಕೆಂಡರಿಯೂ ಮುಗಿಯಿತು. ಲೋಯರ್ ಸೆಕೆಂಡರಿ ಆದಾಗ ಮುಂದೆ ಓದಲು ಸಾಧ್ಯವಾಗುತ್ತಿರಲಿಲ್ಲ ಆಸಂದರ್ಭದಲ್ಲಿ ಆ ಶಾಲೆಯ ಕೃಪಾದಾಸ್ ಎನ್ನುವ ಕ್ರೈಸ್ತ ಮೇಷ್ಟ್ರು ಹುಡುಗನನ್ನು ಸಾಕಷ್ಟು ಪ್ರೀತಿಯಿಂದ ಕಂಡು ಸಲಿಗೆಯಿಂದ ವ್ಯವಹರಿಸುತ್ತಿದ್ದರು. ಅಲ್ಲದೆ ಆತನ ಸ್ಥಿತಿಗತಿಗಳನ್ನು ತಿಳಿದಿದ್ದವರು ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಪುಟ್ಟಾಶಾಸ್ತ್ರಿಯವರಲ್ಲಿ ವಿದ್ಯಾರ್ಥಿಗೆ ಸ್ಕಾಲರ್‌ಶಿಪ್ ಮಾಡಿಸುವ ಪ್ರಸ್ತಾಪ ಮಾಡಿದರು. ಮುಖ್ಯೋಪಾಧ್ಯಾಯರ ವಿಶೇಷ ಮುತುವರ್ಜಿಯಿಂದಾಗಿ ಸ್ಕಾಲರ್‌ಶಿಪ್ ಆಯಿತು. ಹುಡುಗ ದೇ. ಜವರೇಗೌಡನ ಓದು ಮುಂದುವರೆಯಿತು.

ಎಸ್.ಎಸ್.ಎಲ್.ಸಿ ಪಾಸಾದ ಅನಂತರ ಮುಂದೆ ಇಂಟರ್‌ಮೀಡಿಯೇಟ್ (ಕಾಲೇಜಿಗೆ) ಸೇರಲು ಬೆಂಗಳೂರಿಗೆ ಹೋಗಬೇಕಾಯಿತು. ದೇ. ಜವರೇಗೌಡರ ಮಾತಿನಲ್ಲೇ ಉಲ್ಲೇಖಿಸುವುದಾದರೆ "ಆಗಲೇ ನಾನು ಹೊರ ಜಗತ್ತನ್ನು ಕಂಡದ್ದು. ನಮ್ಮ ತಂದೆ ತಾಯಿಗೆ ಬಹಳ ಭಯ. ನನ್ನನ್ನು ಊರುಬಿಟ್ಟು ಹೊರ ಊರಿಗೆ ಕಳುಹಿಸಲು ಆದರೆ ನನಗೆ ಮಾತ್ರ ಧೈರ್ಯ ಎಂಥದೂ ಭಯ ಇರಲಿಲ್ಲ. ನಮ್ಮೂರ ಹಿರಿಯರೊಬ್ಬರ ಜತೆ ಮಾಡಿ ಬೆಂಗಳೂರಿಗೆ ಕಳುಹಿಸಿದರು ನಮ್ಮ ತಂದೆ".

ಆಗ ಇಂಟರ್ ಮೀಡಿಯೆಟ್ ಕಾಲೇಜು ಇದ್ದುದು ಬೆಂಗಳೂರು-ಮೈಸೂರಿನಲ್ಲಿ ಮಾತ್ರವೇ. ಒಕ್ಕಲಿಗರ ವಿದ್ಯಾರ್ಥಿ ಸಂಘದಲ್ಲಿ ವಾಸ್ತವ್ಯ ಹೂಡಿದರು. ಆಗ ಅರ್ಥಶಾಸ್ತ್ರ ಪಾಠ ಮಾಡುತ್ತಿದ್ದ ಶ್ರೀ ಪ್ರಣಾವಾರ್ಥಿಹರನ್ ಎನ್ನುವ ಉಪನ್ಯಾಸಕರು ದೇ. ಜವರೇಗೌಡಗೆ ಸಹಾಯ ಮಾಡಿದರು. "ಸ್ಕಾಲರ್‌ಶಿಪ್ ಇಲ್ಲದೆ ಓದು ಮುಂದುವರೆಸಲಾಗದು. ನಾನು ಬಡವ. ಊರಿಗೆ ವಾಪಸ್ಸು ಹೋಗುತ್ತೇನೆ ಅಷ್ಟೆ ಎಂದು ಪಟ್ಟು ಹಿಡಿದ ವಿದ್ಯಾರ್ಥಿಗೆ "ಆಲ್‌ರೈಟ್ ಯು ಫಾಲೊ" ಎಂದು ತಮ್ಮ ವಿಶಿಷ್ಟ ಶೈಲಿಯಲ್ಲಿ ಸ್ಕಾಲರ್‌ಶಿಪ್ ಮಾಡಿಸಿ ಕೊಟ್ಟ ಮಾಸ್ತರರು ಅವರು. ಅವರು ಆಗ ಸ್ಕಾಲರ್‌ಶಿಪ್ ಮಾಡಿಸಿಕೊಡದಿದ್ದರೆ ಖಂಡಿತವಾಗಿಯೂ ನಾನು ಓದು ಮುಂದುವರೆಸುತ್ತಿರಲಿಲ್ಲ, ಊರಿಗೆ ವಾಪಾಸಾಗುತ್ತಿದ್ದೆ ಅಷ್ಟೇ" ಎಂದು ನೆನೆಯುತ್ತಾರೆ ದೇ. ಜವರೇಗೌಡ ಅವರು.

ಹದಿಹರೆಯಕ್ಕೆ ಕಾಲಿಡುತ್ತಿದ್ದ ವರ್ಷಗಳ ಸಂದರ್ಭದಲ್ಲಿ ನಗರ ವಾಸದ ಪ್ರಭಾವದಿಂದಾಗಿ ಕೆಲವು ಕೆಟ್ಟ ಚಾಳಿಗೆ ಬಿದ್ದರು. ಆಗ ವಯಸ್ಸು ೧೬-೧೭ರ ಯುವಕ. ಅದರಲ್ಲಿ ಮುಖ್ಯವಾದುದು ಇಸ್ಪೀಟು ಆಟ. ರಾತ್ರಿಯೆಲ್ಲಾ ಇಸ್ಪೀಟು ಆಟ. ಬೆಳಗು ಪಾಠ ಕೇಳಲು ಸಾಧ್ಯವಾಗದ ತೂಕಡಿಕೆ. ಇದರ ಪರಿಣಾಮ ಇಂಟರ್ ಮೀಡಿಯೇಟ್‌ನಲ್ಲಿ ಅನುತ್ತೀರ್ಣರಾದರು! ಪುನಃ ಪರೀಕ್ಷೆ ತೆಗೆದುಕೊಂಡು ಕನ್ನಡ, ಇಂಗ್ಲೀಷ್, ಇತಿಹಾಸದಲ್ಲಿ ಒಳ್ಳೆಯ ಅಂಕಗಳೊಂದಿಗೆ ಉತ್ತೀರ್ಣರಾದರು. ಮುಂದೆ ಆನರ್ಸ್ ಓದಲು ಕೇವಲ ಎರಡೇ ನಗರಗಳಲ್ಲಿ ಮಾತ್ರ ಅವಕಾಶವಿತ್ತು, ಅವು ಬೆಂಗಳೂರು-ಮೈಸೂರು. ಸಾಂಸ್ಕೃತಿಕ ನಗರವಾದ ಮೈಸೂರೇ ಅವರು ಆನರ್ಸ್ ಓದಲು ಆಯ್ಕೆ ಮಾಡಿಕೊಂಡ ಸ್ಥಳ. ಒಬ್ಬ ಹಳ್ಳಿಯ ಮುಗ್ಧ ವಿದ್ಯಾರ್ಥಿಯ ಹೆಚ್ಚಿನ ವಿದ್ಯಾಭ್ಯಾಸವನ್ನು ಕಂಡು ಸಹಿಸದ ಹಳ್ಳಿಯ ಇತರರು ದೇ. ಜವರೇಗೌಡನ ಅಪ್ಪ ಹಾಗೂ ಅಣ್ಣನಲ್ಲಿ ಚಾಡಿ ಹೇಳಿ ಕಾಲೇಜಿಗೆ ಕಳುಹಿಸದಿರುವಂತೆ ಮಾಡಲು ಅವರು ನಡೆಸಿದ ಪ್ರಯತ್ನವೆಲ್ಲಾ ವಿಫಲವಾಯಿತು.

ಹೀಗೆ ಮೈಸೂರು ಸೇರಿದ ದೇ. ಜವರೇಗೌಡ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂ ನಲ್ಲಿ ಆಶ್ರಯ ಪಡೆದರು. ಆಗ ದೇಶಿಕಾನಂದ ಸ್ವಾಮೀಜಿ ರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದರು.

ದೇ. ಜವರೇಗೌಡ ಉಪನ್ಯಾಸಕರಲ್ಲಿ ಒಬ್ಬರಾದ ಶ್ರೀ ಜೆ.ಸಿ.ರಾಲೊ (ಅವರು ಮುಂದೆ ವಿಡಿಯಾ ಸ್ಕಾಚ್ ಕಂಪನಿಯ ಛೇರ್‌ಮನ್-ಅಧ್ಯಕ್ಷರೂ ಆದರು.) ಅವರಲ್ಲಿ ಸ್ವಾಮೀಜಿ ದೇ. ಜವರೇಗೌಡರ ಬಗೆಗೆ ಹೇಳಿ ಸ್ಕಾಲರ್‌ಶಿಪ್ ಕೊಡಿಸಲು ಶಿಫಾರಸ್ಸು ಮಾಡಿದರು. ಸ್ಕಾಲರ್‌ಶಿಪ್ ಪಡೆದ ನಂತರ ಎಲ್ಲರಿಗಿಂತ ಹೆಚ್ಚು ಅಂಕಗಳಿಸಿದ್ದರಿಂದ ಪ್ರತಿಯೊಂದು ವಿಷಯದ ಸ್ಕಾಲರ್‌ಶಿಪ್ ಇವರ ಪಾಲಾಯಿತು. ಆ ಸ್ಕಾಲರ್ ಶಿಫ್‌ನ ಮೊತ್ತ ಇಪ್ಪತ್ತೈದು ರೂಪಾಯಿ ವಿದ್ಯಾಭ್ಯಾಸಕ್ಕಾಗಿ ಮಾತ್ರ ಆ ಹಣ ಮೀಸಲಿಡುತ್ತಿದ್ದರು ಉಳಿದದ್ದು ಪೋಸ್ಟ್ ಆಫೀಸಿನಲ್ಲಿ ಸೇರುತ್ತಿತ್ತು.

ಗುರುವಿನ ಒಡನಾಟದಲ್ಲಿ

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಆನರ್ಸ್ ತೆಗೆದು ಕೊಳ್ಳುವಾಗ ಇತಿಹಾಸವನ್ನು ಆರಿಸಿಕೊಂಡಾಗಿತ್ತು. ಆದರೆ ಅವರಿಗೆ ಶ್ರೀ ಕುವೆಂಪು ಅವರ 'ರಾಮಕೃಷ್ಣಪರಮಹಂಸ' ಎಂಬ ಕೃತಿಯನ್ನು ಓದಿದಾಗ ಸಾಹಿತ್ಯಾಸಕ್ತಿ ಇಮ್ಮಡಿಯಾಯಿತು. ಅನಂತರ ಕುವೆಂಪು ವಿರಚಿತ ಗ್ರಂಥಗಳನ್ನು ಅಭ್ಯಸಿಸಿದ್ದರ ಪರಿಣಾಮವಾಗಿ ಅವರ ಬಗ್ಗೆ ಅನನ್ಯವಾದ ಗುರುಭಾವನೆ ಬೆಳೆದು ಅದು ಅಚಲವಾಗಿದ್ದಿತು. ಆದ್ದರಿಂದ ಇತಿಹಾಸ ಬೇಡವೆನ್ನಿಸಿ ಕುವೆಂಪು ಅವರ ಪಾಠ ಕೇಳಬೇಕೆನ್ನುವ ಅಮಿತ ಆಸೆಯಿಂದ 'ಕನ್ನಡ'ವನ್ನು ಅವರು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡರು. ದೇ. ಜವರೇಗಾಡರು ಕಾಲೇಜಿಗೆ ಸೇರಿದ ಕೇವಲ ಆರು ತಿಂಗಳು ಮಾತ್ರ ಅವರ ಪಾಠ ಕೇಳುವ ಸೌಭಾಗ್ಯ ದೊರೆಯಿತು. ಆಮೇಲೆ ಕುವೆಂಪುರವರು ಬೆಂಗಳೂರಿಗೆ ವರ್ಗವಾಗಿ ಹೊರಟು ಹೋದರು.

ದೇ.ಜವರೇಗೌಡ ಅವರೇ ಹೇಳುವಂತೆ "ನಾನು ಕುವೆಂಪು ಅವರ ಧ್ವನಿ ಕೇಳಿ ರೋಮಾಂಚಿತನಾಗಿದ್ದೆ. ನಿಜಕ್ಕೂ ನಾನು ನನಗಿಂತ ಹಿಂದಿನವರು - ನಮಗಿಂತ ಪುಣ್ಯವಂತರು ಬೇರೆ ಯಾರೂ ಇಲ್ಲ.... ಎಂತೆಂಥವರ ಪಾಠ ಕೇಳಿದವರು ನಾವು?! ಬಿ.ಎಂ.ಶ್ರೀ, ಟಿ.ಎಸ್.ವೆಂಕಣ್ಣಯ್ಯ ತೀ.ನಂ.ಶ್ರೀ, ಕುವೆಂಪು, ಎ.ಆರ್.ಕೃಷ್ಣಶಾಸ್ತ್ರಿ, ಡಿ.ಎಲ್.ನರಸಿಂಹಾಚಾರ್... ಇಂತಹ ಮಹಾನ್ ವ್ಯಕ್ತಿಗಳು ನಮ್ಮ ತರಗತಿಗೆ ಬರುತ್ತಿದ್ದರು, ನಮಗೆ ಪಾಠ ಹೇಳುತ್ತಿದ್ದರು. ಒಂದು ಕ್ಲಾಸ್

ಎಂದರೆ ಎರಡರಿಂದ ಮೂರು ಗಂಟೆಗಳ ಕಾಲ ಪಾಠ! ಸಮಯ ಸರಿಯುತ್ತಿದ್ದುದರ ಪರಿವೆಯೇ ನಮಗೆ ಇರುತ್ತಿರಲಿಲ್ಲ.....[೧] ಈ ಕ್ಷಣದಲ್ಲಿಯೂ ಅಷ್ಟೇ ರೋಮಾಂಚಿತರಾಗಿ! ದೇ. ಜವರೇಗೌಡರು ಎನ್ನುತ್ತಾರೆ.

ಬಿ.ಎ. ಪದವಿ ಅನಂತರ ಮುಂದಕ್ಕೆ ಓದಿದರೂ ಉಪನ್ಯಾಸಕನ ಹುದ್ದೆ ಸಿಗುವ ಸಾಧ್ಯತೆ ಇರಲಿಲ್ಲ. ಸರಿ ಮುಂದೆ ಓದುವುದು ಬೇಡ ಎನ್ನಿಸಿದರೂ 'ಲಾ' ಓದಬಾರದೇಕೆ ಎನಿಸಿ ತಂದೆಯಲ್ಲಿ ತಮ್ಮಿಷ್ಟ ಹೇಳಿಕೊಂಡಾಗ ಅವರೂ ನಿರಾಶರಾಗಿ "ಈವರೆಗೆ ಓದಿಸಿದ್ದೇ ಕಷ್ಟದಲ್ಲಿ ಅಷ್ಟೊಂದು ದುಡ್ಡು ನಾನೆಲ್ಲಿಂದ ತರಲಪ್ಪ? ಬೇಡ" ಎಂದರು. ಆಗ ನಾ ಕಸ್ತೂರಿ ಅವರು ದೇ.ಜವರೇಗೌಡರನ್ನು ಪ್ರೋತ್ಸಾಹಿಸಿ ಕೊಲ್ಲಾಪುರಕ್ಕೆ ಹೋಗಿ 'ಲಾ' ಓದಲು ಸೂಚಿಸಿದರು.* ಅಲ್ಲಿಗೆ ಹೋದರೂ ಹಿಂದಿನ ದಿನವೇ ಆ ವರ್ಷದ 'ಲಾ' ಕೋರ್ಸ್‌ಗೆ ನೊಂದಣಿ ಮುಗಿದು ಹೋಗಿತ್ತು. ಆದರೆ ಅಲ್ಲಿನ ಕಾಲೇಜಿನ ಪ್ರಿನ್ಸಿಪಾಲರು ಪ್ರಚಂಡರೇ ಸರಿ. ದೂರದ ಊರಿನಿಂದ ಬಂದ ಯುವಕನನ್ನು ವಾಪಸ್ಸು ಕಳಿಸಲು ಒಪ್ಪದೆ "ನೀನೇಕೆ ವಾಪಸ್ಸಾಗಬೇಕು ನೀನು ಎಂ.ಎ. ಗೆ ಸೇರು. ಒಂದು ವರ್ಷ ಓದು. ಅಕ್ಟೋಬರ್‌ನಲ್ಲಿ ಬಾ ಇಲ್ಲಿಗೆ ಸೇರಿಕೊಳ್ಳುವೆಯಂತೆ"[೨] ಎಂದು ಹೇಳಿ ಒತ್ತಾಯಿಸಿದರು. ಆದರೆ ಎಂ.ಎ. ಗೆ ಸೇರುವುದಾದರೆ ಮೈಸೂರಿನಲ್ಲೇ ಆಗಬಹುದಿತ್ತಲ್ಲ 'ಲಾ' ಗೆ ಅವಕಾಶ ಬೇಡಿ ತಾನೆ ಅಲ್ಲಿಗೆ ನಾವು ಹೋಗಿದ್ದುದು ಎಂದು ದೇ. ಜವರೇಗೌಡರು ನಿರಾಶರಾಗಿ ಊರಿಗೆ ವಾಪಸ್ಸಾದರು. ಕಾಣದ ಕೈ ಅಲ್ಲಿಯೂ ಕೆಲಸ ಮಾಡಿದ್ದಿತು. 'ಲಾ' ಓದಿ ಲಾಯರಷ್ಟೇ ಆಗ ಬಹುದಾಗಿದ್ದ ಅವಕಾಶ ತಪ್ಪಿ ಕನ್ನಡದ ಸೇನಾನಿಯಾಗಿ, ಕನ್ನಡದ ಕಣ್ಮಣಿಯಾಗಿ, ಅದರಲ್ಲೂ ವಿಶೇಷವಾದ 'ಕನ್ನಡ ಭಾಷೆಯ ಪರ ಲಾಯರಾಗಲು' ಇತ್ತ ವಿಧಿ ಅವರನ್ನು ಎಳೆದು ತಂದಿತ್ತು.

ಉದ್ಯೋಗದ ಹಾದಿಯಲ್ಲಿ

ಎಂ.ಎ.ಗೆ ಸೇರಬೇಕೆಂದು ಆಸೆವುಳ್ಳವರಾಗಿದ್ದ ದೇ.ಜವರೇಗೌಡ ಅದು ಕೈಗೂಡದೆ ಬೆಂಗಳೂರಿಗೆ ಹೋಗಿ ವಿದ್ಯಾ ಇಲಾಖೆಯಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿದರು. ಆದರೆ, ಅಷ್ಟೇ ಅವರ

೧ ಹೋರಾಟದ ಬದುಕು - ಪುಟ - ೭೨ - ೭೩.
೨ ಹೋರಾಟದ ಬದುಕು - ಪುಟ ೮೦.

[illegible]

ಪ್ರಪಂಚ ಆಗುವಂತಿರಲಿಲ್ಲ. ಒಂದು ದಿನ ೧೯೪೨ರ ಜೂನ್ ತಿಂಗಳ ಮಧ್ಯಭಾಗ ರಾತ್ರಿ ೪ ಘಂಟೆ ಸಮಯ ಶ್ರೀ ಎ.ಆರ್.ಕೃಷ್ಣಶಾಸ್ತ್ರಿಗಳು ದೇ.ಜವರೇಗೌಡನ ಕನಸಿನಲ್ಲಿ ಬಂದು ತಟ್ಟಿ ಎಬ್ಬಿಸಿ "ಬಾ ಎದ್ದು.... ಎಂ.ಎ. ಗೆ ಸೇರಿಕೋ..." ಎಂದ ಹಾಗಾಯಿತಂತೆ. [೩] ಬೆಚ್ಚಿ ಎಚ್ಚರವಾಗಿ ಕುಳಿತರೂ ಕೃಷ್ಣಶಾಸ್ತ್ರಿಗಳು ಹೇಳಿದ ಕನ್ನಡ ಎಂ.ಎ. ಕೋರ್ಸಿನ ಗುಂಗು ಬಿಡಲಿಲ್ಲ. ಮುಂಜಾನೆ ಎದ್ದವರೇ ಪ್ರಾತಃ ಕರ್ಮ ಮುಗಿಸಿ ಬೆಂಗಳೂರಿನಿಂದ ಟ್ರಂಕು ಹಿಡಿದು ಮೈಸೂರಿಗೆ ವಾಪಸ್ಸಾದರು. ಮೈಸೂರಿಗೆ ಬಂದು ಎಂ.ಎ.ಗೆ ಸೇರಿ ಅಲ್ಲಿಯೂ ಸ್ಕಾಲರ್ ಶಿಪ್ ಪಡೆದರು. ಆಗಲೇ ಸಾಕಷ್ಟು ಪ್ರಭಾವಶಾಲಿಯೂ ಉದಾರ ಮನಸ್ಸಿನವರೂ ಆಗಿದ್ದ ಶ್ರೀಯುತ ಅಪ್ಪಾಜಿಗೌಡರ ಮಗಳು ಸಾವಿತ್ರಮ್ಮನವರ ಜೊತೆ ೧೯೪೩ರಲ್ಲಿ ದೇ.ಜವರೇಗೌಡರು ಖಾದಿತೊಟ್ಟು ಮಂಗಳಸೂತ್ರವನ್ನು ಮಾತ್ರ ಚಿನ್ನದ ಒಡವೆಯನ್ನಾಗಿ ಹಾಕಿ, ನಿರಾಡಂಬರವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ನಂತರ ಎಂ.ಎ. ಪಾಸಾಗಿ ಕೋರ್ಸ್ ಮುಗಿದರೂ ಕೆಲಸದ ಬಗೆಗಿನ ಚಿಂತೆ ಕಾಡುತ್ತಲೇ ಇತ್ತು. ಆ ಸಂದರ್ಭದಲ್ಲಿ ಪಬ್ಲಿಕ್ ಸರ್ವೀಸ್ ಕಮೀಷನರ್ ಆಗಿದ್ದ ಶ್ರೀ ನೊರ್ನೊನಾರವರಿಗೆ ಒಂದು ಪತ್ರ ಬರೆದರು. ಅದರಲ್ಲಿ ಮುಖ್ಯವಾಗಿ "ನನ್ನ ಹೆಸರನ್ನು ತಾವು ದಯವಿಟ್ಟು ಗೆಜೆಟಿಯರ್‌ನಲ್ಲಿ ನೋಂದಾಯಿಸಬೇಕು" ಎಂದು ಧೈರ್ಯದಿಂದ ಬರೆದಿದ್ದ ಪತ್ರ ತನ್ನ ಕೆಲಸ ಮಾಡಿದ್ದಿತು. ಗುಮಾಸ್ತರಾಗಿ ಕೆಲಸಕ್ಕೆ ಸೇರಿದರೆ ಕನಿಷ್ಠ ಪಕ್ಷ ಅಸಿಸ್ಟೆಂಟ್ ಕಮೀಷನರ್ ಆಗಿ ನಿವೃತ್ತರಾಗಬಹುದೆನ್ನುವುದು ಬಹಳ ಪ್ರಸಿದ್ಧಿಯಲ್ಲಿದ್ದ ಮಾತು. ಅಲ್ಲಿ ಕೆಲಸಕ್ಕೆ ಸೇರಿದ ದೇ. ಜವರೇಗೌಡ ಕನ್ನಡ ಉಪನ್ಯಾಸಕರ ಹುದ್ದೆ ಸಿಗದು ಎಂದು ಕೊಂಡೇ ಮೂರು ವರ್ಷ ಕಳೆದರು. ಅನಂತರ ಪ್ಲೀಡರ್ ಪರೀಕ್ಷೆಗಳನ್ನು ತೆಗೆದುಕೊಂಡು ಪಾಸು ಮಾಡಿದರು. ಪ್ಲೀಡರ್ ಆಗಿ ಐದು ವರ್ಷಗಳ ನಂತರ ಲಾಯರ್ ಆಗುವ ಅವಕಾಶವಿತ್ತು. ಆದರೆ, ಅಷ್ಟರಲ್ಲೇ ತುಮಕೂರು - ದಾವಣಗೆರೆಯಲ್ಲಿ ಇಂಟರ್ ಮೀಡಿಯಟ್ ಕಾಲೇಜುಗಳು ಪ್ರಾರಂಭವಾಗಿ. ಎರಡು ಉಪನ್ಯಾಸಕ ಹುದ್ದೆಗಳಿಗೆ ಜಾಹಿರಾತು ಪ್ರಕಟವಾಯಿತು. ಅರ್ಜಿ ಹಾಕಿದ ಕೆಲವೇ ದಿನಗಳಲ್ಲಿ ಕೆಲಸಕ್ಕೆ ಸೇರಲು ಆದೇಶವೆ ಬಂದು ಕೈ ಸೇರಿತು! ಆದರೆ, ಪ್ರಭಾವಶಾಲಿ ಮಾನವರ ಕಾರಣದಿಂದಾಗಿ ಕೆಲಸ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲೇ

೩ ಹೋರಾಟದ ಬದುಕು, ಪು-೮೬

ಆಯಿತು, ದಾವಣಗೆರೆಗೆ ಹೋಗುವುದು ತಪ್ಪಿತು. ಒಮ್ಮೆ ಕುವೆಂಪು ಅವರು ಕಾಲೇಜಿನ ಇನ್ಸ್‌ಪೆಕ್ಷನ್‌ಗೆಂದು ಬಂದರು. ಇವರ ತರಗತಿಯಲ್ಲೇ ಕುಳಿತ ಕುವೆಂಪು ಅವರು ದೇ.ಜವರೇಗೌಡರು ಪಾಠ ಮಾಡುವ ರೀತಿಯನ್ನು ನೋಡಿದರು. ಆದರೆ, ಅವರು ಮೊದಲೇ ದೇ. ಜವರೇಗೌಡರು ಆಕಾಶವಾಣಿಯಲ್ಲಿ ಮಾಡಿದ ಕೆಲವು ಭಾಷಣಗಳನ್ನು ಕೇಳಿದ್ದರು. ಗುರುವಿನ ಮನಸ್ಸು ಶಿಷ್ಯನನ್ನು ಅರಸಿ ಬಹುಶಃ ಸಾಕಷ್ಟು ಹತ್ತಿರಕ್ಕೆ ಕರೆ ತಂದಿದ್ದಿತು. ತನ್ನನ್ನು ಅಷ್ಟು ಆರಾಧಿಸುವುದು ತಿಳಿಯದಿದ್ದರೂ ಯಾವುದೋ ಶಕ್ತಿ ಅವರನ್ನು ದೇ. ಜವರೇಗೌಡರನ್ನು ಮೈಸೂರಿಗೆ ಬರಮಾಡುವಂತೆ ಪ್ರೇರೇಪಿಸಿತು.

ಒಮ್ಮೆ ದೇ.ಜವರೇಗೌಡ ಮತ್ತು ಡಿ.ಎಲ್. ನರಸಿಂಹಾಚಾರ್ ಇಬ್ಬರೂ ಒಟ್ಟಿಗೆ ಕುವೆಂಪು ಅವರನ್ನು ಕಾಣಲು ಹೋದರು. ಇಬ್ಬರಿಗೂ ವರ್ಗಾವಣೆ ಮಾಡಿಸಿಕೊಂಡು ಮೈಸೂರಿಗೆ ಹೋಗಬೇಕೆನ್ನುವ ಆಸೆ. ಬೆಂಗಳೂರು ಇಷ್ಟವಿಲ್ಲ. ಡಿ.ಎಲ್.ಎನ್., ಕುವೆಂಪು ಅವರಲ್ಲಿ ಮಾತಾಡುತ್ತ "ನನ್ನನ್ನು ವರ್ಗ ಮಾಡುತ್ತೀರಾ?" ಎಂದು ಕೇಳಿದರು. ಆಗ ಸುಮ್ಮನೆ ನಕ್ಕ ಕುವೆಂಪು ನನ್ನ ಕಡೆ ತಿರುಗಿ "ನಿಮಗೆ ವರ್ಗ ಮಾಡಿದರೆ ಮೈಸೂರಿಗೆ ಬರುತ್ತೀರಾ?" ಎಂದು ಪ್ರಶ್ನಿಸಿದರು. ಅವರ ಪ್ರಶ್ನೆಗೆ ಮುಂಚಿತವಾಗಿಯೇ ನನ್ನ ಮನಸ್ಸಿನಲ್ಲಿ ಉತ್ತರ ಸಿದ್ಧವಾಗಿತ್ತು. ಆ ಪ್ರಶ್ನೆ ಕಿವಿದೆರೆಗೆ ಬಿದ್ದೊಡನೆಯೇ ಮನಸ್ಸು ಆನಂದದಿಂದ ತೇಲಿತು "ಆಗಲಿ ಸಾರ್" ಎಂಬೆರಡು ಬಿಡು ನುಡಿಗಳಲ್ಲಿಯೇ ನನ್ನ ಉತ್ತರ ಮುಗಿಯಿತು. ಹೀಗೆ ದೇ.ಜವರೇಗೌಡರು ಬೆಂಗಳೂರಿನಿಂದ ೧೯೪೬ರ ಬೇಸಿಗೆ ರಜ ಕಳೆಯುವುದರೊಳಗಾಗಿ ಮೈಸೂರಿಗೆ ವರ್ಗವಾದರು. ಇಂದಿಗೂ ಈ ಮಾತನ್ನು ಹೇಳುವಾಗ ದೇ. ಜವರೇಗೌಡರು ಭಾವುಕರಾಗುತ್ತಾರೆ.

೧೯೪೬ರಲ್ಲಿ ಮೈಸೂರಿಗೆ ಬಂದು ಸೇರಿದ ಅನಂತರವೇ ನಿಜವಾದ ಅರ್ಥದಲ್ಲಿ ಅವರ ವಿದ್ಯಾಭ್ಯಾಸ ಪ್ರಾರಂಭವಾದದ್ದು! ತಾವು ಓದಿದ ಮಹಾರಾಜ ಕಾಲೇಜಿನಲ್ಲೇ ಪ್ರತಿದಿನವೂ ತನ್ನ ಆರಾಧ್ಯ ದೈವ, ಗುರು ಕುವೆಂಪು ಅವರ ಜತೆ ವಾಯುವಿಹಾರಕ್ಕೆ ಹೋಗುವಾಗ ಸಾಕಷ್ಟು ಓದಿಕೊಂಡು ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತಿದ್ದಿತು. ಈ ಪಟ್ಟ ಶಿಷ್ಯನಿಗೆ ಗುರುಗಳು

ಯಾವ ಕ್ಷಣದಲ್ಲಿ ಯಾವ ಪ್ರಶ್ನೆ ಕೇಳುವರೋ, ಉತ್ತರ ಹೇಳಲು ಬರದಿದ್ದರೆ? ಎನ್ನುವ ಆತಂಕ. ಸ್ವಲ್ಪ ಪಳಗಿದ ಅನಂತರ ತಾವೇ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ಹೊರಡುವುದಿತ್ತು! "ಅವರು ನನ್ನನ್ನು ಏನಾದರೂ ಕೇಳುವ ಮುಂಚೆಯೇ ನಾನೇ ಅವರಿಗೆ ಪ್ರಶ್ನೆ ಕೇಳಿ ಬಿಡುತ್ತಿದ್ದೆ. ಯಾವ ಪ್ರಶ್ನೆಗೂ ಅವರಲ್ಲಿ ಉತ್ತರ ಇರುತ್ತಿತ್ತು. ಪ್ರೀತಿಯಿಂದ ಕಾಳಜಿಯಿಂದ ನಿಧಾನವಾಗಿ ನನ್ನ ಎಲ್ಲಾ ಪ್ರಶ್ನೆಗಳಿಗೂ ಸವಿವರವಾದ ಉತ್ತರ ಕೊಡುತ್ತಿದ್ದರು.. ನನಗೆ ಎಲ್ಲವನ್ನೂ ಹೇಳಿಕೊಡುತ್ತಿದ್ದರು. ಕಾವ್ಯ ಮೀಮಾಂಸೆ, ವಿಮರ್ಶೆ, ಅನುವಾದ ಸಾಹಿತ್ಯ ಆಂಗ್ಲ ಭಾಷಾ ಸಾಹಿತ್ಯ ಯಾವುದಾದರೂ ಸರಿ. ಇದು ದೇ. ಜವರೇಗೌಡ ಅವರಿಗೆ ತರಗತಿಯ ಹೊರಗಿನ ಪಾಠವಾಗಿತ್ತು. ಆಗ ಕಲಿತದ್ದು ಬಹಳ.. ಅಷ್ಟೇಕೆ ಅವರ ಬರವಣಿಗೆಯ ಪ್ರೂಫ್ ನೋಡಿ ನೋಡಿಯೇ ನನ್ನ ಬರವಣಿಗೆಯ ಶೈಲಿ ರೂಪು ಗೊಂಡದ್ದು. ನಾನು ಬರೆಯಲು ಅಭ್ಯಾಸ ಮಾಡಿದುದು" ಎನ್ನುತ್ತಾರೆ ದೇ.ಜವರೇಗೌಡರು.

ಕುವೆಂಪು ಅವರ ಜೊತೆಯಿಂದ ಬೇರ್ಪಡುವ ಸಂದರ್ಭಗಳು ಹಲವಾರಿದ್ದರು ಸಹಾ ಅದನ್ನೆಲ್ಲ ತ್ಯಜಿಸಿ ಅಧಿಕಾರದ ಆಸೆ, ಹೆಚ್ಚಿನ ಸಂಬಳದ ಆಸೆ, ಮುಂತಾದ ಆಮಿಷಗಳಿಗೆ ಬಲಿಯಾಗದೆ ಗುರುವಿನ ಸಾನಿಧ್ಯದಲ್ಲೆ ಇರಬೇಕೆಂಬ ಉತ್ಕಟವಾದ ಆಕಾಂಕ್ಷೆ ಹೊಂದಿದ್ದರು.

ದೇ. ಜವರೇಗೌಡ ಉಪನ್ಯಾಸಕನ ಹುದ್ದೆಯಿಂದ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗೆ ಬಡ್ತಿ ಹೊಂದುವುದು ಬಾಕಿ ಇದ್ದಿತು. ಆಗ ಕುವೆಂಪು ಕುಲಪತಿಗಳಾಗಿದ್ದರು. ಮಿತ್ರರೊಬ್ಬರು ದೇ.ಜವರೇಗೌಡರ ಪರವಾಗಿ ಅಹವಾಲು ಸಲ್ಲಿಸಲು ಕುವೆಂಪು ಬಳಿಗೆ ಅವರನ್ನು ಕರೆದೊಯ್ದರು. ಮಿತ್ರನ ಕಾಳಜಿ ಕೇಳಿ ಕುವೆಂಪು "ನಿಮಗಿಂತ ಸೀನಿಯರ್ ಯಾರೂ ಇಲ್ಲವೇ?" ಎಂದರು ದೇ. ಜವರೇಗೌಡರವರಿಗೆ. "ರಾಜರತ್ನಂ ಇದ್ದಾರೆ" ಎಂದರು ಇವರು ಮತ್ತೆ? ಅವರು ಇರುವಾಗ ನೀವು ಆಗಬಹುದೇ?" ಎಂದರು ಗುರುಗಳು. ಶಿಷ್ಯನಿಗೆ ನೋವಾಗಲಿಲ್ಲ, ಬದಲು ಖುಷಿಯಾಯಿತು. "ನಾನು ಬರಲಿಲ್ಲ ಮಿತ್ರರು ಒತ್ತಾಯ ಮಾಡಿ ನನ್ನನ್ನು ಇಲ್ಲಿಗೆ ಕರೆತಂದರು!" ಎಂದರು. ಗುರುವಿಗೂ ತೃಪ್ತಿಯಾಗಿದ್ದಿತು ಆಗ! ನಂತರ ದೇ.ಜವರೇಗೌಡರು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾಗಿ ಅಲ್ಲಿಗೆ

[illegible]

ಹೋದರು. ಅಲ್ಲಿನ ಕಾಲೇಜಿನ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾಗಲೇ ೧೯೬೦ರಲ್ಲಿ ರೀಡರಾಗಿ ನೇಮಕಗೊಂಡು ಮತ್ತೆ ಮೈಸೂರು ಸೇರಿದರು. ಶ್ರೀ ಜಿ.ಪಿ.ರಾಜರತ್ನಂರು ಪ್ರೊಫೆಸರ್ ಆದ ನಂತರ. ಒಂದು ಜಾಗ ಖಾಲಿಯಾದರೂ ದೇ.ಜವರೇಗೌಡರು ಈ ಸಾರಿ ಗುರುಗಳ ಬಳಿಗೆ ಹೋಗಲಿಲ್ಲ. ಗುರುಗಳು ತಾವೇ ಎಲ್ಲ ವ್ಯವಸ್ಥೆ ಮಾಡಿದರು. ಕೆಂಗಲ್ ಹನುಮಂತಯ್ಯನವರು ಮಂಜೂರು ಮಾಡಿದರು. ದೇ.ಜವರೇಗೌಡ ಅಸಿಸ್ಟೆಂಟ್ ಪ್ರೊಫೆಸರಾದರು. ಪ್ರೊಫೆಸರ್ ಆಗಬೇಕಿದ್ದ ಸಮಯದಲ್ಲಿ ಕುವೆಂಪು ಅವರು ನಿವೃತ್ತರಾಗಿ ಅವರ ಜಾಗಕ್ಕೆ ರಾಜಾಸ್ಥಾನದ ಶ್ರೀಮಾಲಿ ಎನ್ನುವವರು ಬಂದರು. ೧೯೬೪ರಲ್ಲಿ ದೇ. ಜವರೇಗೌಡ ಪ್ರೊಫೆಸರಾದರು! ಕನ್ನಡ ವಿಭಾಗದ ಮುಖ್ಯಸ್ಥರೂ ಆದರು.

ದೇ.ಜವರೇಗೌಡ ಅವರಿಗೂ ಶ್ರೀಮಾಲಿಯವರಲ್ಲಿ ಮೂರನೆಯವರು ಮನಃಸ್ತಾಪ ವುಂಟಾಗುವಂತೆ ಮಾಡಿದರು. ಆದರೆ ಒಮ್ಮೆ ದೇ.ಜವರೇಗೌಡರು ತೋರಿದ ವಿವೇಕ ಓರಿತನ ಜಾಣ್ಮೆಯಿಂದ ಕುಲಪತಿಗಳು ವಿಪತ್ತಿನಿಂದ ಪಾರಾದರು. ಜೊತೆಗೆ ದೇ.ಜವರೇಗೌಡರ ಮೇಲಿನ ಅವರ ಅನುಮಾನಗಳು ಸಂಪೂರ್ಣವಾಗಿ ಪರಿಹಾರವಾಗಿ ನಂಬಿಕೆ ಪ್ರೀತಿ ವಿಶ್ವಾಸ ಅಮಿತವಾಗಿ ಬೆಳೆದವು.

ದೇ.ಜವರೇಗೌಡ ಅವರದು ಒಂದೇ ಕನಸು. ಅದು ಕನ್ನಡ ಅಧ್ಯಯನ ಸಂಸ್ಥೆಯದು. ತಮ್ಮನ್ನು ಸಂಕಟದಿಂದ ಪಾರು ಮಾಡಿದ ದೇ.ಜವರೇಗೌಡ ಅವರಿಗೆ ಶ್ರೀಮಾಲಿಯವರು ಮೆಚ್ಚುಗೆಯಿಂದ ಉದಾರವಾಗಿ ಧನ ಸಹಾಯ ಒದಗುವಂತೆ ಮಾಡಿ ಅಂತೂ ೧೯೬೬ರಲ್ಲಿ ದೇ.ಜವರೇಗೌಡ ಅವರ ಕನಸಿನ ಕೂಸು "ಕನ್ನಡ ಅಧ್ಯಯನ ಸಂಸ್ಥೆಯು" ಜನ್ಮ ತಳೆಯುವಂತೆ ಮಾಡಿದರು. ಅಲ್ಲಿಂದ ಕುಲಪತಿಗಳ - ದೇ.ಜವರೇಗೌಡರ ಸ್ನೇಹ ಪೂರ್ತಿ ಮಧುರವೇ ಆದದ್ದು. ಅನಂತರ ಶ್ರೀಮಾಲಿಯ ನಂತರವೇ ದೇ.ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದರು.

ದೇ.ಜವರೇಗೌಡ ಅವರಿಗೆ ಕುಲಪತಿಯಾಗಬೇಕೆಂಬ ಆಸೆಯೇನೂ ಇರಲಿಲ್ಲ ಅದು ಅವರಿಗೆ ತಾನಾಗಿಯೇ ಒಲಿದು ಬಂದದ್ದು. ಅವರ ಕನಸಿನ ಕೂಸಾದ ಕನ್ನಡ ಅಧ್ಯಯನ ಸಂಸ್ಥೆಗೆ ಸರ್ಕಾರದಿಂದ ಒಂದು ಕೋಟಿ ರೂಪಾಯಿಯನ್ನು ಮಂಜೂರು ಮಾಡಿಸಿ. ಆ ಸಂಸ್ಥೆಯನ್ನು ಚೆನ್ನಾಗಿ ಬೆಳೆಸಬೇಕು ಎನ್ನುವುದೇ ತೀವ್ರ ಹಂಬಲವಾಗಿದ್ದಿತು. ಆದರೆ, ಪರಿಸ್ಥಿತಿ ಅಷ್ಟು ಸುಲಭವಾಗಿ ತಳ್ಳಿ ಹಾಕುವಂತಿರಲಿಲ್ಲ. ೧೯೬೬ರಲ್ಲಿ ದೇ.ಜವರೇಗೌಡ ಕುಲಪತಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಏಳಿಗೆಗೆ ಟೊಂಕ ಕಟ್ಟಿ ನಿಲ್ಲಲ್ಲೇ ಬೇಕಾಯಿತು.

ಕುಲಪತಿಯ ಪೀಠದಲ್ಲಿ

ದೇ.ಜವರೇಗೌಡ ಅವರು ಕುಲಪತಿಗಳಾದ ಅನಂತರ ಸಾಧನೆಯ ಹಾದಿಯಲ್ಲಿ ಹಲವಾರು ಮೈಲುಗಲ್ಲುಗಳು. ಅದರಲ್ಲೂ ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಸ್ವರ್ಣಾಧ್ಯಾಯಗಳು ಸೇರ್ಪಡೆಯಾಗಲು ಕಾರಣವಾಯಿತೆನ್ನಬಹುದು. ಕುವೆಂಪು ಅವರು ಮೊದಲು ಕನ್ನಡ ಕುಲಪತಿಗಳಾಗಿ ಮಾನಸಗಂಗೋತ್ರಿ ಸ್ಥಾಪನೆಗೆ ಕಾರಣರಾದರೆ, ಮಾನಸಗಂಗೋತ್ರಿಯನ್ನು ಬಹುಮುಖವಾಗಿ ಬೆಳೆಸಿದ ಕೀರ್ತಿ ದೇ.ಜವರೇಗೌಡ ಅವರದಾಯಿತು. ಮಾನಸಗಂಗೋತ್ರಿಯಲ್ಲಿ ಆಗ ಕಲಿಯಲು ಇದ್ದುದು ಕೇವಲ ೨೪ ವಿಷಯಗಳು ಮಾತ್ರ. ದೇ.ಜವರೇಗೌಡರು ನಿಧಾನವಾಗಿ ಆಂಥ್ರೋಪಾಲಜಿ, ಕ್ರಿಮಿನಾಲಜಿ, ಹೋಂ ನ್ಯೂಟ್ರಿಷನ್, ಹೋಂಸೈನ್ಸ್, ಲಾ, ಜಾನಪದ, ಜರ್ನಲಿಸಂ ನ್ನು (ಐಚ್ಛಿಕ ವಿಷಯಗಳಾಗಿದ್ದರೂ ಸ್ನಾತಕೋತ್ತರ ಪದವಿಗೆ ಕಲಿಯಲು ಆ ವಿಷಯಗಳು ಇರಲಿಲ್ಲ)ಪರಿಚಯಿಸಿದರು. ಸಂಖ್ಯೆ ಹೀಗೆ ಬೆಳೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮದಲ್ಲಿನ ವಿಷಯಗಳ ಸಂಖ್ಯೆ ೨೪ ರಿಂದ ೪೮ಕ್ಕೇರಿತು. ಕನ್ನಡ ಅಧ್ಯಯನ ಸಂಸ್ಥೆಯ ಕಟ್ಟಡ ದೊಡ್ಡದಾಗಿ ನೂರಕ್ಕೂ ಹೆಚ್ಚು ಮಂದಿ ಕೆಲಸ ಮಾಡುವಂತಾಯಿತು. ಅಲ್ಲಿ ನಡೆಯಬೇಕಾದ ಕೆಲಸಕಾರ್ಯಗಳ ರೂಪರೇಷೆಗಳು ದೇಜಗೌಡ ದೂರದೃಷ್ಟಿಗೆ ಆದಾಗಲೇ ಗೋಚರಿಸಿದ್ದಿತಾಗಿ, ಇಂದಿಗೂ ಅವು ಅವ್ಯಾಹತವಾಗಿ ನಡೆದೇ ಇವೆ. ಜತೆ ಜತೆಗೇ ತಮ್ಮ ಗುರು ಕುವೆಂಪು ಅವರ ಹಸಿರು ಗಂಗೋತ್ರಿಯ ಕನಸನ್ನು

ಸರ್ವಾಂಗ ಸುಂದರವಾಗಿ ಮೈತಾಳಿಸಿದ ಶ್ರೇಯವೂ ದೇ.ಜವರೇಗೌಡ ಅವರದ್ದೇ. ಗಂಗೋತ್ರಿಯ ಸುತ್ತಮುತ್ತ ಹಣ್ಣು, ಹೂಗಳ ಮರಗಳು ತಲೆಎತ್ತಿದವು. ಮುದ್ರಣಾಲಯ ಹಾಗೂ ಪ್ರಸಾರಾಂಗವೂ ಅಕ್ಕಪಕ್ಕದಲ್ಲಿದ್ದು ಅವುಗಳಿಗೆ ಸ್ವತಂತ್ರ ಕಟ್ಟಡವೂ ಇರಬೇಕೆಂದು ಸಂಕಲ್ಪಿಸಿ, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ದೇ.ಜವರೇಗೌಡ ಬಹಳವಾಗಿಯೇ ಶ್ರಮಿಸಿದರು. ಜಾನಪದ ವಸ್ತು ಸಂಗ್ರಹಾಲಯದ ಅಸ್ತಿತ್ವಕ್ಕೂ ಅವರೇ ಕಾರಣಕರ್ತರು. ಅಲ್ಲಿ ಅವರ ಶ್ರೀಮತಿಯವರ ಹಳೆಯ ಕಾಲದ ಒಡವೆಗಳೂ ಪ್ರದರ್ಶಿತವಾಗಿರುವುದು ಆ ದಂಪತಿಗಳ ಕಾರ್ಯಶ್ರದ್ಧೆಗೆ ಹಿಡಿದ ಕನ್ನಡಿ. ಅಂಚೆ ತೆರಪಿನ ಶಿಕ್ಷಣ ಸಂಸ್ಥೆಯನ್ನು ಅಭಿವೃದ್ಧಿಪಡಿಸಿ ಸಿದ್ಧಪಾಠವೂ, ಸಿದ್ಧ ತರಗತಿಗಳ ಲಾಭವೂ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಸಿಗುವಂತೆ ಮಾಡಿದುದೂ ಒಂದು ಸಾಧನೆಯೇ! ಶಿಕ್ಷಣದಿಂದ ವಂಚಿತರಾದವರಿಗೆ ಅದರ ಲಾಭವನ್ನು ಒದಗಿಸಲು ಡಿಪ್ಲೊಮಾ ತರಗತಿಗಳ ಪ್ರಾರಂಭಕ್ಕೆ ಪ್ರೇರಕ ಶಕ್ತಿಯಾದವರು ದೇ.ಜವರೇಗೌಡರು ವಿದ್ಯಾರ್ಥಿಗಳಿಗೆ ತೋಟಗಾರಿಕೆ-ಗ್ರಂಥಾಲಯ-ಮುದ್ರಣಾಲಯ ಮುಂತಾದ ಕಡೆಗಳಲ್ಲಿ ಕಲಿತು ಗಳಿಕೆ ಯೋಜನೆಯಿಂದ ದಿನಕ್ಕೆ ಎರಡು ಗಂಟೆಗಳ ಕೆಲಸ ಕೊಟ್ಟು, ವ್ಯಾಸಂಗದ ಸಮಯದಲ್ಲಿ ಆರ್ಥಿಕವಾಗಿಯೂ ಸ್ವಾವಲಂಬಿಯಾಗಲು ಪ್ರೇರೇಪಿಸಿದರು. ಕುಲಪತಿ ದೇ. ಜವರೇಗೌಡರಿಂದಾಗಿ ಕನ್ನಡ ವಿಶ್ವಕೋಶದ ಕೆಲಸ ಕನ್ನಡ ಅಧ್ಯಯನ ಸಂಸ್ಥೆಗೆ ದೊರಕಿತು. ಅದರಲ್ಲೂ ಮುಖ್ಯವಾಗಿ ಶ್ರೀ ಕೆ.ವಿ. ಶಂಕರೇಗೌಡರ ವಿನಂತಿಯಂತೆ ಕಾರ್ಯ ಪ್ರವೃತ್ತರಾದ ದೇ.ಜವರೇಗೌಡರು ವಿಶ್ವಕೋಶಕ್ಕೆ ಸಂಬಂಧಿಸಿದ ಕಾಗದ ಪತ್ರಗಳ ಕಟ್ಟುಗಳು. ಪೀಠೋಪಕರಣಗಳು ಎಲ್ಲವನ್ನೂ (ಬೆಂಗಳೂರಿನಿಂದ ಮೈಸೂರಿಗೆ) ತಾವೇ ಸ್ವಯಂ ಎತ್ತಿ ತಾವು ತಂದಿದ್ದ ಲಾರಿಯಲ್ಲಿ ಹೇರಿಕೊಂಡು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಗೆ ಸಾಗಿಸಿ ತಂದರು. ಅವರ ಉತ್ಸಾಹ ಕಾರ್ಯತತ್ಪರತೆಯಿಂದಾಗಿ ೧೩ ಸಂಪುಟಗಳ ಸಾಮಾನ್ಯ ವಿಶ್ವಕೋಶದೊಂದಿಗೆ ೩೨ ಸಂಪುಟಗಳ 'ವಿಷಯವಿಶ್ವಕೋಶ' ರಚನೆಯೂ ಆಯಿತು.

ದೇ. ಜವರೇಗೌಡ ಉಪಕುಲಪತಿಗಳಾದ ಕೂಡಲೆ ಮಾಡಿದ ಕೆಲಸವೆಂದರೆ ನಾಡಿನ

ಹೆಸರಾಂತ ಹಿರಿಯ ಸಾಹಿತಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿಯನ್ನು ದೊರಕಿಸಿದ್ದು! ಹಾಗೆ ಪುರಸ್ಕೃತರಾದವರಲ್ಲಿ ಮೊದಲಿಗರು ಕನ್ನಡ ಸಾಹಿತ್ಯ ಏಳಿಗೆಗಾಗಿ ಅನೇಕ ವರ್ಷಗಳ ಕಾಲ ಶ್ರಮಿಸುತ್ತ 'ಕಾದಂಬರಿ ಸಾರ್ವಭೌಮ' ಎಂಬ ಬಿರುದಾಂಕಿತರಾಗಿದ್ದ ಅ.ನ.ಕೃ. ಅವರು. ಹೀಗೆ ಅನೇಕ ಸಾಧನೆಗಳನ್ನು ಮಾಡಿದ ದೇ. ಜವರೇಗೌಡ ಎರಡು ಅವಧಿಯ ಕುಲಪತಿ ಸೇವೆಯ ಅನಂತರ ಅಧ್ಯಯನ ಸಂಸ್ಥೆಗೆ ಪ್ರಾಧ್ಯಾಪಕರಾಗಿ ಬಂದರು. ಅಲ್ಲಿಯೂ ಅವರ ಕನ್ನಡ ನಾಡು-ನುಡಿಯ ಕೆಲಸ ನಿರಂತರವಾಗಿ ಸಾಗಿತು. ದೇ. ಜವರೇಗೌಡರು ಪ್ರಸಾರಾಂಗದ ನಿರ್ದೇಶಕರಾಗಿಯೂ ದುಡಿದು ಅಲ್ಲಿನ ಕೆಲಸ ಕಾರ್ಯಗಳನ್ನು ಉದ್ದೇಶಿತ ಗುರಿಯತ್ತ ನಡೆಸುವಲ್ಲಿ ಸಾಕಷ್ಟು ಶ್ರಮ ವಹಿಸಿದರು.

ದೇ. ಜವರೇಗೌಡ ಅವರದು ಹೋರಾಟದ ಬದುಕು-ಇಂದಿಗೂ ದುಡಿ-ದುಡಿದು ದಣಿಯದ ಆದರ್ಶ ಜೀವ. ಯುವಕರೂ ನಾಚುವಂತಹ ಜೀವನೋತ್ಸಾಹ, ಕಾರ್ಯತತ್ಪರತೆ, ಹಿಡಿದ ಕಾರ್ಯ ಬಿಡದೆ ಸಾಧಿಸುವ ಛಲ. ಹೊಸತೇನನ್ನಾದರೂ ಮಾಡಬೇಕೆನ್ನುವ ತುಡಿತ! ಅವರ ಕನ್ನಡ ಪರ ಹೋರಾಟಗಳು ಅವರ ಆ ಎಲ್ಲ ಗುಣಗಳ ಫಲಶ್ರುತಿ.

"ಇವರು ಕುಲಪತಿಗಳಾದಾಗ ಕನ್ನಡ ಬೆಳವಣಿಗೆಯ ದೃಷ್ಟಿಯಿಂದ ನಾವು ಕಾಮಧೇನುವನ್ನು ಕಲ್ಪವೃಕ್ಷಕ್ಕೆ ಕಟ್ಟಿದಂತಾಯಿತು ಎಂದೇ ಭಾವಿಸಿದೆವು!" ಎಂದು ಉದ್ಗರಿಸಿರುವ ಪ್ರೊ. ಪ್ರಭುಶಂಕರರ ಮಾತು ದೇ. ಜವರೇಗೌಡ ಕೇವಲ ಮಾತಿನಲ್ಲಲ್ಲ, ಕಾರ್ಯ ಕೌಶಲವೀರರೂ ಹೌದು ಎನ್ನುವುದನ್ನು ಸತ್ಯವಾಗಿಸುತ್ತದೆ.

ದೇ. ಜವರೇಗೌಡ ಸಾಹಿತ್ಯ ಕ್ಷೇತ್ರ(ಸೇವೆ) ವನ್ನು ಪ್ರವೇಶಿಸಿದ್ದು ಮೊದಲು ಕವನಗಳ ಮೂಲಕ. ೧೯೪೮ ರಲ್ಲಿ "ನೆನಪು ಕಹಿಯಲ್ಲ" ಎನ್ನುವ ತಮ್ಮ ಮೊದಲ ಕೃತಿಯನ್ನು ಪ್ರಕಟಿಸಿದರು. ಹಲವಾರು ಲೇಖನಗಳನ್ನು ಬರೆದರು. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೈಯಾಡಿಸಿದರು. ಸಂಶೋಧನೆ, ವಿಮರ್ಶೆ, ಸಂಪಾದನೆ, ಶಿಕ್ಷಣ, ಸಾಹಿತ್ಯ ಪ್ರಬಂಧ, ಹರಟೆ, ಐತಿಹಾಸಿಕ ಕಾದಂಬರಿಗಳು,

ಅನುವಾದ, ಆತ್ಮಕತೆ, ಪತ್ರ ಸಾಹಿತ್ಯ ಪ್ರವಾಸ ಸಾಹಿತ್ಯ ಜನಪದ ಸಾಹಿತ್ಯ ಜೀವನ ಚರಿತ್ರೆಗಳು, ಮಕ್ಕಳ ಸಾಹಿತ್ಯ .... ಹೀಗೇ ಪಟ್ಟಿ ಬೆಳೆಯುತ್ತದೆ. ಅವರು ಪ್ರಯತ್ನಿಸದೆ ಬಿಟ್ಟ ಪ್ರಾಕಾರವಿಲ್ಲ. ಕನ್ನಡ ಸಾಹಿತ್ಯದಲ್ಲಿ ಅವರ ಗದ್ಯಶೈಲಿ ವಿಶಿಷ್ಟವಾದುದು.

ಅದಕ್ಕೇ ಅವರನ್ನು 'ಗದ್ಯಶಿಲ್ಪಿ' ಎಂದು ಅಭಿಮಾನದಿಂದ ಕನ್ನಡಿಗರು ಕರೆದಿರುವುದು. ಅವರ ಸಾಹಿತ್ಯವನ್ನು ಸ್ಥೂಲವಾಗಿ ಹೀಗೆ ವಿಭಾಗಿಸಬಹುದು :

೧. ವೈಚಾರಿಕ ಕೃತಿಗಳು

೨. ಮುನ್ನುಡಿ, ಪ್ರಸ್ತಾವನೆ, ಸಂದರ್ಶನಗಳು

೩. ಭಾಷಣಗಳು, ಲೇಖನಗಳು, ಪತ್ರಗಳು, ಸಂಪಾದನೆ

೪. ಜೀವನ ಚರಿತ್ರೆಗಳು - ಆತ್ಮಕಥೆ.

ದೇ. ಜವರೇಗೌಡ ಅವರ ಸಾಹಿತ್ಯರಚನೆಯಲ್ಲೆಲ್ಲಾ ಅವರಿಗೆ ಪರಮ ಪ್ರೀತಿಯಾದುದು ತಮ್ಮ ಗುರುಗಳಾದ ರಾಷ್ಟ್ರಕವಿ ಕುವೆಂಪು ಅವರನ್ನು ಕುರಿತು ಬರೆದಿರುವ ಕೃತಿಗಳು.

ಕುವೆಂಪು ಸಾಹಿತ್ಯದ ಅಧ್ಯಯನಕ್ಕೆ ತೊಡುಗುವ ವಿದ್ವಾಂಸರು ಮೊದಲು ದೇ. ಜವರೇಗೌಡ ಅವರು ಬರೆದಿರುವ ವ್ಯಾಖ್ಯಾನ-ವಿಮರ್ಶೆಗಳನ್ನು ನೋಡದೆ ಮುಂದಕ್ಕೆ ಸಾಗುವಂತಿಲ್ಲ, ಎಂಬಷ್ಟು ಮಹತ್ವದ ಗ್ರಂಥಗಳನ್ನು ಅವರು ಬರೆದಿದ್ದಾರೆ. ಏಕೆಂದರೆ, ದೇ. ಜವರೇಗೌಡ ಕುವೆಂಪು ಅವರ ಅಂತರಂಗದ ಶಿಷ್ಯರು. ಅವರ ಕೃತಿ ಶ್ರೇಣಿಯಲ್ಲಿ ಕೇವಲ ಕೆಲವನ್ನು ಮಾತ್ರ ಇಲ್ಲಿ ಪರಿಚಯ ಮಾಡಿಕೊಳ್ಳಬಹುದು.

ದೇ. ಜವರೇಗೌಡ ಅವರ 'ಸಾಹಿತಿಯ ಸಾಮಾಜಿಕ ಬದ್ಧತೆ' ಕೃತಿಯಲ್ಲಿ ಇಂಥದೇ ಸಾಹಿತ್ಯದ ವಸ್ತುವಾಗಬೇಕೆಂದಿಲ್ಲ. ತನಗೆ ಹೇಗೆ ರುಚಿಸುತ್ತದೆಯೋ ಹಾಗೆ ವಿಶ್ವವನ್ನು ರೂಪಾಂತರಗೊಳಿಸಿಕೊಳ್ಳುವ ಸ್ವಾತಂತ್ರ್ಯ ಸಾಹಿತಿಗೆ ಇದೆ. "ದೇಶ ದೊಡ್ಡದಾಗಬೇಕು. ಬದುಕು ಹಸನಾಗಬೇಕು. ಜನ ಬೆಳೆಯಬೇಕು ಎಂಬ ಕಳಕಳಿ ಪ್ರತಿಯೊಬ್ಬ ಸಾಹಿತಿಗೂ ಇರಬೇಕು"

ಎಂದಿದ್ದಾರೆ. ಸಾಹಿತಿಯನ್ನು ಆ ಬಗ್ಗೆ ಎಚ್ಚರಿಸುತ್ತಾರೆ.

'ಪ್ರತಿಧ್ವನಿಃ ಯುಗೇ ಯುಗೇ ಸಂಭವಾಮಿ' ಹಲವರ ಮೆಚ್ಚುಗೆ ಗಳಿಸಿರುವ ಕೃತಿ. ಸಾಹಿತ್ಯಕ್ಷೇತ್ರದಲ್ಲಿ ತೊಡಗಿಸಿ ಕೊಂಡಿರುವವರ ಹೃದಯ ಮೂಲದಲ್ಲಿ ಸಲ್ಲದ ವಿಚಾರಗಳು ತುಂಬಿರುವ ಚಿತ್ರ ತೆಗೆದಿಟ್ಟಿದ್ದಾರೆ ಇಲ್ಲಿ ದೇ. ಜವರೇಗೌಡ.

'ವಚನಗಳ ವೈಚಾರಿಕತೆ' ಕೃತಿಯಲ್ಲಿ ಚಿಂತನೆಯ ಆಳಕ್ಕಿಳಿದು ಅಗೋಚರವಾಗಿರುವ ಅನೇಕ ಉತ್ತಮ ಅಂಶಗಳನ್ನು ಹೊರತೆಗೆದು ಓದುಗರ ಮುಂದಿಡುತ್ತಾರೆ. ಅವರ ಆ ಶ್ರಮದ ಉದ್ದೇಶ ಹೃದಯದಾಳದಲ್ಲಿರುವ ಸುಪ್ತ ಸ್ಥಿತಿಯ ಪ್ರೀತಿ-ಪ್ರೇಮ, ಸಮಾನತೆ, ಮಾನವೀಯ ಗುಣಗಳನ್ನು ತಟ್ಟಿ ಎಬ್ಬಿಸುವುದು!

ಆತ್ಮಕಥೆಗಳಾದ 'ನೆನಪಿನ ಬುತ್ತಿ', 'ಹೋರಾಟದ ಬದುಕು', 'ನನ್ನ ಉಪವಾಸದ ಕಥೆ', 'ಕುಲಪತಿಯ ದಿನಚರಿ' ಇವುಗಳು ಅವರ ಬದುಕಿನ ಹೋರಾಟದ ನೈಜ ಚಿತ್ರಣವನ್ನು ಬಿಂಬಿಸುತ್ತವೆ. ಅವರು ಬದುಕನ್ನು ಎದುರಿಸಿದ ರೀತಿ ಆ ಸವಾಲುಗಳನ್ನು ಗೆದ್ದು ಮುಂದುವರೆದ ನಿರ್ಭೀತ ಚೇತನದ ಅನಾವರಣ ಮಾಡುತ್ತವೆ.

ದೇ. ಜವರೇಗೌಡ ರಾಷ್ಟ್ರಕವಿ ಕುವೆಂಪು ಅವರನ್ನು ಸಂದರ್ಶಿಸಿ ನೀಡಿರುವ 'ರಾಷ್ಟ್ರಕವಿ ಸಂದರ್ಶನ' ಒಂದು ಅತ್ಯಪೂರ್ವಕೃತಿ ಎನ್ನಬಹುದು. "ಅಲ್ಲಿ ಆಧ್ಯಾತ್ಮ -ವಿಜ್ಞಾನಗಳು ಜತೆಜತೆಯಾಗಿ ಬಂದಿವೆ. ಭಾರತೀಯ ದರ್ಶನವಿದೆ. ವ್ಯಕ್ತಿ ಮುಕ್ತನಾಗಲು ವಿಶ್ವಮಾನವನಾಗಲು ಅನುಸರಿಸಬೇಕಾದ ವಿಕಾಸತತ್ತ್ವ ವಿಚಾರಗಳು. ಮಾರ್ಗಗಳು ಸ್ಫುಟವಾಗಿ ಗೋಚರಿಸುತ್ತದೆ" ಎಂದಿದ್ದಾರೆ ಖ್ಯಾತ ವಿಮರ್ಶಕರೊಬ್ಬರು.

ಅವರ 'ಗದ್ಯಶೈಲಿ' ಕೃತಿ ವಿಶಿಷ್ಟ ಸ್ಥಾನಗಳಿಸಿರುವಂತಹದು. ಗದ್ಯ ಸಾಹಿತ್ಯದ ಅನೇಕ ಮುಖಗಳ ದರ್ಶನ. ಅದರ ಗುಣ-ದೋಷಗಳು ಅಲ್ಲಿ ಕಾಣಸಿಗುತ್ತದೆ. ಹಲ್ಮಿಡಿ ಶಾಸನ ಕಾಲದಿಂದ

ಇದುವರೆಗೂ ಸಾಗಿ ಬಂದ ಕನ್ನಡ ಗದ್ಯರೂಪಗಳ ಸ್ವರೂಪದರ್ಶನ ಮಾಡಿಸಿದ್ದಾರೆ ದೇ. ಜವರೇಗೌಡ ಅಲ್ಲಿ.

'ತುಡಿತ' ಒಂದು ವಿಶೇಷ ಗ್ರಂಥ, ಮಗಳಿಗೆ ತಂದೆ ಬರೆದ ಪತ್ರಗಳ ಸಂಕಲನ ಕೃತಿ ಇದು. ಈ ಕೃತಿ ನೆಹರು ತಮ್ಮ ಮಗಳು ಇಂದಿರಾಗೆ ಬರೆದ ಪತ್ರಗಳನ್ನು ನೆನಪಿಗೆ ತರುತ್ತವೆ. ಈ ಪತ್ರಗಳಲ್ಲಿ ದೇ. ಜವರೇಗೌಡರ ತೃಪ್ತ ಸುಖೀ ಕೌಟುಂಬಿಕ ಚಿತ್ರ ಕಣ್ಣಿಗೆ ಕಟ್ಟುವಂತಿದೆ.

"ನಾಗರಾಜನ ಪುಣ್ಯಾಸ್ರವ" ದೇ. ಜವರೇಗೌಡ ಸಂಪಾದನಾ ಕೃತಿ. ಈ ಕೃತಿಯಲ್ಲಿ ಹಂಚಿಹೋಗಿದ್ದ ಹಸ್ತಪ್ರತಿಗಳನ್ನು ಒಂದೆಡೆ ಸೇರಿಸಿ ವಿಮರ್ಶಾತ್ಮಕವಾಗಿ ಸಂಪಾದನೆ ಮಾಡಿ ಕವಿ, ಕಾಲ, ದೇಶ, ವಿಚಾರ, ಕಥಾಸಾರ, ಕಾವ್ಯವಿಮರ್ಶೆ ಎಲ್ಲವೂ ಅರ್ಥಪೂರ್ಣವಾಗಿ ಒಂದನ್ನೊಂದು ಅನುಸರಿಸಿಕೊಂಡು ಬರುವಂತೆ ಮಾಡಿರುವುದೇ ವಿಶೇಷ.

ಪ್ರವಾಸ ಸಾಹಿತ್ಯಕ್ಷೇತ್ರಕ್ಕೆ ದೇ. ಜವರೇಗೌಡರು ನೀಡಿರುವ ಕಾಣಿಕೆ ಅಪಾರ. ತಾವು ಪ್ರವಾಸ ಮಾಡಿದ ಪ್ರತಿಯೊಂದು ದೇಶದ ಅಂತರಂಗ-ಬಹಿರಂಗಗಳನ್ನು, ಅಲ್ಲಿನ ಸಂಸ್ಕೃತಿ-ನಾಗರಿಕತೆಗಳ ಚಿತ್ರಣದ ಮೂಲಕ ಓದುಗರಿಗೆ ಪರಿಚಯಿಸಿದ್ದಾರೆ. ಇಲ್ಲಿ ನಾವು ಮುಖ್ಯವಾಗಿ ಕಾಣುವುದು ವಿದೇಶೀ ಶೈಕ್ಷಣಿಕ ವ್ಯವಸ್ಥೆಯ ಪರಿಚಯ. ಅಲ್ಲಿನ ಶಿಕ್ಷಣ ಕ್ರಮ ಅಲ್ಲಿನ ವಿದ್ಯಾರ್ಥಿಗಳನ್ನು ರೂಪಿಸಿರುವ ರೀತಿಯನ್ನು ತಿಳಿಸುತ್ತಾ ನಮ್ಮ ದೇಶದಲ್ಲೇಕೆ ಆ ರೀತಿಯ ವ್ಯವಸ್ಥೆ ಇಲ್ಲ ಎಂದು ಪರಿತಪಿಸುತ್ತಾರೆ.

'ಅನುವಾದದ ಆಚಾರ್ಯ' ಎನಿಸಿರುವ ದೇ. ಜವರೇಗೌಡ ಬೇರೆ ಬೇರೆ ಭಾಷೆಯ ಸಾಹಿತ್ಯವನ್ನು ಕನ್ನಡಕ್ಕೆ ತಂದು ತಮ್ಮ ಅನುವಾದದ ದೈತ್ಯಶಕ್ತಿಯನ್ನು ಮೆರೆದಿದ್ದಾರೆ. ಟಾಲ್‌ಸ್ಟಾಯ್‌ನ 'ವಾರ್ ಅಂಡ್ ಪೀಸ್', 'ರಿಸರೆಕ್ಷನ್', 'ಆನಾಕರೆನಿನಾ' ಜೇನ್ ಆಸ್ಟಿನಳ 'ಪ್ರೈಡ್ ಅಂಡ್ ಪ್ರಿಜುಡಿಸ್' ಇವು ದೇ.ಜವರೇಗೌಡರ ಕನ್ನಡ ಅನುವಾದ ಸಾಮರ್ಥ್ಯವನ್ನು ತೋರಿಸುತ್ತವೆ. 'ನೆನಪು ಕಹಿಯಲ್ಲ'

[illegible]

(ಜವಾಹರಲಾಲ್ ನೆಹರು ಅವರ ತಂಗಿ ಕೃಷ್ಣಹರೇಸಿಂಗ್‌ರ 'ವಿತ್ ನೋ ರಿಗ್ರೆಟ್ಸ್') ದಿಂದ ಪ್ರಾರಂಭವಾದ ಉದ್ದಕ್ಕೂ ಪ್ರತಿಬಿಂಬಿಸಿ ಓದುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ.

ಒಟ್ಟಾರೆ ದೇ. ಜವರೇಗೌಡ ಸೃಷ್ಟಿಸಿದ ಸಾಹಿತ್ಯ ಪ್ರಪಂಚ ಅತ್ಯಂತ ವಿಶಾಲವಾದುದಾಗಿದೆ.

ಪ್ರಶಸ್ತಿಗಳು

ದೇ. ಜವರೇಗೌಡ ಅವರ ಅವಿರತ ಸಾಹಿತ್ಯ ಸೇವೆಗಾಗಿ ವಿವಿಧ ಪ್ರಶಸ್ತಿಗಳ ಸರಮಾಲೆಯು ಅವರ ಕೊರಳನ್ನು ಅಲಂಕರಿಸಿವೆ. ರಾಜ್ಯ ಸಾಹಿತ್ಯದ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ, ಸೋವಿಯತ್ ಲ್ಯಾಂಡ್, ನೆಹರು ಪ್ರಶಸ್ತಿಗಳು, ಮೈಸೂರು ಮತ್ತು ಕರ್ನಾಟಕ ವಿ.ವಿ. ಗೌರವ ಡಾಕ್ಟರೇಟ್, ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ. ಜೀಶಂಪ ಟ್ರಸ್ಟ್ ಜಾನಪದಶ್ರೀ, ಕಾವ್ಯಾನಂದ, ಶ್ರೀ ಲಕ್ಕೇಗೌಡ ಶೈಕ್ಷಣಿಕ. ಚಿದಾನಂದ, ಬಸವಶ್ರೀ ಮತ್ತು ಅಲ್ಲಮ ಶ್ರೀ ಪ್ರಶಸ್ತಿಗಳು ಪ್ರಮುಖವಾದವುಗಳು.

ತಿರುವಾಂಕೂರಿನ ದ್ರಾವಿಡ ಭಾಷಾ ವಿಜ್ಞಾನ ಮಹಾಸಂಸ್ಥಾನದ ಸೀನಿಯರ್ ಫೆಲೋಶಿಫ್ ಕೂಡ ಇವರಿಗೆ ಸಂದಿದೆ. ೧೯೭೦ ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವು ದೇ. ಜವರೇಗೌಡ ಅವರ ಕಿರೀಟಕ್ಕೆ ಮತ್ತೊಂದು ಗರಿ ಎಂದರೆ ಉತ್ಪ್ರೇಕ್ಷೆಯೇನಲ್ಲ.

'ಕೈ ಕೆಸರಾಗದೆ ಬಾಯಿ ಮೊಸರಾಗದು', 'ಕಾಯಕವೇ ಕೈಲಾಸ' ಎಂಬ ಹಿರಿಯೋಕ್ತಿಗಳಿಗೆ ದೇ. ಜವರೇಗೌಡರು ಉತ್ತಮ ನಿದರ್ಶನವಾಗುತ್ತಾರೆ. ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಬಾಳಿನಲ್ಲಿ ಮೊದಲು ಒಂದು ವ್ಯವಸ್ಥೆಯನ್ನು ಮಾಡಿಕೊಂಡು, ಕಷ್ಟಸಹಿಷ್ಣುವಾಗಿ ದುಡಿದು ಮುಂದೆ ಬರದ ಹೊರತು, ಆತ ಸಾರ್ವಜನಿಕ ಕ್ಷೇತ್ರದಲ್ಲಾಗಲೀ ಅಥವಾ ಒಂದು ಸಂಸ್ಥೆಯಲ್ಲಾಗಲೀ ಮುಂದುವರಿಯಲಾರ, ಯಶಸ್ವಿಯಾಗಿ ಬಾಳಲಾರ ಎಂಬುದನ್ನು ದೇ.ಜವರೇಗೌಡ ತೋರಿಸಿ ಕೊಟ್ಟಿದ್ದಾರೆ.

ಅಧ್ಯಾಯ-೩ : ದೇ.ಜ.ಗೌ. ಅವರ ಕನ್ನಡ ಪರ ಚಿಂತನೆಗಳು

ಕನ್ನಡ ಭಾಷೆ ಮೊದಲಿನಿಂದಲೂ ಇಲ್ಲಿಯವರೆಗೂ ಅನ್ಯಾಯಕ್ಕೆ ಒಳಗಾಗುತ್ತಾ ಬಂದಿರುವುದನ್ನು ಕಾಣಬಹುದು. ಅದಕ್ಕೆ ಪ್ರತಿಯಾಗಿ ನಮ್ಮ ಕನ್ನಡ ಕವಿಗಳು, ದಾರ್ಶನಿಕರು, ಇನ್ನೂ ಮುಂತಾದವರು ಕನ್ನಡದ ಬಗೆಗಿನ ಜಾಗೃತಿಯನ್ನು ಅವರ ಬರವಣಿಗೆಯ ಮುಖಾಂತರ ಅಭಿವ್ಯಕ್ತಪಡಿಸಿರುವುದನ್ನು ನಾವು ಕಾಣಬಹುದಾಗಿದೆ. ಹಲವಾರು ಸಮಸ್ಯೆಗಳಿಂದಾಗಿ ಕನ್ನಡ ಭಾಷೆ ಆಗಾಗ್ಗೆ ತೊಡಕಿಗೆ ಅನ್ಯಭಾಷೆಗಳಿಂದ ಆಪತ್ತುಗಳು, ಸ್ವಭಾಷಾ ಪ್ರೀತಿ ಇಲ್ಲದಿರುವಿಕೆ ಮುಂತಾದವುಗಳಿಂದ ನಮ್ಮ ಭಾಷೆಯ ಮೇಲೆ ಹಲವಾರು ರೀತಿಯಲ್ಲಿ ಕೆಟ್ಟ ಪರಿಣಾಮ ಬೀರಿರುವುದನ್ನು ನಾವು ಕಾಣಬಹುದು.

ಕನ್ನಡಕ್ಕೆ ಒದಗುತ್ತಿದ್ದ ವಿಪತ್ತುಗಳನ್ನು ಗಮನಿಸಿದಾಗ ಕವಿಗಳು ಬಹಳ ಹಿಂದಿನಿಂದಲೂ ಬರವಣಿಗೆಯ ಮುಖಾಂತರ, ಚಳವಳಿ ಮುಖಾಂತರ ಕನ್ನಡದ ಬಗ್ಗೆ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ಚಳವಳಿ ಮಾಡುವಷ್ಟರ ಮಟ್ಟಿಗೆ ವಿಚಾರ ಪರವಾದ ಲೇಖನಗಳನ್ನು ಬರೆಯುವುದು, ಕಾವ್ಯಗಳ ಮುಖಾಂತರ ಜನ ಸಾಮಾನ್ಯರನ್ನು ಸಮೀಪಕ್ಕೆ ಕರೆದೊಯ್ಯುವ ಕವಿತೆಗಳನ್ನು ಕನ್ನಡದ ಕವಿಗಳು ಮಾಡಿರುವುದನ್ನು ಕಾಣಬಹುದು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಪಿ.ವಿ.ನಾರಾಯಣ ಅವರ ಮಾತುಗಳಲ್ಲೇ ಹೇಳುವುದಾದರೆ "ಕನ್ನಡ ಭಾಷೆಯು ಸುಮಾರು ಎರಡು ಸಾವಿರ ವರ್ಷಗಳಿಂದ ಜನ ಬಳಕೆಯಲ್ಲಿರುವ ಹಾಗೂ ಸಮೃದ್ಧ ಸಾಹಿತ್ಯವನ್ನುಳ್ಳ ಶ್ರೀಮಂತ ಭಾಷೆಯಾಗಿದೆ. ಇದು ಇಂದು ಈ ಸ್ಥಿತಿಯಲ್ಲಿರಲು ಕಾರಣ ಅದನ್ನು ಮಾತನಾಡುವ ಹಾಗೂ ಬರವಣಿಗೆಯಲ್ಲಿ ಶತ ಶತಮಾನಗಳಿಂದ ಬಳಸಿಕೊಂಡು ಬಂದ ಜನರ ಸ್ವಭಾಷಾ ಪ್ರೇಮ ಹಾಗೂ ಸ್ವಾಭಿಮಾನಗಳು ಎಲ್ಲಿಯವರೆಗೆ ಬಂದು ಭಾಷೆಯನ್ನಾಡುವ ಜನರು ಆತ್ಮವಿಶ್ವಾಸವನ್ನು ಹೊಂದಿರುತ್ತಾರೆಯೋ, ಅಲ್ಲಿಯವರೆಗೆ ಅದನ್ನು ಸಹಜವಾಗಿ ಬಳಸುತ್ತ ತಮ್ಮ ಸತ್ವವನ್ನು ತಮ್ಮ ಭಾಷೆಗೆ ಧಾರೆ ಎರೆಯುತ್ತಾರೆ. ಆದರೆ ಕಾರಣಾಂತರಗಳಿಂದ ಅವರ ಆತ್ಮವಿಶ್ವಾಸ ಕುಂದಿದರೆ,

[illegible]

ಅದರ ಪರಿಣಾಮ ಅವರ ನುಡಿಯ ಮೇಲೂ ಆಗುತ್ತದೆ. ಇಂತಹ ಸಂದರ್ಭಗಳಲ್ಲಿ ಆ ಭಾಷೆಯನ್ನಾಡುವ ಎಚ್ಚೆತ್ತ ಜನ, ತಮ್ಮತನವನ್ನು ಉಳಿಸಿಕೊಳ್ಳಲು, ಪ್ರಯತ್ನ ಪೂರ್ವಕವಾಗಿ ಅದನ್ನು ಮೇಲೆತ್ತಲು ಹೆಣಗಬೇಕಾಗುತ್ತದೆ. ಕನ್ನಡಿಗರಿಗೂ ಇಂತಹ ಪರಿಸ್ಥಿತಿ, ಅದರ ಇರವಿನ ಇಪ್ಪತ್ತು ಶತಮಾನಗಳ ಕಾಲಾವಧಿಯಲ್ಲಿ ಅನೇಕ ಬಾರಿ ಉಂಟಾಗಿದೆ. ಅಂತಹ ಸನ್ನಿವೇಶಗಳಲ್ಲೆಲ್ಲ ಆ ನುಡಿಯ ಬಗ್ಗೆ ವಿಶೇಷ ಮಮತೆಯುಳ್ಳ ನುಡಿ ಸೇವಕರು ಅದಕ್ಕೆ ಕಾಯಕಲ್ಪ ಮಾಡಲು ತಮ್ಮ ಹೃತ್ಪೂರ್ವಕ ಪ್ರಯತ್ನ ನಡೆಸಿದ್ದಾರೆ. ಕನ್ನಡದ ಮೇಲೆ ಸಂಸ್ಕೃತದಂತಹ ಭಾಷೆಗಳ ಅತಿಯಾದ ನೆರಳು ಬಿದ್ದಾಗ ಕೆಲವರು ತೀಕ್ಷ್ಣ ಮಾತುಗಳಲ್ಲಿ ಅದನ್ನು ಪ್ರತಿಭಟಿಸಿದ್ದಾರೆ. ವಚನಕಾರರಂತಹ ಅತೀವ ಸ್ವಾಭಿಮಾನಿಗಳು ಯಾವ ಅಳುಕೂ ಇಲ್ಲದೆ ತಮ್ಮ ಅಭಿವ್ಯಕ್ತಿಗೂ ಕನ್ನಡವನ್ನೇ ಬಳಸಿ ಆ ಭಾಷೆಯ ಸತ್ವ ಎಂತಹುದೆಂಬುದನ್ನು ಇತರರಿಗೆ ತೋರಿಸಿಕೊಟ್ಟಿದ್ದಾರೆ"[೪]. ಈ ಮಾತುಗಳು ಬಹಳ ಅರ್ಥಪೂರ್ಣವಾದುದಾಗಿವೆ. ಕನ್ನಡದ ಬಗೆಗಿನ ಅಭಿಮಾನ, ಕೆಚ್ಚು ನಚ್ಚೆಗಳು, ಚಳವಳಿಗಳು, ಕನ್ನಡನಾಡಿನಲ್ಲಿ ಮೂಡಿಬಂದಿರುವುದನ್ನು ನಾವು ಕಾಣಬಹುದು. "ಎಲ್ಲ ಭಾಷೆಗಳ ಬೆಳವಣಿಗೆಯ ರೀತಿಯೂ ಇದೇ ಎಂದು ಕಾಣುತ್ತದೆ. ಜನರ ಮನಃಸ್ಥಿತಿಗೆ ಅನುಗುಣವಾಗಿ ಅವರ ಭಾಷೆಗೆ ಉತ್ಕರ್ಷಣೆ ಅವಕರ್ಷಣೆಗಳು ಇದ್ದೇ ಇರುತ್ತವೆ.

ಕುಗ್ಗಿನ ಸಮಯದಲ್ಲಿ ತಮ್ಮವರ ಮನೋಕ್ಲೈಬ್ಯವನ್ನು ಹೋಗಲಾಡಿಸಲು ಕೆಲವರು ತಮ್ಮೆಲ್ಲ ಶಕ್ತಿಯನ್ನು ಧಾರೆ ಎರೆದು ಹೊಸ ಚೈತನ್ಯ ಮೂಡಿಸಲು ಹೆಣಗುತ್ತಾರೆ. ಕನ್ನಡಿಗರ ಹಾಗೂ ಕನ್ನಡಸಾಹಿತ್ಯಗಳ ಚರಿತ್ರೆಯನ್ನು ಗಮನಿಸಿದರೆ, ಅವು ಒಮ್ಮೆ ಮಿಂಚಾಗಿ, ಕೆಲವೊಮ್ಮೆ ಮಂಕಾಗಿ, ಆದರೂ ಜೀವಂತವಾಗಿ ಜನಮನದ ಭಾವವಾಹಿನಿಯಾಗಿ ಹರಿದು ಬಂದಿರುವುದು ಗೋಚರಿಸುತ್ತದೆ. ಪ್ರಯತ್ನಪೂರ್ವಕವಾಗಿ ಭಾಷೆಯ ಮೇಲ್ಮೆಯನ್ನು ಎತ್ತಿಹಿಡಿಯುವ ಪ್ರಯತ್ನವೇ ಭಾಷಾ ಚಳವಳಿಯೆನಿಸಿ ಕೊಳ್ಳುವುದು."[೫] ಇದೇ ರೀತಿ ದೇ.ಜವರೇಗೌಡ ಅವರು ಕೂಡ ತಮಗೆ ದೊರಕಿದಂತಹ ಅವಕಾಶಗಳಲ್ಲಿ ತಮ್ಮ ಆಲೋಚನೆಗಳಿಗೆ ತಕ್ಕುದಾದಂತಹ ರೂಪುರೇಷೆಗಳನ್ನು

೪. ಕನ್ನಡದ ಹೋರಾಟಗಳು - ಒಂದು ನೋಟ : ರಾ. ನಂ. ಚಂದ್ರಶೇಖರ (ಕೆಲವು ಮಾತುಗಳು - ಪಿ.ವಿ.ನಾರಾಯಣ ಪುಟii)

೫ - ಅದೇ ಪುಟ ii

[illegible]

ನಿರ್ಮಾಣ ಮಾಡಿ ಕನ್ನಡ ಭಾಷೆಯ ಮೇಲ್ಮೆಯನ್ನು ಎತ್ತಿಹಿಡಿಯಲು ಪ್ರಯತ್ನಿಸಿ ಕನ್ನಡಕ್ಕೆ ಒಂದು ಹೊಸ ರೀತಿಯ ವೇದಿಕೆಯನ್ನು ನಿರ್ಮಾಣ ಮಾಡಿದರು. ಅದರಿಂದ ಕನ್ನಡಕ್ಕೆ ಸಾಕಷ್ಟು ಸಮೃದ್ಧ ಫಲಕೂಡ ದೊರೆಯಿತು.

ಕನ್ನಡ ನಾಡನ್ನು ಹಲವಾರು ರಾಜಮನೆತನಗಳು ಆಳುತ್ತಿದ್ದರೂ ಕನ್ನಡ ಭಾಷೆ, ಸಾಹಿತ್ಯಗಳಿಗೆ ಧಕ್ಕೆ ಉಂಟಾಗಿಲ್ಲ ಎಂಬುದಕ್ಕೆ ಈವರೆಗೂ ಉಳಿದುಕೊಂಡು, ಜೀವಂತ ಸಾಕ್ಷಿಯಾಗಿರುವ ಗ್ರಂಥಗಳು ಮತ್ತು ಶಾಸನಗಳು ಪ್ರಮುಖವಾದವು. ಅನಂತರದ ದಿನಗಳಲ್ಲಿ (ಆಂಗ್ಲರು) ಪರಕೀಯರು ಭರತ ಖಂಡವನ್ನು ವಶಪಡಿಸಿಕೊಂಡು ತಮ್ಮ ಪ್ರಭುತ್ವವನ್ನು ಸ್ಥಾಪಿಸಿಕೊಂಡು ತಮ್ಮದೇ ಆದ ಭಾಷೆಯನ್ನು ವ್ಯಾಪಕವಾಗಿ ಹರಡಿದರು. ಅದರಿಂದ ಅಲ್ಲಲ್ಲಿ ಸ್ಥಳೀಯ ಭಾಷೆಗಳು ಚಿವುಟಿ ಹೋಗಿ, ಪರಕೀಯರದೇ ಒಂದು ಹೊಸ ಸಂಸ್ಕೃತಿಯನ್ನು ವ್ಯಕ್ತಪಡಿಸಿಡಬೇಕೆಂಬ ತವಕದಿಂದ ಮೆಕಾಲೆ ಮೊದಲಾದವರು ತೀರ್ಮಾನಿಸಿದ್ದರಿಂದ ಕನ್ನಡ ಪ್ರದೇಶಗಳು ಹಲವಾರು ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿಹೋಗಿ ಕನ್ನಡನಾಡು ಛಿದ್ರವಾಯಿತು. ಎಲ್ಲಿ ನೋಡಿದರೂ ಆಂಗ್ಲಮಾಧ್ಯಮದ ಶಾಲೆಗಳು ಲಗ್ಗೆ ಹಾಕಿದಂತೆ ಹುಟ್ಟಿಕೊಳ್ಳುತ್ತಾ ಬಂದು ಕನ್ನಡಿಗರಿಗೂ ಕನ್ನಡದ ಬಗ್ಗೆ ಆಸಕ್ತಿ ಇಲ್ಲವಾಯಿತು. ಅಂದಿನಿಂದ ಕನ್ನಡಕ್ಕೆ ತುಂಬಾ ವ್ಯತಿರಿಕ್ತವಾದ ಪರಿಣಾಮ ಬೀರಿ ಕನ್ನಡ ಮುದುಡಿ ಹೋಗುವ ಹಂತಕ್ಕೆ ಬರತೊಡಗಿತು.

ದೇಶದಲ್ಲಿ ಆಗಾಗ್ಗೆ ನಡೆಯುತ್ತಿದ್ದ ಸ್ವಾತಂತ್ರ್ಯ ಸಮರದ ಕಾಲದಲ್ಲಿ ದೇಶಭಾಷೆಗಳಿಗೂ ಉತ್ತಮ ಪುರಸ್ಕಾರ ದೊರೆಯಲಾರಂಭಿಸಿತು. "ದೇಶಭಾಷೆಗಳು ಅಭಿವೃದ್ಧಿ ಸ್ವಾತಂತ್ರ್ಯದ ಸಂಕೇತವೆಂದೇ ಪರಿಗಣಿಸಲಾಯಿತು. ಕನ್ನಡ ಕೇವಲ ಭಾಷೆಯಲ್ಲ, ಅದು ಸ್ವಾಭಿಮಾನದ, ಪ್ರಜಾಪ್ರಭುತ್ವದ ಹಾಗೂ ಸಮತಾ ಭಾವನೆಯ ಸಂಕೇತವೆಂದೇ ತಿಳಿಯಲು ಬಹಳ ದಿನ ಹಿಡಿಯಲಿಲ್ಲ. ಅಷ್ಟೆ ಅಲ್ಲ ಜಗತ್ತಿನ ಶ್ರೇಷ್ಠ ಶಿಕ್ಷಣ ತಜ್ಞರು ಮತ್ತು ಮನೋವಿಜ್ಞಾನಿಗಳು ಮಾತೃಭಾಷೆ ಅಥವಾ ದೇಶಭಾಷೆ ಶಿಕ್ಷಣ ಮಾಧ್ಯಮವಾದರೇನೇ ಮಕ್ಕಳ ಜ್ಞಾನದ ಮಟ್ಟ ಅಧಿಕವಾಗುತ್ತದೆ, ಬುದ್ಧಿ

[illegible]

ಚುರುಕಾಗುತ್ತದೆ ಎಂದು ಸಾರಿ ಸಾರಿ ಹೇಳಿದರು. ಪಾಶ್ಚಾತ್ಯ ದೇಶಗಳು ಹಾಗೂ ಜಪಾನು ಮುಂದುವರೆದಿರುವುದಕ್ಕೆ ಅಲ್ಲಲ್ಲಿಯ ಭಾಷೆಗಳು ಸರ್ವಮಾಧ್ಯಮವಾಗಿದ್ದುದೇ ಕಾರಣವೆಂಬುದನ್ನು ಅಲ್ಲಿಯ ಜನರು ಅರಿತಿರುವುದು. ರಷ್ಯಾದಲ್ಲಿ ಫ್ರೆಂಚ್ ಭಾಷೆ, ಇಂಗ್ಲೆಂಡಿನಲ್ಲಿ ಲ್ಯಾಟಿನ್ ಭಾಷೆ ಜಾರಿಯಲ್ಲಿದ್ದಾಗ ಅವುಗಳ ವಿರುದ್ಧವಾಗಿ ಅಲ್ಲಿಯ ಜನ ಆಂದೋಳನ ನಡೆಸಿದರೆನ್ನುವುದನ್ನು ಯಾರೂ ಮರೆಯುವಂತಿಲ್ಲ"[೬] ಈ ರೀತಿ ಯಾವುದೇ ಒಂದು ಭಾಷೆಗೆ ಧಕ್ಕೆ ಬಂದಾಗ ಅಲ್ಲಲ್ಲಿ ಭಾಷೆಯ ಬಗೆಗಿನ ಚಳವಳಿಗಳು ನಡೆಯುತ್ತವೆ.

ಸ್ವಾತಂತ್ರ್ಯ ಬಂದು ಹಲವಾರು ವರ್ಷಗಳು ಸಂದರೂ ಕನ್ನಡ ಚಳವಳಿಗಳು ಪ್ರಸ್ತುತ ಕೂಡ ನಡೆಯುತ್ತಲೇ ಇರುವುದನ್ನು ಕಾಣಬಹುದು. ಭಾಷೆಯ ಮೇಲ್ಮೆಯನ್ನು ಎತ್ತಿ ಹಿಡಿಯುವ ಪ್ರಯತ್ನ ಆಗಾಗ್ಗೆ ನಡೆಯುತ್ತಲೇ ಬಂದಿರುವುದನ್ನು ಕಾಣಬಹುದಾಗಿದೆ. ಸಂಸ್ಕೃತಕ್ಕೆ ಬಹಳವಾಗಿ ಮಾನ್ಯತೆಯಿದ್ದಂತಹ ಕಾಲದಲ್ಲಿ ಕನ್ನಡದಲ್ಲಿ ಮಾತನಾಡುವ ಹಾಗೂ ಬರೆಯುವ ಧೈರ್ಯವನ್ನು ಮೊದಲಿನಿಂದಲೂ ಇಂಥ ಕನ್ನಡದ ಚಳವಳಿಗಳು ನಡೆಯುತ್ತಲೇ ಬಂದಿವೆ.

ಸಾಮಾನ್ಯವಾಗಿ ಭಾಷಾ ಚಳವಳಿಗಳು ಭಾವುಕ ನೆಲೆಯದಾಗಿರುತ್ತವೆ. "ಕನ್ನಡದ ಬಗೆಗಿನ ಕಾರ್ಯಕರ್ತರೂ ಕನ್ನಡವೇ ನಮ್ಮಮ್ಮ, ಕನ್ನಡವೇ ನಮ್ಮ ಪ್ರಾಣ, ಕನ್ನಡವೇ ನನ್ನ ರಕ್ತ ಎಂದೆಲ್ಲ ಹೇಳುವುದರಲ್ಲಿ ಭಾವುಕತೆಯನ್ನು ಕಾಣಬಹುದು. ಆದರೆ ಕನ್ನಡ ಚಳವಳಿಯ ಹುಟ್ಟು ಬೆಳವಣಿಗೆಯನ್ನೂ ಗಮನಿಸಿದಾಗ ಭಾವುಕತೆ, ವೈಚಾರಿಕತೆ ಎರಡೂ ಸಮಾನಾಂತರವಾಗಿ ಕ್ರಿಯಾಶೀಲವಾಗಿರುವುದನ್ನು ಕಾಣಬಹುದು. ಕರ್ನಾಟಕ ಏಕೀಕರಣದ ಆರಂಭದಿಂದಲೂ ಸಾಹಿತಿಗಳನ್ನೂ ಕಲಾವಿದರನ್ನೂ ಚಳವಳಿಗಾರರು ಜೊತೆಗೂಡಿಸಿ ಕೊಂಡು ಬಂದಿರುವುದು ಗಮನಿಸಬೇಕಾದ ಸಂಗತಿ. ಕನ್ನಡ ಚಳವಳಿ ಕೇವಲ ಭಾಷೆಗೆ ಸೀಮಿತವಾಗಿಲ್ಲ. ಇಲ್ಲಿ ಕನ್ನಡ ಎಂದರೆ ಕನ್ನಡ ಭಾಷೆ, ಕನ್ನಡ ಜನ ಕರ್ನಾಟಕಗಳನ್ನೊಳಗೊಂಡಿದೆ." ಕನ್ನಡದ ಉಳಿವಿಗೋಸ್ಕರ ಸ್ವತಃ ಕನ್ನಡದ ಸೇನಾನಿಯಾದ ದೇ. ಜವರೇಗೌಡ ಟೊಂಕ ಕಟ್ಟಿನಿಂತರು. ಅನಕೃ, ಕುವೆಂಪು ಇನ್ನೂ ಮುಂತಾದ ಸಾಹಿತಗಳ ಪ್ರೇರಣೆಗೆ

---

೬ - ದೇ.ಜವರೇಗೌಡ ಸಿದ್ಧಿ ಸಾಧನೆ - ಒಂದು ಅಧ್ಯಯನ : ಎಂ.ವಿ. ವಿಜಯಲಕ್ಷ್ಮಿ, ಪುಟ - ೧೫೭

ಒಳಗಾಗಿ ಕನ್ನಡದ ಉಳಿವಿಗಾಗಿ ಬೀದಿಗಿಳಿದು ಹೋರಾಟ ಮಾಡಲು ಸಿದ್ಧರಾದರು. ಏಕೀಕರಣದ ಅನಂತರವೂ ಕನ್ನಡ, ಕನ್ನಡಿಗರ ಸ್ಥಿತಿಯಂತೂ ಅತಂತ್ರವಾಗಿಯೇ ಉಳಿದುಕೊಂಡು ಬಂದಾಗ ಅಲ್ಲಲ್ಲಿ ಕೆಲ ಪ್ರತಿಭಟನೆಗಳು ಪ್ರಾರಂಭವಾದವು. ೧೯೬೦ರ ದಶಕದಿಂದೀಚೆಗೆ ಕನ್ನಡದಲ್ಲಿ ಚಳವಳಿ ವ್ಯಾವಹಾರಿಕವಾಗಿತ್ತು. ಅನಂತರದಲ್ಲಿ ಸಾಮಾಜಿಕ ಚಳವಳಿಯ ರೂಪವನ್ನು ಪಡೆಯಿತು.

ಕನ್ನಡ ಚಳವಳಿಯ ಉಗಮ

ಕನ್ನಡ ಚಳವಳಿ ಪ್ರತ್ಯೇಕ ಆಂದೋಲನವಾಗಿ ಗುರುತಿಸಲ್ಪಟ್ಟದ್ದು ಕರ್ನಾಟಕ ಏಕೀಕರಣದ ಅನಂತರವೆ. ಆದರೆ ಕನ್ನಡ ಹೋರಾಟ ಆರಂಭವಾದದ್ದು ಕ್ರಿ.ಶ. ೪ನೆಯ ಶತಮಾನದಲ್ಲಿ. ಕ್ರಿ.ಶ.೩೨೫ರಲ್ಲಿ ಶಿವಮೊಗ್ಗ ಜಿಲ್ಲೆಯ ತಾಳಗುಂದ ಎಂಬ ಗ್ರಾಮದ ಮಯೂರ ಶರ್ಮ ಎಂಬ ಯುವಕ ಹೆಚ್ಚಿನ ಅಧ್ಯಯನಕ್ಕಾಗಿ ತಮಿಳುನಾಡಿನ ಕಂಚಿಗೆ ಹೋಗಿದ್ದಾಗ, ಅಲ್ಲಿನ ಪಲ್ಲವರಿಂದ ಅವಮಾನಿತನಾದ. ಈ ಅವಮಾನವನ್ನು ಸಹಿಸದೆ ಬ್ರಾಹ್ಮಣತ್ವವನ್ನು ತ್ಯಜಿಸಿ ಮಯೂರಶರ್ಮನಾಗಿದ್ದವನು ಮಯೂರ ವರ್ಮನಾದನು. ದರ್ಭೆಹಿಡಿಯುವ ಕೈಯಲ್ಲಿ ಖಡ್ಗವನ್ನು ಹಿಡಿದು ಸೈನ್ಯವನ್ನು ಕಟ್ಟಿ ಬಲಿಷ್ಠರಾಗಿದ್ದ ಪಲ್ಲವರನ್ನು ಸೋಲಿಸಿ ಕದಂಬ ಸಾಮ್ರಾಜ್ಯವನ್ನು ಸ್ಥಾಪಿಸಿದ. ಕದಂಬರೇ ಕರ್ನಾಟಕವನ್ನು ಕಟ್ಟಿ ಬೆಳೆಸಿದ ಮೊದಲ ಕನ್ನಡ ರಾಜವಂಶ. ಕದಂಬರು ಕನ್ನಡವನ್ನು ಆಡಳಿತಭಾಷೆಯಾಗಿ ಮತ್ತು ಸಾಂಸ್ಕೃತಿಕ ಭಾಷೆಯಾಗಿ ಬೆಳೆಸಿದರು. ಅದೇ ಕಾಲಕ್ಕೆ ದಕ್ಷಿಣದಲ್ಲಿ ಗಂಗರಾಜ್ಯ ಅಸ್ತಿತ್ವಕ್ಕೆ ಬಂದು, ಮೊದಲ ಬಾರಿಗೆ ಇಡೀ ಕರ್ನಾಟಕ ಕನ್ನಡ ರಾಜವಂಶಗಳ ಆಳ್ವಿಕೆಗೆ ಒಳಪಟ್ಟು ಕನ್ನಡ ರಾಜ್ಯಭಾಷೆ ಆಯಿತು. ಈ ರೀತಿ ಕನ್ನಡದ ಬಗೆಗಿನ ಅಭಿಮಾನ ಕೆಚ್ಚು ನೆಚ್ಚುಗಳು ಬಹಳ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿರುವುದನ್ನು ಕಾಣಬಹುದು.

ಕರ್ನಾಟಕದ ಸಂಸ್ಕೃತಿ ರೂಪಗೊಂಡದ್ದು ಬಾದಾಮಿ ಚಾಲುಕ್ಯರಿಂದ ಎಂಬುದು ಇತಿಹಾಸಕಾರರ

[illegible]

ಅಭಿಪ್ರಾಯ. ಕ್ರಿ. ಶ. ೬ನೇಯ ಶತಮಾನದಲ್ಲಿ ಬಾದಾಮಿ ಚಾಲುಕ್ಯರು ಶೌರ್ಯ ಧೈರ್ಯಗಳಿಂದ ಇಡೀ ಭರತಖಂಡದಲ್ಲಿಯೇ ಮಾನ್ಯರೆನಿಸಿಕೊಂಡಿದ್ದರು.

"ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ"

ಎಂಬ ಕಪ್ಪೆ ಅರಭಟ್ಟನ ಶಾಸನದಲ್ಲಿ ಅಂದಿನ ಕನ್ನಡಿಗರು ಹೇಗಿದ್ದರು ಎಂಬುದನ್ನು ತಿಳಿಸಿಕೊಡುತ್ತದೆ.

ಕನ್ನಡನಾಡು "ಕಾವೇರಿಯಿಂದ ಗೋದಾವರಿವರ್ಗೆ ಮಿರ್ದಾನಾಡದಾ ಕನ್ನಡದೊಳ್" ಎಂದು ಅಂದಿನ ಕನ್ನಡ ನಾಡಿನ ವಿಸ್ತೀರ್ಣ ತಿಳಿಸುವ ಕವಿರಾಜ ಮಾರ್ಗಕಾರನು ಕನ್ನಡಿಗರನ್ನು ಕುರಿತು:

" ಕುರಿತೋದದೆಯೂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂಬಂತಹ ಉತ್ಕಟವಾದ ಅಭಿಮಾನದ ಮಾತುಗಳನ್ನಾಡಿದ್ದಾನೆ. ಈ ಮಾತುಗಳು ಕನ್ನಡಿಗರ ಶೌರ್ಯ ಧೈರ್ಯದ ಜೊತೆಗೆ ಕನ್ನಡದ ಬಗ್ಗೆ ಇದ್ದ ಅಪಾರ ಅಭಿಮಾನವನ್ನು ತಿಳಿಸಿಕೊಡುತ್ತದೆ. ಜೈನಕವಿಗಳಾದ ಶ್ರೀವಿಜಯ, ಪಂಪ, ರನ್ನ ಇವರುಗಳು ಆಗ ಬಳಕೆಯಲ್ಲಿದ್ದ ಸಂಸ್ಕೃತ, ಪ್ರಾಕೃತವನ್ನು ಬಿಟ್ಟು ಕನ್ನಡದಲ್ಲಿ ಶಾಸ್ತ್ರಗ್ರಂಥ, ಕಾವ್ಯ ಧರ್ಮ ಗ್ರಂಥಗಳನ್ನು ಬರೆದು ಕನ್ನಡವನ್ನು ಉಳಿಸಿ ಬೆಳೆಸಿದ ಕೀರ್ತಿಗೆ ಪಾತ್ರರಾಗಿದರು. ಒಟ್ಟಿನಲ್ಲಿ ದ್ರಾವಿಡ ಭಾಷೆಗಳಲ್ಲಿ ತಮಿಳಿಗಿಂತಲೂ ಕನ್ನಡ ಪ್ರಾಚೀನವೂ, ಸಂಪದ್ಭರಿತವೂ ಆದ ಭಾಷೆಯಾಗಿದೆ.

ಕನ್ನಡದ ದನಿ, ಮುಷ್ಕರ, ಚಳವಳಿ, ಕ್ರಾಂತಿ ಇವು ಬೇರೆ ಬೇರೆಯಾಗಿವೆ. 'ಕ್ರಾಂತಿ' ಎಂದರೆ ಅಂದಿನ ಸಮಾಜದಲ್ಲಿ ಇರುವಂತಹ ಕೊಳಕು ವ್ಯವಸ್ಥೆಯನ್ನು ಕಿತ್ತೆಸೆದು ಒಂದು ಹೊಸ ವ್ಯವಸ್ಥೆಯ ಹುಡುಕಾಟಕ್ಕಾಗಿ ಪ್ರಯತ್ನಿಸುವುದು. ಇಂಥ ಸಂದರ್ಭದಲ್ಲಿ ಸಮಾಜ ವ್ಯವಸ್ಥೆ ಆಮೂಲಾಗ್ರ

ಬದಲಾವಣೆಯಾಗಿ ಆರೋಗ್ಯಕರವಾಗಿ ಬೆಳೆದು ನಿಲ್ಲುತ್ತದೆ. ಇಂತಹ ಆಮೂಲಾಗ್ರ ಬದಲಾವಣೆಯನ್ನು ತಂದ ಸಾಮಾಜಿಕ, ಆರ್ಥಿಕ ಕ್ರಾಂತಿ ಭಾರತದಲ್ಲಿ ಇದುವರೆಗೂ ನಡೆದಿಲ್ಲವೆಂದೇ ಹೇಳಬೇಕು. ಆದರೆ ಅನೇಕ ಮಹತ್ವ ಪೂರ್ಣವಾಗಿರುವಂತಹ ಚಳವಳಿಗಳು ಭಾಷಾ ಸಮಸ್ಯೆಗೆ ಸಂಬಂಧಿಸಿದಂತೆ ದನಿ ಎತ್ತಿ ಹೋರಾಡಿರುವುದು, ಈ ನೆಲದಲ್ಲಿ ತುಂಬು ಯಶಸ್ಸು ಪಡೆದಿರುವುದನ್ನು ಕಾಣಬಹುದು.

ಚಳವಳಿ ಒಂದು ಭಾಗದ ಪ್ರದೇಶ ಅಥವಾ ಒಂದು ಘಟ್ಟದ ಸಂದರ್ಭದ ಬದಲಾವಣೆಯನ್ನು ತಂದು ಅಲ್ಲಿ ಸುಧಾರಣೆಯಾಗಲು ಸಹಕಾರಿಯಾಗುತ್ತದೆ. 'ಕ್ರಾಂತಿ' ಈ ಒಂದು ಸುಧಾರಣೆಯ ಹಂತವನ್ನು ಮೀರಿ ನಾಡಿನ ಪ್ರಮುಖ ಆಶಯಗಳ ದಿಕ್ಕನ್ನೇ ಬದಲಿಸಿ ಆಮೂಲಾಗ್ರ ಬದಲಾವಣೆಯ ಜತೆಗೆ ಹೊಸ ಮೌಲ್ಯಗಳನ್ನು ಸೃಷ್ಟಿಸುತ್ತದೆ. ಆದರೆ 'ಮುಷ್ಕರದ' ವ್ಯಾಪ್ತಿ ಚಳುವಳಿಗಿಂತಲೂ ಸೀಮಿತವಾದ ಅರ್ಥವನ್ನು ಪಡೆದುಕೊಂಡದ್ದಾಗಿದೆ. ಆದ್ದರಿಂದ ಈ ಮುಷ್ಕರ ಚಳವಳಿಗಳನ್ನು ಕ್ರಾಂತಿಯ ಮಟ್ಟಕ್ಕೆ ಒಯ್ಯುವ ಕಾರ್ಯವನ್ನು ಜನಪರ ಆಶಯ ಹೊಂದಿದೆ. ಆದ್ದರಿಂದ ಇದನ್ನು ಎಲ್ಲರೂ ಕೂಡ ಮಾಡಬೇಕಾಗಿದೆ. ಇಲ್ಲಿ ದೇ.ಜವರೇಗೌಡ ಮತ್ತು ಕನ್ನಡ ಚಳವಳಿ, ಕನ್ನಡವನ್ನು ಕಟ್ಟುವ ಮತ್ತು ಬೆಳೆಸುವುದಕ್ಕೆ ಅವರು ಮಾಡಿದ ಚಳವಳಿ ಅನನ್ಯವಾದುದು. ಕನ್ನಡ ಚಳವಳಿ ಅಂದಾಗ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡುವುದಷ್ಟೇ ಅಲ್ಲ, ಆಮೂಲಾಗ್ರ ಬದಲಾವಣೆಯನ್ನೇ ತರುವಲ್ಲಿ ಕನ್ನಡದ ಕುಲಪತಿಯೆಂದೇ ಹೆಸರಾದ ದೇ. ಜವರೇಗೌಡ ಅವರಿಂದ ಸಾಧ್ಯವಾಗಿದೆ.

ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನ ಚಳವಳಿಯ ಅನಂತರ ನಡೆದ ಅನೇಕ ಚಳವಳಿಗಳ ನಡುವೆ ಕನ್ನಡ ಚಳವಳಿ ತುಂಬಾ ಮಹತ್ವಪೂರ್ಣದ್ದಾಗಿದೆ. ಸಾಹಿತಿಗಳು, ಕಲಾವಿದರು, ಚಲನಚಿತ್ರನಟರು ಒಟ್ಟಾರೆ ಎಲ್ಲ ಕನ್ನಡಾಭಿಮಾನಿಗಳು ಒಂದಾಗಿ ಕನ್ನಡ ಭಾಷೆಗಾಗಿ ಹೋರಾಟ ಮಾಡುವ ಸಂದರ್ಭ ಬಂದದ್ದು, ಬಂದಿರುವುದು ಅಕ್ಷರಶಃ ಅಂದಂದಿನ ಸರ್ಕಾರದ ದೌರ್ಬಲ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ.

ಕನ್ನಡ ಭಾಷೆಯು ವಿಚಾರಕ್ಕೆ ಬಂದಾಗ ಸಂಸ್ಕೃತ ನಮ್ಮ ಭಾಷೆಯ ಮೇಲೆ ದಟ್ಟ ಪ್ರಭಾವ ಬೀರಿರುವುದರ ಜೊತೆ ಸವಾರಿ ಮಾಡಿದೆ ಎಂದು ಹೇಳಬಹುದು. ಅಂದಿನ ಬುದ್ಧಿಜೀವಿ ವರ್ಗದ ಜ್ಞಾನವೆಲ್ಲ ಸಂಸ್ಕೃತದಿಂದಲೇ ಹರಿದು ಬರುತಿತ್ತು. ಸಂಸ್ಕೃತದ ಪ್ರಭಾವ ಒಂದರ್ಥದಲ್ಲಿ ಆರ್ಯ ಸಂಸ್ಕೃತಿಯ ಪ್ರಭಾವ. ಆರ್ಯ ಸಂಸ್ಕೃತಿಯನ್ನು ಮೀರಿ ಬೆಳೆದದ್ದು ಈ ಸಂಸ್ಕೃತ. ಇದಕ್ಕೆ ಅಂದಿನ ದಿನಗಳಲ್ಲಿ ಹೆಚ್ಚಿನ ಮನ್ನಣೆಯನ್ನು ಗಳಿಸಿಕೊಂಡಿತು. ಅಂದಿನ ದಿನಗಳಲ್ಲಿ ಅಕ್ಷರ ಸಾಮ್ಯವನ್ನು ಪಡೆದಿದ್ದ ಬೌದ್ಧಿಕವರ್ಗ ಅನೇಕ ಅಧಿಕಾರಿಗಳ ಸೂತ್ರಗಳನ್ನು ಹಿಡಿದುಕೊಂಡ ಅಂಶವನ್ನು ಚರಿತ್ರೆಯಲ್ಲಿ ಕಾಣುತ್ತೇವೆ. ರಾಜನ ಪ್ರಧಾನ ಸಲಹೆಗಾರರಾಗಿ ಬೌದ್ಧಿಕ ಸೂತ್ರದಾರರಾದ ಮಂತ್ರಿ, ಪುರೋಹಿತರು ಅಂದು ಪ್ರಬಲರಾಗಿದ್ದುದು ಕಂಡು ಬರುತ್ತದೆ. ಇಷ್ಟೆಲ್ಲಾ ಇದ್ದ ಮೇಲೆ ಬಹಳ ಹಿಂದೆಯೇ ಆಲೋಚನೆ -ಅಭಿವ್ಯಕ್ತಿಗಳು ಕೆಲವರಲ್ಲೇ ಕೇಂದ್ರೀಕೃತವಾಗಿದ್ದವು ಎಂಬುದನ್ನು ಈ ಮೂಲಕ ತಿಳಿಯಬಹುದಾಗಿದೆ. ಹೀಗೆ ಬಲಿಷ್ಟವಾದ ಸಂಸ್ಕೃತ, ದ್ರಾವಿಡ ಭಾಷೆಗಳಲ್ಲಿ ಒಂದಾದ ಕನ್ನಡದ ಮೇಲೆ ದಟ್ಟ ಪ್ರಭಾವ ಬೀರಿದ್ದಕ್ಕೆ ಚರಿತ್ರೆಯ ಒತ್ತಡಗಳು ಕಾರಣವಾಗಿವೆ. ಈ ಒತ್ತಡದ ಸುಳಿಯಲ್ಲಿ ಸಿಕ್ಕಿದ ನಮ್ಮ ಕನ್ನಡ ಭಾಷೆ, ನಮ್ಮ ಜನತೆಯ ಭಾಷೆ ಮುಳುಗುವ ಕಾಲ ಬಂದಾಗ ನಮ್ಮ ಕೆಲ ಕನ್ನಡ ಕವಿಗಳು, ಸಾಹಿತಿಗಳು, ತೋರಿಸಿದ ಪ್ರತಿಕ್ರಿಯೆಗಳು ಕನ್ನಡ ಪರವಾದ ದನಿಗಳಾಗಿ ಮಹತ್ವ ಪೂರ್ಣತೆಯನ್ನು ಪಡೆದು ಯಶಸ್ವಿಯಾಗಿದೆ.

ಕನ್ನಡದಲ್ಲಿ ಲಭಿಸಿರುವ ಕೃತಿಗಳಲ್ಲೇ ಮೊದಲನೆಯದು ೯ನೆಯ ಶತಮಾನದ ಉತ್ತರಾರ್ಧದಲ್ಲಿ ರಚಿತವಾಗಿರಬಹುದಾದ! ಕವಿರಾಜ ಮಾರ್ಗದಲ್ಲಿ ಸಂಸ್ಕೃತ ಮತ್ತು ಕನ್ನಡದ ಮಿಶ್ರಣವನ್ನು ಕುರಿತಂತೆ ಹೇಳಿರುವುದನ್ನು ಕಾಣಬಹುದು. ಸಂಸ್ಕೃತವೇ ವಿಜೃಂಭಿಸುವ ಬದಲು ಕನ್ನಡದಲ್ಲಿ ಅದು ಹದವಾಗಿ ಬೆರೆತು ಬಂದಾಗ ಅಲ್ಲಿ ಆದರ್ಶ ಶೈಲಿಯೊಂದು ಮೂಡುತ್ತದೆ ಎಂಬ ಆಶಯವನ್ನು ಕವಿರಾಜ ಮಾರ್ಗಕಾರ ಅಂದಿನ ದಿನಗಳಲ್ಲೇ ವ್ಯಕ್ತಪಡಿಸಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶ ಸಂಸ್ಕೃತದ ಪ್ರಭಾವದ ವಸ್ತು ಸ್ಥಿತಿಯನ್ನು ಒಪ್ಪಿ ಹದವರಿತು ಬಳಸಬೇಕು ಎಂಬುದೇ ಆಗಿದೆ. ಹಾಗೆಯೇ

ಮುಂದೆ ಬಂದು ನೋಡಿದಾಗ ಕನ್ನಡದ ಪರವಾಗಿ ಹನ್ನೆರಡನೇಯ ಶತಮಾನದಲ್ಲಿ ಆದಿಭಾಗದಲ್ಲಿದ್ದ ನಯಸೇನ ಕವಿ ಹೇಳಿದ ಮಾತುಗಳು ಮುಖ್ಯವಾದವು. ಇವನು ಶುದ್ಧಗನ್ನಡದಲ್ಲಿ ಸಂಸ್ಕೃತವನ್ನು ತಂದಿಕ್ಕುವ ಪ್ರಯತ್ನವನ್ನು ವಿರೋಧಿಸುತ್ತಾನೆ. ಸಂಸ್ಕೃತದಲ್ಲಿ ಹೇಳಬೇಕೆಂದಿರುವವರು ಆ ಭಾಷೆಯಲ್ಲಿ ಪೂರ್ತಿಯಾಗಿ ಆದರೂ ಅದರಲ್ಲೇ ಹೇಳಲಿ, ತುಪ್ಪ ಮತ್ತು ಎಣ್ಣೆಯನ್ನು ಬೆರೆಸುವುದು ಸರಿಯಲ್ಲ ಎಂಬುದಾಗಿ ಆತ ಬಹಳ ಹಿಂದೆಯೇ ಹೇಳಿರುವುದು ಗಮನಾರ್ಹವಾದುದಾಗಿದೆ.

ಸುಮಾರು ಕ್ರಿ.ಶ.೧೨೨೫ ರಲ್ಲಿದ್ದ ಆಂಡಯ್ಯ ಕವಿ ಸಂಸ್ಕೃತದ ಬಗ್ಗೆ ಕಟುವಾಗಿ ಟೀಕಿಸಿದ್ದಾನೆ. ಸ್ವಲ್ಪವೂ ಕೂಡ ಸಂಸ್ಕೃತವನ್ನೇ ಬಳಸದೆ ಕಾವ್ಯ ಬರೆಯುತ್ತೇನೆ ಎಂದು ಪಣತೊಟ್ಟು ಅವನು ಸಂಸ್ಕೃತ ಪದಗಳಿಗೆ ಬದಲಾಗಿ ತದ್ಭವ ರೂಪಗಳನ್ನು ಬಳಸಿ 'ಕಬ್ಬಿಗರ ಕಾವ' ವನ್ನು ರಚಿಸಿದ್ದಾನೆ. ಬರೀ ತದ್ಭವ ಪದಗಳ ಬಳಕೆ ಅತಿರೇಕ ಎನ್ನಬಹುದಾಗಿ ಕಂಡರೂ ತುಳಿತಕ್ಕೆ ಸಿಕ್ಕಿ ಒದ್ದಾಡುತ್ತಿದ್ದ ಕನ್ನಡ ಭಾಷೆಯ ಪರವಾಗಿ ಸಿಡಿದೆದ್ದು ಬಂದು ಉಗ್ರ ಪ್ರತಿಕ್ರಿಯೆಯಾಗಿ ಕಾಣಿಸಿಕೊಂಡದ್ದು ಆಶ್ಚರ್ಯದ ಸಂಗತಿಯೇ ಸರಿ. ೧೯ನೆಯ ಶತಮಾನದ ಕೊನೆ ಮತ್ತು ೨೦ನೆಯ ಶತಮಾನದ ಮೊದಲ ಭಾಗದಲ್ಲಿ ಜೀವಿಸಿದ್ದ ಮುದ್ದಣ ಕವಿಯೂ ಕನ್ನಡ ಸಂಸ್ಕೃತ ಸಂಬಂಧದ ಬಗ್ಗೆ ಪ್ರತಿಕ್ರಿಯಿಸಿರುವುದನ್ನು ಕಾಣಬಹುದಾಗಿದೆ. 'ರಾಮಾಶ್ವಮೇಧ' ಕೃತಿಯಲ್ಲಿ "ಕರ್ಮಣಿ ಸರದೊಳ್ ಚೆಂಬವಳಂ ಕೋದಂತಿರೆ ರಸಮೊಸರೆ ಲಕ್ಕುಂಮಿಕ್ಕರೆ ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಅಮೆರೆಯೆ ತಿರುಳ್ಗನ್ನಡದೊಳೆ ಕತೆಯನುಸರ್ವೆಂ" ಎಂದು ಅವನು ಹೇಳುವ ಮಾತುಗಳು ತನ್ನ ಶೈಲಿಯ ಬಗ್ಗೆ ಹೇಳುವುದಷ್ಟೇ ಅಲ್ಲದೆ, ಕನ್ನಡದೊಳಗೆ ಸಂಸ್ಕೃತ ಬಳಕೆಯ ಕ್ರಮವನ್ನು ಕುರಿತಂಥ ಒಂದು ಅಭಿಪ್ರಾಯವೂ ಆಗಿದೆ. ಸಂಸ್ಕೃತದ ಬೆರಕೆ 'ಕರ್ಮಣಿ ಸರದೊಳ್ ಚೆಂಬವಳಂ ಕೋದಂತೆ' ಎಂದರೆ ಕರಿಮಣಿ ಸರದಲ್ಲಿ ಕೆಂಪು ಹವಳವನ್ನು ಪೋಣಿಸಿದಂತೆ ಇರಬೇಕೆಂದು, ಕನ್ನಡಕ್ಕೊಂದು ಪ್ರಾಮುಖ್ಯತೆಯನ್ನು ಅಂದೇ ಇವನ ಕೃತಿಯಲ್ಲಿ ಕಾಣಬಹುದಾಗಿದೆ.

ಮೇಲಿನ ಹಲವಾರು ವಿವರಣೆಗಳನ್ನು ಗಮನಿಸಿದಾಗ ನಮಗೆ ತಿಳಿಯುವುದು ಕನ್ನಡ

ಪರವಾದ ಗಟ್ಟಿದನಿಗಳು ಬಹಳ ಹಿಂದಿನಿಂದಲೂ ಕೇಳಿ ಬಂದಿರುವುದು ವೇದ್ಯವಾಗುತ್ತದೆ. "ಕನ್ನಡ ದೇಸಿಯನ್ನು ಬಳಸಿದ್ದೇ ವಿಮರ್ಶೆಯಲ್ಲಿ ಉಲ್ಲೇಖಾರ್ಹ ಅಂಶವಾಗುತ್ತದೆಯೆಂಬ ಸಂಗತಿ ಕನ್ನಡದ ದುರಂತ ಸ್ಥಿತಿಯ ಸೂಚನೆಯೂ ಆಗಿದೆ. ಪಂಪನಂಥ ಕವಿಗಳ ಕನ್ನಡ ಪ್ರದೇಶಗಳನ್ನು ವರ್ಣಿಸುವ ಉತ್ಸಾಹಕ್ಕೂ ದೇಸಿಯ ಬಳಕೆಗೂ ಆಳವಾದ ಸಂಬಂಧವಿದೆ.

ಸಂಸ್ಕೃತ ಪ್ರಧಾನ ಸಾಹಿತ್ಯ ಕ್ಷೇತ್ರದಲ್ಲಿ ದೇಸಿ ಬಳಕೆಯ ಕ್ರಮವೂ ಒಂದು ಪ್ರತಿಕ್ರಿಯೆ ಎಂಬುದಾಗಿ ಭಾವಿಸಬಹುದು. ಕನ್ನಡ ಕಾವ್ಯಗಳಲ್ಲೇ ಕನ್ನಡ ಆಡುಮಾತು "ಕದ್ದು ಉಸಿರಾಡುವ ಸ್ಥಿತಿ"ಗೆ ತಲುಪಲು ಯಾವುದು ಕಾರಣ? ಹಿಂದೆಯೇ ಹೇಳಿದಂತೆ ರಾಜ್ಯವ್ಯವಸ್ಥೆಯ ಮನ್ನಣೆ ಪಡೆದಿದ್ದ ಬುದ್ಧಿ ಜೀವಿವರ್ಗದ ಆಲೋಚನೆಯ ಬೇರುಗಳು ಇದ್ದದ್ದು ಸಂಸ್ಕೃತ ಮತ್ತು ಆಸಂಬಂಧಿಯಾದ ಸಂಸ್ಕೃತಿಯಲ್ಲಿ. ರಾಜನ ಆಸ್ಥಾನದಲ್ಲಿದ್ದ ಕವಿಗಳು ಮತ್ತು ಆಸ್ಥಾನ ಮನ್ನಣೆ ಪಡೆದ ಪಂಡಿತ ವರ್ಗದ ಪರಿಕಲ್ಪನೆಗಳನ್ನು ಒಪ್ಪಿದ ಕವಿಗಳ ಕಾವ್ಯದಲ್ಲಿ ಸಂಸ್ಕೃತ ಪ್ರಾಬಲ್ಯ ಹೆಚ್ಚೆಂಬ ಅಂಶ ಇಲ್ಲಿ ಮುಖ್ಯವಾದುದು. ೧೨ನೆಯ ಶತಮಾನದಲ್ಲಿ ಅಂದಿನ ಜಡ ಸಂಪ್ರದಾಯದ ವಿರುದ್ಧ ಹೂಡಿದ ವಚನ ಚಳುವಳಿಯನ್ನು ಗಮನಿಸಿದಾಗ ಅಲ್ಲಿ ಕನ್ನಡಕ್ಕೆ ಅಗ್ರಸ್ಥಾನ. ಜಡಸಂಪ್ರದಾಯ ವಿರೋಧಿ ಚಳವಳಿಯ ಜೊತೆಗೆ ಜಡ ಸಂಸ್ಕೃತ ವಿರೋಧವೂ ಸೇರಿದ್ದು ಆಕಸ್ಮಿಕವಲ್ಲ. ಅಂದಿನ ಸಂದರ್ಭದಲ್ಲಿ ನಿರ್ದಿಷ್ಟ ತಾತ್ವಿಕ ದೃಷ್ಟಿಯ ಹಿನ್ನೆಲೆಯಲ್ಲಿ ಜನತೆಯ ಭಾಷೆಯಾದ ಕನ್ನಡಕ್ಕೆ ಪ್ರಾಧಾನ್ಯತೆ ಸಿಕ್ಕಿತು. ವಚನಕಾರರು ರಾಜರ ಆಸ್ಥಾನದಿಂದ ದೂರವಿದ್ದದ್ದು ಮತ್ತು ಸಂಸ್ಕೃತ ಪ್ರಾಧಾನ್ಯತೆ ಕಡಿಮೆಯಾಗಿ ಕನ್ನಡಕ್ಕೆ ಅಗ್ರಸ್ಥಾನ ಸಿಕ್ಕಿದ್ದು ಕಾಕತಾಳೀಯವಲ್ಲ. ಭಾಷೆ ಮತ್ತು ಸಾಂಸ್ಕೃತಿಕ, ರಾಜಕೀಯ ವ್ಯವಸ್ಥೆಗಳಿಗಿರುವ ಸಂಬಂಧವನ್ನು ಇದು ತಿಳಿಯಪಡಿಸುತ್ತದೆ."[2] ಮುಂದೆ ಅವಲೋಕಿಸಿದರೆ ಭಾರತಕ್ಕೆ ಬ್ರಿಟಿಷರು ಅಧಿಕಾರಕ್ಕಾಗಿ ಬೇರು ಬಿಡುತ್ತಿದ್ದಾಗ ಬೃಹತ್ತಾಗಿ ಬೆಳೆದು ನಿಂತಿದ್ದು ಚರಿತ್ರೆಯ ಸಂಗತಿ. ಸಾಮಾಜಿಕ ಮತ್ತು ಆರ್ಥಿಕವಾಗಿ ಶ್ರೀಮಂತತೆಯನ್ನು ಪಡೆದವರು ಇಂಗ್ಲೀಷ್ ಕಡೆಗೆ ಒಲವು ತೋರಿದರು. ಈ ಬಡಕನ್ನಡಿಗರ ಕಂಠದಲ್ಲಿ ಕನ್ನಡ ಮಾತ್ರ ಇತ್ತು.

೨ - ಕನ್ನಡದ ಹೋರಾಟ : ಲೇಖಕರು ಬರಗೂರು ರಾಮಚಂದ್ರಪ್ಪ, ಪುಟ ೫೬

ಸಂಸ್ಕೃತ, ಇಂಗ್ಲೀಷ್ ಮತ್ತು ಕನ್ನಡಗಳ ಸಂಬಂಧ ಹೀಗಿದ್ದರೆ ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಕೇಂದ್ರಸರ್ಕಾರ ಹಿಂದಿ ಹೇರಿಕೆಯ ಸನ್ನಾಹ ನಿರಂತರವಾಗಿ ಸಾಗಿದೆ.

೧೯೫೬, ನವೆಂಬರ್ ೧ರ ಭಾಷಾವಾರು ಪ್ರಾಂತ ವಿಭಜನೆಯ ಪ್ರಕಾರ ಸಂವಿಧಾನದ ನಿಯಮದಂತೆ ಆ ಸಂದರ್ಭದಲ್ಲಿಯೇ ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರೆಯಬೇಕಿತ್ತು. ಆದರೆ ಕನ್ನಡಿಗರ ಔದಾರ್ಯತೆಯಿಂದ, ಸರಕಾರದ ಅಸಮರ್ಥತೆಯಿಂದ, ಅಧಿಕಾರಿಗಳ ಅಹಂಭಾವತೆಯಿಂದ ಕನ್ನಡಕ್ಕೆ ಧಕ್ಕೆ ಒದಗುವ ಪರಿಸ್ಥಿತಿ ಬಂತು. ಕನ್ನಡನಾಡಿನಲ್ಲಿ ಕನ್ನಡವೇ ಕಡೆಗಣಿಸಲ್ಪಟ್ಟು ಕನ್ನಡಿಗರ ಸ್ವಾಭಿಮಾನವನ್ನೇ ಪ್ರಶ್ನಿಸಿತು. ಅಜ್ಞಾನ, ಅಂಧಕಾರ, ಹಸಿವು-ಬಡತನಗಳ ಸುಳಿಗೆ ಸಿಕ್ಕು ತತ್ತರಿಸುತ್ತಿದ್ದ ಸಾಮಾನ್ಯ ಕನ್ನಡಿಗರಿಗೆ ಕನ್ನಡ ಭಾಷೆ ಆಡಳಿತ ಭಾಷೆಯಾಗದೇ ಇದ್ದುದು ಒಂದು ಸಮಸ್ಯೆಯಾಗಿ ಕಾಡಲೇ ಇಲ್ಲ. ಭಾಷೆ-ಬದುಕುಗಳ ನಡುವಿರುವ ನೇರ ಸಂಬಂಧ ಅರ್ಥವಾದಾಗ ಈ ನಾಡಿನಲ್ಲಿ ಭಾಷಾ ಚಳುವಳಿ ನಿಗಿನಿಗಿಸುವ ಕೆಂಡವಾಗಿ ಪರಿಣಮಿಸಿತು ಎಂದೂ ಕೂಡ ಬೀದಿಗೆ ಬರದಿದ್ದ ಸಾಹಿತಿಗಳು, ಕಲಾವಿದರು, ಪತ್ರಕರ್ತರು, ಚಿತ್ರನಟರು ಬೀದಿಗಿಳಿದರು. ಆಗ ಕನ್ನಡ ಚಳವಳಿಯ ಹೋರಾಟ ಹತ್ತಾರು ದಿಕ್ಕುಗಳಲ್ಲಿ ಹಬ್ಬಿ ಆಳುವ ಸರಕಾರವನ್ನೇ ಉರುಳಿಸಿ ಹಾಕುವ ಶಕ್ತಿಯನ್ನು ಚಳವಳಿ ಗಟ್ಟಿಯಾಗಿ, ಸಂಘಟನಾತ್ಮಕವಾಗಿ ಬೆಳೆದು ನಿಂತರೆ ಏನೆಲ್ಲ ಬದಲಾವಣೆ ಸಾಧ್ಯವೆಂಬ ಅಂಶವನ್ನು ಕನ್ನಡ ಚಳುವಳಿ ಮಾಡಿ ತೋರಿಸಿತು. ಈ ಹಿನ್ನಲೆಯಲ್ಲಿ ದೇ. ಜವರೇಗೌಡರು ಎರಡು ರೀತಿಯಲ್ಲಿಯೂ ಕನ್ನಡದ ಕೆಲಸವನ್ನು ಮಾಡಿದವರು ಕೂಡ ಆಗಿದ್ದಾರೆ.

ಕನ್ನಡ ಚಳವಳಿಯನ್ನು ಎರಡು ಘಟ್ಟಗಳಲ್ಲಿ ಗುರುತಿಸಬಹುದು.

೧. ೧೯೬೦-೬೧ರಲ್ಲಿ ಅ.ನ.ಕೃ ಮತ್ತು ತ.ರಾ.ಸು ಅವರ ನೇತೃತ್ವದಲ್ಲಿ ನಡೆದ ಕನ್ನಡ ಚಳವಳಿ ಪ್ರಾರಂಭದ ಘಟ್ಟ

೨. ೧೯೮೨ ರಲ್ಲಿ ಗೋಕಾಕ್ ವರದಿ ಜಾರಿಗೆ ತರುವ ಸಂದರ್ಭದಲ್ಲಿ ನಡೆದ ಕನ್ನಡ ಚಳವಳಿ.

ಅನೇಕ ಸಾಹಿತಿಗಳು ಕನ್ನಡಾಭಿಮಾನಿಗಳು ಈ ಚಳವಳಿಯಲ್ಲಿ ಭಾಗವಹಿಸಿದ್ದರು. ಈ ಎರಡು ಘಟ್ಟಗಳಲ್ಲಿ ಮೌನವಾಗಿಯೇ ಇದ್ದುಕೊಂಡು ತನ್ನ ಪಾಡಿಗೆ ತಾನು ಕನ್ನಡದ ಕೆಲಸವನ್ನು ಮಾಡಿದವರು, ಮಾಡುತ್ತಿರುವವರು ದೇ.ಜವರೇಗೌಡರು. ದೇ. ಜವರೇಗೌಡರ ಕನ್ನಡತ್ವದ ನೆಲೆಯನ್ನು ಕಂಡುಕೊಳ್ಳಬೇಕಾದರೆ ನಾವು ಕುವೆಂಪು ಅವರ ಕನ್ನಡತ್ವದ ನೆಲೆಯನ್ನು ಕಂಡು ಕೊಳ್ಳಬೇಕಾಗುತ್ತದೆ. ದೇ. ಜವರೇಗೌಡ ಅವರಿಗೆ ಕನ್ನಡದ ದೀಕ್ಷೆಯನ್ನು ಕೊಟ್ಟವರು ಕುವೆಂಪು. ೧೯೫೧ ರಲ್ಲೇ ಕರ್ನಾಟಕ ಸಂಘದ ವತಿಯಿಂದ ಪ್ರಕಟಿಸಿದ 'ಕನ್ನಡಿಗರೇ, ಎಚ್ಚರಗೊಳ್ಳಿ! ಎಂಬ ಪುಸ್ತಕಕ್ಕೆ ಬರೆದ ಮೊದಲ ಮಾತುಗಳು ದೇ. ಜವರೇಗೌಡ ಅವರಿಗೆ ಕನ್ನಡದ ಬಗ್ಗೆ ಅಪಾರವಾದ ಭಕ್ತಿಯನ್ನು, ಕಾಳಜಿಯನ್ನು, ಸಿಂಹ ಘರ್ಜನೆಯನ್ನು ಮಾಡಲಿಕ್ಕೆ ಸಾಧ್ಯವಾಯಿತು. ಕುವೆಂಪು ಅವರಿಗೆ ಕನ್ನಡದ ಬಗೆಯ ಕಾಳಜಿ ಸ್ಥಾವರ. ಆದರೆ ದೇ. ಜವರೇಗೌಡರು ಜಂಗಮನಾಗಿ ಕೆಲಸ ಮಾಡಿದರು. ಕುವೆಂಪು ಕೊಟ್ಟಂತಹ ಸ್ಫೂರ್ತಿಯ ಮಾತುಗಳನ್ನು ಗಮನಿಸಬಹುದು :

"ಇದೋ ವಾಗ್ದೇವಿಯ ಹರಕೆಯ ಶಿಶುವಾಗಿ ನಿನಗೆ ಕೈಮುಗಿದು ನಮಸ್ಕರಿಸಿ ಭಿನ್ನವಿಸುತ್ತೇನೆ: ನನ್ನ ನಮಸ್ಕಾರಕ್ಕಾದರೂ ನಿನ್ನ 'ಅಲ್ಪತೆ' ತೊಲಗಲಿ; ನಿನ್ನ ಹೃದಯದಲ್ಲಿ ಭೂಮ ಚೇತನ ಉದ್ದೀಪನವಾಗಿ ತೊಲಗಲಿ; ಕನ್ನಡ ನುಡಿ ದೀವಿಗೆಯಿಂದ ನಾಡ ಬಾಳು ಬೆಳಗಲಿ! ನನ್ನ ನಮಸ್ಕಾರದಿಂದ ನಿನ್ನ ಅಹಂಕಾರವಳಿದು ಅಲ್ಲಿ ದೇವತ್ವ ಸಂಚಾರವಾಗುತ್ತದೆಂದು ನಂಬಿ ಭಗವತಿ ಶ್ರೀ ಸರಸ್ವತಿಯ ಈ ಹರಕೆಯನ್ನು ನಿನ್ನಲ್ಲಿ ಭಿನ್ನವಿಸುತ್ತಿದ್ದೇನೆ.

ಹೇ ರಾಜಕಾರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಿಗ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲಯೋಗಿ, ನೀನು ಯಾರೆ ಆಗಿರು, ಎಲ್ಲಿಯೆ ಇರು ಕನ್ನಡವನ್ನು ಕೈಬಿಡದಿರು.

ನಾಳೆ ಎಂದರಾಗದು; ಮುಂದೆ ಎಂದರಾಗದು; ಇಂದೆ ನೀನು ನಿರ್ಣಯಿಸಬೇಕು. ಇಂದೆ ಎತ್ತಿ ಪೊರೆಯಬೇಕು. ಬೆಂಕಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ದೊರೆಯುವುದೇನು?

ಬೂದಿಯಲ್ಲವೆ! ನೀರಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ಲಭಿಸುವುದೇನು? ಹೆಣವಲ್ಲವೆ!

ಇದು ನಿನ್ನ ಭಾಷೆ; ಇದು ದೇಶಭಾಷೆ; ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯ ಭಾಷೆ; ಇದು ಮಹಾಕವಿಗಳನ್ನೂ ಶಿಲ್ಪಿಗಳನ್ನೂ ರಾಜಾಧಿರಾಜರನ್ನೂ ವಿರಾಧಿವೀರರನ್ನೂ ರಸಋಷಿ ದಾರ್ಶನಿಕರನ್ನೂ ಹಡೆದಿರುವ ಭಾಷೆ! ಏನೋ ನಡುವೆ ನಾಲ್ಕು ದಿನ ವಿಧಿ ಮುನಿಯೆ ಸಿರಿಯಳಿದು, ಮನೆ ಮುರಿಯೆ ಬೀದಿ ಸೇರಿದ ಮಾತ್ರದಿಂದ ನಿನ್ನ ತಾಯಿ ರಾಣಿಯಾಗಿದ್ದಾಳೆಂಬುದನ್ನು ಮರೆತು ಬಿಡುವೆಯಾ? ಸ್ವತಂತ್ರನಾದ ಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯ?

ಅನ್ಯಮೋಹಕ್ಕೆ ಇಂದು ಅವಕಾಶವಿಲ್ಲ, ಮೀನ ಮೇಷಕ್ಕೆ ಇದು ಸಮಯವಲ್ಲ, ಧೈರ್ಯವಿರಲಿ; ಶ್ರದ್ಧೆಯಿರಲಿ; ಮನಸ್ಸು ಚಂಚಲವಾಗದಿರಲಿ!

ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿಯಾದರೂ ಸಾಕು ಇಂದು ಅದೇ ಗೋವರ್ಧನ ಗಿರಿಧಾರಿಯಾಗುತ್ತದೆ.

ಇಂದು:ನಾಳೆಯಲ್ಲ, ತಿಳಿ, ತಿಳಿ! ತಿಳಿದು ಉಳಿ, ಇಲ್ಲ ಅಳಿ! ಏಳ್! ಗೆಲ್! ಬಾಳ್! ಓಂ ಶಾಂತಿಃ ಶಾಂತಿಃ.[೮] ಹೀಗೆ ಕನ್ನಡ ಸ್ಫೂರ್ತಿಯ ಮಾತುಗಳನ್ನು ಬರೆದುಕೊಟ್ಟ ಕುವೆಂಪು, ದೇ. ಜವರೇಗೌಡ ಅವರಿಗೆ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗೆ ಅಪಾರವಾಗಿ ದುಡಿಯುವಂತೆ, ಪ್ರೇರಣೆ ಮತ್ತು ಪ್ರೋತ್ಸಾಹದ ಜೊತೆಗೆ ರಕ್ಷಾಮಂತ್ರವಾಯಿತು ಎಂದರೆ ತಪ್ಪಾಗಲಾರದು. ದೇ. ಜವರೇಗೌಡ ಅವರ ಕನ್ನಡತ್ವದ ನೆಲೆ-ಚೆಲೆಯನ್ನು ಅರಿಯಬೇಕಾದರೆ ಅವರ ದೀಕ್ಷಾ ಗುರು ಕುವೆಂಪು ಅವರ ಕನ್ನಡತ್ತ್ವದ ನೆಲೆ ದೇ. ಜವರೇಗೌಡ ಅವರಿಗೆ ಕನ್ನಡದ ಆದರ್ಶವಾಗಿ ನಿಲ್ಲುತ್ತದೆ.

ಕನ್ನಡ ಸಾಹಿತ್ಯ ಪಡೆದುಕೊಂಡ ಸಿದ್ಧಿ ಸಾಧನೆಗಳಲ್ಲಿ ಕುವೆಂಪು ಒಬ್ಬರು. ಕನ್ನಡ ನಾಡಿನ

೮ - ಕನ್ನಡಿಗರೇ, ಎಚ್ಚರಗೊಳ್ಳಿ : ದೇ. ಜವರೇಗೌಡ, ಮೊದಲ ಮಾತು ಕುವೆಂಪು

ಹಾಗೂ ಕನ್ನಡ ಭಾಷೆಯ ಭವಿಷ್ಯದ ಬಗ್ಗೆ ಭವ್ಯವಾದ ಕನಸು ಕಂಡವರು ಕುವೆಂಪು. ಹಿಮಾಲಯ ಸದೃಶ ಸಮಾನಾರಾದ ಇವರು ಸಂಸ್ಕೃತ ಮೂಲದ ದಾರ್ಶನಿಕತೆಯನ್ನು, ಇಂಗ್ಲಿಷ್ ಮೂಲದ ವೈಚಾರಿಕತೆಯನ್ನು, ಕನ್ನಡ ಮೂಲದ ದೇಸಿಯತೆಯನ್ನು ಮೈಗೂಡಿಕೊಂಡು ಬೆಳೆದರು ಕುವೆಂಪು. ಈ ಮೂರು ಭಾಷೆಗಳಲ್ಲಿ ಪಾಂಡಿತ್ಯ ಪ್ರೌಢಿಮೆಗಳನ್ನು ಪಡೆದ ಕುವೆಂಪು ಅವರ ಕನ್ನಡದ ಪ್ರೇಮ ಕುರುಡಾದುದಲ್ಲ. ಕುವೆಂಪು ತೀರ ಚಿಕ್ಕವರಾಗಿದ್ದಾಗಲೇ ಕನ್ನಡವನ್ನು ಉತ್ಕಟವಾಗಿ ಪ್ರೀತಿಸಿದರು.

"ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಮೈನಿಮಿರುವುದು,
ಕಾಮನ ಬಿಲ್ಲನು ಕಾಣುವ ಕವಿವೊಲು ತೆಕ್ಕನೆ ಮನಮೈಮರೆಯುವುದು"

ಎಂದು ಹಾಡಿದ್ದರು. ಹರಿಬರೆಯುವುದೂ ಹರ ತಿರಿಯುವುದೂ ಕನ್ನಡದಲ್ಲಿ ಎಂದು ತೀವ್ರ ಅಭಿಮಾನ ತೋರಿದ್ದರು. ರಾಜ ನುಡಿಯೆಂಬ ಪಟ್ಟ ಹಚ್ಚಿಕೊಂಡಿದ್ದ ಇಂಗ್ಲಿಷ್‌ನಿಂದಾಗುತ್ತಿದ್ದ ಅಪಾಯವನ್ನು ೧೯೩೭ ರಷ್ಟು ಹಿಂದೆಯೇ ಗುರುತಿಸಿದವರು ವಿಶ್ವಕವಿ ಕುವೆಂಪು.

"ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ,
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ"

ಎಂದು ಕಾವ್ಯಮಯವಾಗಿ ಸಾರಿ ಸಾರಿ ಎಚ್ಚರಿಸಿದರು.

೧೯೬೦ರಲ್ಲಿ ಕರ್ನಾಟಕ ಹೃದಯ ಶಿವನನ್ನು ಉದ್ದೇಶಿಸಿ ಕನ್ನಡಿಗರು ಹೇಗೆ ಇರಬೇಕು? ಎಂಬುದನ್ನು ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

"ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯದ ಶಿವ
ಸತ್ತಿಂತಿಹರನು ಬಡಿದೆಚ್ಚರಿಸು"

ಎಂದು ಮೊಳಗಿಸಿದ ಕುವೆಂಪು ಅವರು ತಮ್ಮತನ, ತಮ್ಮ ಭಾಷೆ ಎಲ್ಲವನ್ನು ಮರೆತ, ಉಪೇಕ್ಷಿಸಿದ, ತಿರಸ್ಕಾರದಿಂದ ಕಂಡ ಕನ್ನಡಿಗರಿಗೆ ಒಂದು ಅಮೂಲ್ಯವಾದ ಸಂದೇಶವನ್ನು ನೀಡಿದರು. ಬೇಕಾದಷ್ಟು ಇಂಗ್ಲೀಷ್ ಓದಿ ಪಾಂಡಿತ್ಯ ಸಂಪಾದಿಸಿಕೊಂಡು ಅದರಲ್ಲೇ ಕವಿತೆಗಳನ್ನು ರಚಿಸಿದ ಕುವೆಂಪು ಬಲತ್ಕಾರದ ಇಂಗ್ಲಿಷ್ ಹೇರಿಕೆ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡನ್ನು ತೀವ್ರವಾಗಿ ವಿರೋಧಿಸುತ್ತಲೇ ಬಂದವರು. ಇಂಗ್ಲಿಷಿನ ಹೇರಿಕೆ ತಡೆದು, ಕನ್ನಡ ತಲೆಯೆತ್ತುವಂತೆ ಮಾಡುವ ಸಲುವಾಗಿ, ೧೯೬೫ರಲ್ಲಿ 'ರಾಷ್ಟ್ರಪತಿ ಪ್ರಶಸ್ತಿ' ಸ್ವೀಕರಿಸಿದ ಸಂದರ್ಭದಲ್ಲಿ ಶಾಸಕರನ್ನು ಉದ್ದೇಶಿಸಿ ಹೀಗೆ ಹೇಳಿದರು :

"ಅಧಿಕೃತ ಶಾಸನಕರ್ತರಾದ ನಿಮ್ಮಲ್ಲಿ ಅನಧಿಕೃತ ಶಾಸನಕರ್ತನಾದ ನನ್ನ ಒಂದು ಅಹವಾಲು. ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತಿ ಪ್ರತಿಗಾಮಿ ಶಕ್ತಿಗಳು ಮಕ್ಕಳಿಗೆ ಹಾಲುಣಿಸುವ ನೆಪದಿಂದ ಅವರನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ ಬಲಾತ್ಕಾರದ ಇಂಗ್ಲಿಷ್ ಭಾಷೆಯಿಂದಲೂ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಗಿಲೋಟಿನ್ನಿಗೆ ಕೋಟ್ಯಾಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಇದರ ದುಷ್ಪರಿಣಾಮ ದೃಗ್ಗೋಚರವಾಗುವ ಮಟ್ಟಕ್ಕೇರಲು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದ ನಾವು ಹುಸಿ ನೆಮ್ಮದಿಯ ಭಾವದಲ್ಲಿ ಈಗಲೇ ಎಚ್ಚರಗೊಳ್ಳದೆ ತಟಸ್ಥರಾಗಿದಾರೆ ಮುಂದೆ ಮಹಾ ಪಶ್ಚಾತ್ತಾಪಕ್ಕೆ ಬಲಿಯಾಗಬೇಕಾಗುತ್ತದೆ."[೯] ತಾಯಿ ಮತ್ತು ತಾಯಿ ನಾಡುಗಳಂತೆ ತಾಯಿನುಡಿ ಕೂಡ ಸ್ವರ್ಗಕ್ಕಿಂತ ಹಿರಿಯದೆಂದು ನಂಬಿ ನಡೆದು ಬೋಧಿಸಿದವರು ಕುವೆಂಪು. ಮನಸ್ಸಿನ ಗವಾಕ್ಷವನ್ನು ತೆರೆಯುವ ತಾಯ್ನುಡಿಯ ಹಿರಿಮೆಯನ್ನು ಕುವೆಂಪು ಹಲವಾರು ಕವನಗಳ ಮೂಲಕ ಅಭಿವ್ಯಕ್ತಿಸಿ ನಿರಭಿಮಾನಿಗಳಾದ ಕನ್ನಡ ಜನತೆಯ ಕವಿಗಳಲ್ಲಿ ಪಾಂಚಜನ್ಯ ಮೊಳಗಿಸಿದರು. ಕನ್ನಡದ ಜನ ಎಲ್ಲಾದರೂ ಇರಲಿ, ಎಂತಾದರೂ ಇರಲಿ, ಕನ್ನಡತನವನ್ನೊಂದಿದ್ದರೆ ಸಾಕು ಎಂದು ಅಭಿಪ್ರಾಯ ಪಟ್ಟ ಕುವೆಂಪು "ಕನ್ನಡವ ಕೊಲ್ಲುವ ಮುನ್ನ ಓ ನನ್ನ ಕೊಲ್ಲು" ಎಂದು

೯ -ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ : ಆಗಸ್ಟ್-ಸೆಪ್ಟೆಂಬರ್-೨೦೦೨ ಕುವೆಂಪು ವಿಚಾರಗಳು, ಕನ್ನಡತ್ವದ ನೆಲೆ, ಡಾ||ಬೈರಮಂಗಲ ರಾಮೇಗೌಡ, ಪುಟ ೪೨

ಎದೆಯೊಡ್ಡಿದರು.

ಕುವೆಂಪು ಅವರಿಗೆ ಕನ್ನಡ ನಾಡಿನ ಸಂಸ್ಕೃತಿಯ ಬಗ್ಗೆ ಇದ್ದ ಪ್ರೇಮ, ಕನ್ನಡದ ಸ್ಥಾನಮಾನಕ್ಕಾಗಿ ಅವರು ನಡೆಸಿಕೊಂಡು ಬಂದ ಹೋರಾಟ, ನೀಡಿದ ಧುರೀಣತ್ವ ನಾವೆಲ್ಲರೂ ಮೆಚ್ಚುವಂತದ್ದಾಗಿದೆ. ಪ್ರತಿಯೊಂದು ಅಂಶಗಳು ರೋಮಾಂಚನಗೊಳಿಸುತ್ತದೆ. ಹೀಗೆ ಕುವೆಂಪು ಅವರ ಆಲೋಚನೆಗಳನ್ನು ಜಾರಿಗೆ ತಂದು ಕನ್ನಡವನ್ನು ಕಟ್ಟುವ ಮತ್ತು ಬೆಳೆಸುವಲ್ಲಿ ದೇ. ಜವರೇಗೌಡ ಅವರ ಪಾತ್ರ ಪ್ರಮುಖವಾದುದಾಗಿದೆ.

ದೇ. ಜವರೇಗೌಡರು ಮತ್ತು ಕನ್ನಡ

ದೇ. ಜವರೇಗೌಡ ಅವರು ಕನ್ನಡ ಭಾಷೆ ಹಾಗೂ ಸಾಹಿತ್ಯದ ಹಿನ್ನೆಲೆಯಿಂದ ಹೇಳುವುದಾದರೆ ಮೌನವಾಗಿಯೇ ಕನ್ನಡದ ಕ್ರಾಂತಿಯನ್ನು ಆರಂಭಿಸಿದವರು. ದೊರೆತ ಅವಕಾಶಗಳಲ್ಲಿ ಅಪಾರವಾಗಿ ಕನ್ನಡಕ್ಕಾಗಿ ತನುಮನಧನಗಳನ್ನು ಅರ್ಪಿಸಿಕೊಂಡಿದ್ದಾರೆ. ಕನ್ನಡಕ್ಕಾಗಿ ಹೋರಾಡಿದವರಲ್ಲ. ಸವಲತ್ತುಗಳಿಗೋಸ್ಕರ ಮಾಡಿದ ಹೋರಾಟವಾಗಿದೆ. ಪ್ರಚಾರ ಹರಿಯುವ ಕೋಡಿ ಇದ್ದಾಗೆ, ಮೌನ ನಮ್ಮ ಒಳಗಡೆ ಹರಿಯುವ ಸೆಲೆ ಇದ್ದಾಗೆ ಇದು ದೇ. ಜವರೇಗೌಡ ಅವರ ಕನ್ನಡತ್ವಕ್ಕೆ ಮಹತ್ವದ ಉದಾಹರಣೆಯಾಗಿದೆ.

ದೇ.ಜವರೇಗೌಡ ಅವರಿಗೆ ಕುವೆಂಪು ಕನ್ನಡದ ಆದರ್ಶವಾಗಿ ನಿಲ್ಲುತ್ತಾರೆ. ಅವರ ಕನ್ನಡತ್ವದ ನೆಲೆಯನ್ನು ಗುರುತಿಸಿಕೊಳ್ಳುವಾಗ ಮುಖ್ಯವಾಗಿ ಎದ್ದು ಕಾಣುವ ಅಂಶವೆಂದರೆ ಒಟ್ಟು ಸಮುದಾಯದ ದೃಷ್ಟಿಯಿಂದ ಕೂಡಿದುದು ಆಗಿದೆ. ಕೇವಲ ಭಾಷಾ ಸಮುದಾಯದಲ್ಲಿ ಕುವೆಂಪು ಕನ್ನಡ ನೆಲೆಯನ್ನು ಗುರುತಿಸುವಾಗ ಅಲ್ಲಿ ವೈಚಾರಿಕ ಸಂಬಂಧವನ್ನು ಕೂಡ ಕಾಣಬಹುದಾಗಿದೆ. ಇಂಗ್ಲಿಷ್ ಇರಲಿ, ಆದರೆ ಪ್ರಥಮ ಆದ್ಯತೆ ಕನ್ನಡಕ್ಕೆ ಇರಲಿ ಎಂಬ ಅಂಶ ದೇ. ಜವರೇಗೌಡ ಅವರಿಗೆ ಸಾರಾಸಗಟಾಗಿ ಅನ್ವಯಿಸುತ್ತದೆ. ದೇ. ಜವರೇಗೌಡ ಅವರದು ಕನ್ನಡ ಪ್ರೇಮ ಭಾವನಾತ್ಮಕ ಸಂಬಂಧವಾಗಿರಲಿಲ್ಲ.

ಸವಲತ್ತುಗಳಿಗೋಸ್ಕರ ಹೋರಾಟವನ್ನು ಮಾಡಿದವರು ಇವರು.

ದೇ. ಜವರೇಗೌಡ ಅವರ ಕನ್ನಡ ಕ್ಷೇತ್ರ ಚಳವಳಿ ಅಥವಾ ಕನ್ನಡ ಪ್ರಚಾರಕ್ಕೆ ಸೀಮಿತವಾಗಿಲ್ಲ. ಕನ್ನಡ ಕೃತಿ ರಚನೆಯೇ ಮೊದಲಾದ ಕ್ಷೇತ್ರದಲ್ಲೂ ವ್ಯಾಪಿಸಿದೆ. ಅರೆ ನಿದ್ದೆಯಲ್ಲೂ ಅರೆ ಹಸಿವಿನಲ್ಲೂ ಮಾತನಾಡುವಷ್ಟು ಸಾಹಿತ್ಯವನ್ನು ನಾಡಿಗೆ ಕೊಟ್ಟಿದ್ದಾರೆ. ಅವರ ಆಡಳಿತ ಶಕ್ತಿ, ಸಂಘಟನಾ ಶಕ್ತಿ, ಕನ್ನಡ ನಾಡು ನುಡಿಯಲ್ಲಿ ಅವರ ಪಾತ್ರ ಪಾರದರ್ಶಕವಾದುದಾಗಿದೆ. ಕನ್ನಡನಾಡು ಕಂಡಂತಹ ವಿಶಿಷ್ಟ ವ್ಯಕ್ತಿಗಳಲ್ಲಿ ದೇ. ಜವರೇಗೌಡ ಮುಖ್ಯರು. ಇವರು ಮಾಡಿದ ಒಂದೊಂದು ಕೆಲಸವು ಕನ್ನಡಕ್ಕಾಗಿಯೇ ಮಾಡಿದರು. ತಾವು ಬದುಕಿ ಬೇರೆಯವರ ಬದುಕಿನಲ್ಲೂ ಜ್ಯೋತಿಯನ್ನು ಬೆಳಗಿಸಿದವರು ಇವರು. ಕನ್ನಡ ಸಾರವಾಗಿ ಕನ್ನಡವಾಗಿಯೇ ಬದುಕಿರುವವರು. ಇವರು ಕನ್ನಡದ ಸುಗಂಧವನ್ನು ಚೆಲ್ಲಿದವರು. ಗುರುವಿಗೆ ತಕ್ಕ ಶಿಷ್ಯನಾಗಿ, ಆದರ್ಶ ಸಾಹಿತಿಯಾಗಿ, ದಕ್ಷ ಆಡಳಿತಗಾರರಾಗಿ, ಕೆಲವರಿಗೆ ಮಾರ್ಗದರ್ಶಕರಾಗಿ ಬಹಳ ಪರಿಣಾಮಕಾರಿಯಾದ ವ್ಯಕ್ತಿಯಾಗಿದ್ದಾರೆ. ದೇ. ಜವರೇಗೌಡರು ಕುಲಪತಿಯಾಗಿ ಅಷ್ಟೇ ಅಲ್ಲ ಅತ್ಯಂತ ಪ್ರಭಾವಶಾಲಿಯಾದ ಕನ್ನಡದ ಕುಲಪತಿಯೂ ಹೌದು. ಎಂದೆಂದಿಗೂ ಸ್ಫೂರ್ತಿಯ ಚಿಲುಮೆಯಾಗಿರುವ ಇವರು ಯುವಕರಂತೆ ಸದಾ ಕಾರ್ಯತತ್ಪರರು. ಬದುಕನ್ನೂ ಕೂಡ ಅಷ್ಟೇ ಪ್ರೀತಿಯಿಂದ ಕಂಡುಕೊಂಡವರೂ ಕೂಡ. ಇವರು ಮಾಡಿದ ಸಾಧನೆಗಳು ಅಪಾರ. ಕೆಲವೊಮ್ಮೆ ಕ್ರಾಂತಿಕಾರಕ ಚಳವಳಿಯ ವಿಚಾರಗಳು, ಕನ್ನಡವನ್ನು ಆಡಳಿತ ಭಾಷೆಯಾಗಿ ತರುವಲ್ಲಿ ಇವರು ಮಾಡಿದ ಹೋರಾಟ, ಭಾಷೆಯ ಬಗ್ಗೆ ತಳೆದ ಇವರ ದೃಷ್ಟಿ, ಮಹಾಸಾಹಿತಿಗಳ ವಿಚಾರವನ್ನು ಸಾಮಾನ್ಯ ಜನರಿಗೆ ನಿಲುಕುವಂತೆ ಬರೆದ ಇವರ ಕನ್ನಡ ಕೃತಿಗಳ ಸೃಷ್ಟಿ, ಭಾಷೆ ಬೆಳೆಯಬೇಕಾದರೆ ಭಾಷಾಂತರವೂ ಕೂಡ ಅತಿ ಮುಖ್ಯ ಎಂಬ ಅಂಶವನ್ನು ಮನದಟ್ಟು ಮಾಡಿ ತೋರಿಸಿದರು. ಆದ್ದರಿಂದಲೇ "ಕುವೆಂಪು ಸಾಹಿತ್ಯಾಧ್ಯಯನ ದೇ. ಜವರೇಗೌಡ ಅವರ ಹೃದಯವಾದರೆ, ಭಾಷಾಂತರ ಮತ್ತು ಜಾನಪದ ಅಧ್ಯಯನ ಶ್ವಾಸಕೋಶಗಳಾಗಿವೆ" ಎಂಬ ಮಾತು ಉಲ್ಲೇಖಾರ್ಹವಾದುದಾಗಿದೆ.

ದೇ. ಜವರೇಗೌಡ ಅವರ ದೂರ ದೃಷ್ಟಿಯ ಫಲವಾಗಿ ಆಡಳಿತದಲ್ಲಿ ಕನ್ನಡ, ಮಾಧ್ಯಮವಾಯಿತು. ಒಂದು ವ್ಯವಸ್ಥೆಯೊಳಗೆ ಇದ್ದು ಕೂಡ ಇದೇ ಕನ್ನಡ ನಾಡಿನ ವ್ಯವಸ್ಥೆಯನ್ನು ಬದಲಾವಣೆ ಮಾಡಲಿಕ್ಕೆ ಹೊರಟವರು ಇವರು. ಇದರ ಮುಖ್ಯ ಉದ್ದೇಶ ಆಡಳಿತ ಭಾಷೆ, ಕನ್ನಡವಾಗಬೇಕು ಎಂಬುದು. ಅದರಲ್ಲೂ ಎಲ್ಲಾ ರಂಗಗಳಲ್ಲಿಯೂ ಕನ್ನಡಕ್ಕೆ ಅಗ್ರಸ್ಥಾನ ನೀಡಬೇಕು, ಆಡಳಿತ ಭಾಷೆ ಕನ್ನಡ, ಆದರೆ ಹೊಸ ಹೊಸ ಪದಗಳ ಸೃಷ್ಟಿ, ಭಿನ್ನ ಭಿನ್ನ ಆಲೋಚನೆಗಳು, ಹೊಸ ಹೊಸ ರೀತಿಯಾದಂತಹ ವಿಚಾರಗಳು ಮರೆಯಲ್ಲಿ ಬರುವಂತಾಯಿತು. ಅದರಲ್ಲೂ ಕನ್ನಡ ಭಾಷೆ ಸರ್ವಾಂಗ ಸುಂದರವಾಗಿ, ಸಂಪುಷ್ಟವಾಗಿ, ಸಮೃದ್ಧವಾಗಿ ಬೆಳೆಯಬೇಕೆಂಬುದೇ ಅವರ ಕನಸಾಗಿದೆ. ಅವರ ಒಂದೊಂದು ಆಲೋಚನೆಗಳು, ಅನುಭವ, ಭಾವನೆಗಳೇ ಕನ್ನಡದಲ್ಲಿ ಆಮೂಲಾಗ್ರ ಬದಲಾವಣೆಯಾಗುವಂತೆ ಮಾಡಿತು.

ದೇ. ಜವರೇಗೌಡರ ಜ್ಞಾನ, ಅಪಾರ ಅನುಭವ, ಆಲೋಚನೆಗಳು ನಿಜವಾಗಿಯೂ ನಮಗೆ ಆಕರ್ಷಣೀಯವಾದುದಾಗಿದೆ. ಮೈಮನಗಳೆರಡರ ದೃಷ್ಟಿಯಿಂದಲೂ ದೇ. ಜವರೇಗೌಡರು ಬಂಧುರ ವ್ಯಕ್ತಿ. ಸ್ನೇಹಕ್ಕೆ ಯಾವಾಗಲೂ ತೆರೆದ ಹೃದಯ. ಅನ್ಯಾಯಕ್ಕೆ ಎಂದೂ ಬಾಗದ ತಲೆ ಅವರದಾಗಿದೆ. ಕನ್ನಡದ ಭಾಷೆ ಎಂಬ ವಿಷಯದಲ್ಲಿ ಒಪ್ಪಂದ ಎಂಬ ಪ್ರಶ್ನೆಯೇ ಅವರಿಗಿಲ್ಲ, ಅವರ ಕನ್ನಡ ಪ್ರೇಮ ರಕ್ತಗತವಾದ ಸ್ಫೂರ್ತಿಯ ಸೆಲೆ. ಜತೆಗೆ ತಮ್ಮ ದೀಕ್ಷಾಗುರವಾದ ಕುವೆಂಪು ಅವರ ವಿಚಾರಗಳು ಎಂಥಹ ಚಳವಳಿಗಾದರೂ ಕೈ ಬೀಸಿ ಕರೆತರುವಂತಹವುಗಳು. ಸಾಹಿತ್ಯ ಲೋಕದಲ್ಲಿ 'ನನ್ನ' ಹೆಸರು ಮುಂದೆ ಬರಬೇಕು ಎನ್ನುವುದಕ್ಕಿಂತ, ನಮ್ಮ ಕನ್ನಡ ಉಳಿಯಬೇಕು, ನಮ್ಮ ಕನ್ನಡ ಜನ ಎಲ್ಲ ರಂಗದಲ್ಲೂ ಬೆಳೆಯಬೇಕು ಎಂಬುದೇ ಕನ್ನಡದ ಕಣ್ಮಣಿಯಾದ ದೇ. ಜವರೇಗೌಡ ಅವರ ಕಳಕಳಿಯಾಗಿದೆ.

ದೇ. ಜವರೇಗೌಡ ಅವರ ಕನ್ನಡಪರ ಚಿಂತನೆಗಳು

"ಕನ್ನಡಕ್ಕೆ ವಿಪತ್ತು ಒದಗಿದರೆ ನನ್ನ ಮೈಮೇಲೆ ನರಸಿಂಹ ಬಂದಂತಾಗುತ್ತದೆ, ಕನ್ನಡದ ಹಗೆ-ನನಗೆ ಹಗೆ, ಕನ್ನಡಕ್ಕಾಗಿ ತನುಮನ ಧನ ತೆತ್ತಿದ್ದೇನೆ. ಕನ್ನಡದ ಮೇಲ್ಮೆಯೇ ನನ್ನ ಗುರಿ. ಭಗವತ್ ಕೃಪೆಯಿಂದ ನನ್ನ ಬಾಳಿನಲ್ಲಿ ಕೊರತೆಯಿಲ್ಲ, ಆಸೆ-ಆಮಿಷಗಳಿಲ್ಲ. ಕನ್ನಡದ ಗುಂಪು ನನ್ನ ಗುಂಪು. ನನ್ನ ಜಾತಿ ಕನ್ನಡದ ಜಾತಿ. ಈ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದವರೆಲ್ಲ ನನಗೆ ಮಾನ್ಯರು".

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಅವರ ಕನ್ನಡ ಪ್ರೇಮ ವೈಜ್ಞಾನಿಕ ವಾದುದೆಂಬುದು ಅರಿವಾಗುತ್ತದೆ.

"ಚಂಡಿ ಚಾಮುಂಡಿ ಪೇಳ್ ಬೇಕಾದುದೇನು"

ಗಂಡಸಾದರೆ ನಿನ್ನ ಬಲಿಕೊಡುವೆಯೇನು?" ಎಂಬ ಬೇಂದ್ರೆಯವರ ಪದ್ಯದ ಒಂದು ಸಾಲಿಗೆ ಉತ್ತರವೆಂಬಂತೆ "ಕನ್ನಡಕ್ಕಾಗಿ ಬಲಿ ಕೊಟ್ಟು ಕೊಳ್ಳುವೆ" ಎಂದು ಹೇಳುವ ಧೀರರೊಬ್ಬರಿದ್ದರೆ ಅವರೇ ಮಾನವತಾವಾದಿ, ಕನ್ನಡದ ಸೇನಾನಿ, ದೇ. ಜವರೇಗೌಡ.

"ಕೆಲವರಿಗೆ ರಾಮನಿಂದ ಮುಕ್ತಿ , ಕೆಲವರಿಗೆ ಶಿವನಿಂದ, ನನಗೆ ಕನ್ನಡದಿಂದ; ಕನ್ನಡವೇ ನನ್ನ ಗಾಯತ್ರಿ ತ್ರ್ಯಕ್ಷರಿ" ಎನ್ನುತ್ತಾರೆ ದೇ. ಜವರೇಗೌಡ.

ದೇ.ಜವರೇಗೌಡ ಅವರ ಮನೋಲೋಕವನ್ನೆಲ್ಲ ಕನ್ನಡ ಆಳವಡಿಸಿಕೊಳ್ಳುವಂತೆ ಮಾಡಿದವರು ಕುವೆಂಪು. ದೇ. ಜವರೇಗೌಡ ತಮ್ಮ ಅವಿರತ ಕನ್ನಡ ತಪಸ್ಸಿನ ಫಲವಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಅನೇಕ ಸಂಘಸಂಸ್ಥೆಗಳನ್ನು ಸ್ಥಾಪಿಸಿದರು. ಇವೆಲ್ಲ ಕನ್ನಡದ ಕೆಲಸ ಎಂಬುದಾಗಿ ಅರಿತಿದ್ದರು. ಕನ್ನಡ ನಾಡಿನಲ್ಲಿ ಯಾವುದೇ ಕನ್ನಡ ಕೆಲಸವಿದ್ದರೂ ಅದರಲ್ಲಿ ತಾವೇ ಅಗ್ರಗಣ್ಯರು.

ಕನ್ನಡಕ್ಕೆ ಅಗ್ರಪೀಠವಾಗಬೇಕು. ಕನ್ನಡ ಸಂಸ್ಕೃತಿ, ಇತಿಹಾಸ, ಕಾವ್ಯ ಪರಂಪರೆಯಿಂದ ಕನ್ನಡಿಗರು ಚೈತನ್ಯ ತುಂಬಿಕೊಂಡು ರಾಷ್ಟ್ರದಲ್ಲಿ ತಲೆಯೆತ್ತಿ ಮೆರೆಯಬೇಕು ಎಂಬ ಕನಸನ್ನು ನನಸಾಗಿದ ಇವರು ಕೆಲವೊಮ್ಮೆ ಕ್ರಾಂತಿ ಪುರುಷರಾಗಿಯೇ ಕೆಲಸ ಮಾಡಿರುವುದುಂಟು.

ಕನ್ನಡ ಭಾಷೆಯ ರಕ್ಷಣೆ ಮತ್ತು ಬೆಳವಣಿಗೆಯಲ್ಲಿ ದೇ. ಜವರೇಗೌಡ ಅವರ ಕನ್ನಡ ಪರ ಚಿಂತನೆಗಳೆ ಸ್ಫೂರ್ತಿಯ ಸೆಲೆ ನೆಲೆಯಾಗಿ ನಿಂತಿದೆ. ಅವುಗಳೆಂದರೆ :

೧. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು.

೨. ಕನ್ನಡ ಆಡಳಿತ ಕ್ಷೇತ್ರದಲ್ಲಿ ಪ್ರಮುಖ ಮಾಧ್ಯಮವಾಗಬೇಕು.

೩. ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳು ಕನ್ನಡ ಭಾಷೆಯಲ್ಲಿರಬೇಕು.

೪. ಕನ್ನಡ ಪಂಡಿತರಿಗೆ ಬಿಎಡ್ ಓದಲು ಅವಕಾಶವಿರಬೇಕು.

೫. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಕೆಲಸಗಳಲ್ಲಿ ಆದ್ಯತೆ ಇರಬೇಕು.

೬. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗುವಂತಾಗಬೇಕು.

೭. ಕನ್ನಡ ಮುಂದೇನಾಗಬೇಕಾಗಿದೆ.

೧. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು

ಪ್ರಪಂಚದ ಯಾವ ರಾಷ್ಟ್ರದಲ್ಲಾಗಲಿ ಅದರಲ್ಲಿಯೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಶಿಕ್ಷಣ ಮಾಧ್ಯಮದ ವಿಷಯ ಸಮಸ್ಯೆಯ, ಸಂದಿಗ್ಧತೆಯ ಅಥವಾ ಚರ್ಚೆಯ ವಿಷಯವಾಗಿ ಉಳಿದಿಲ್ಲ. ಜಪಾನಿನಲ್ಲಾಗಲೀ, ರಷ್ಯಾದಲ್ಲಾಗಲೀ, ಕೊರಿಯದಲ್ಲಾಗಲೀ, ಜರ್ಮನಿಯಲ್ಲಾಗಲೀ ಅಲ್ಲಿನ ಜ್ಞಾನವಿಕಾಸಕ್ಕೆ ಅನುಭವ ಸಂಪತ್ತಿಗೆ, ತನ್ಮೂಲಕ ತಂತ್ರಜ್ಞಾನ ವಿಜ್ಞಾನ ಸರ್ವಾಂಗೀಣ ಅಭಿವೃದ್ಧಿಗೆ ಅಲ್ಲಲ್ಲಿಯ ದೇಶ ಭಾಷಾ ಮಾಧ್ಯಮದ ಮೂಲಕ ಶಿಕ್ಷಣವೆ ಕಾರಣವೆಂಬುದು ಸುಸ್ಪಷ್ಟ. ದೇಶ ಭಾಷೆಯೆಂದರೆ ಒಂದು ದೇಶದ ಅಥವಾ ರಾಜ್ಯದ ಬಹುಜನ ಮಾತಾಡುವ ಭಾಷೆ. ಅದನ್ನು ಸಾಮೂಹಿಕ ಅಥವಾ ಬಹುಜನ ಮಾತೃಭಾಷೆಯೆಂದು ಕರೆಯಬಹುದಾಗಿದೆ. ಕೆಲವೇ ಕೆಲವರ ಮನೆ ಮಾತನ್ನು ಕೆಲ ಬಲದ ಅಥವಾ ಸ್ವಲ್ಪ ಜನ ಮಾತೃಭಾಷೆಯೆಂದು ಹೆಸರಿಸಬಹುದು. ಕರ್ನಾಟಕದಲ್ಲಿ ಕನ್ನಡ ಬಹುಜನರ ಮಾತೃ ಭಾಷೆ, ತೆಲಗು, ತಮಿಳು ಮೊದಲಾದವು ಸ್ವಲ್ಪ ಜನರ ಮಾತೃ ಭಾಷೆ. ದೇಶ ಜನರ ಭಾಷೆಯಿಂದ ಗ್ರಹಣ ಶಕ್ತಿ ತೀವ್ರವಾಗುತ್ತದೆ. ಅಭಿವ್ಯಕ್ತಿ ಶಕ್ತಿ ಪ್ರಖರವಾಗುತ್ತದೆ, ಆತ್ಮವಿಶ್ವಾಸ ಕುದುರುತ್ತದೆ. ಆಲೋಚನಾ ಶಕ್ತಿ ಮತ್ತು ಪ್ರತಿಭಾ ಸಾಮರ್ಥ್ಯ ತುಂಬಾ ಅರಳುತ್ತದೆಂದು ಜಗತ್ತಿನ ಎಲ್ಲಾ ಮನೋ ವಿಜ್ಞಾನಿಗಳು, ಶಿಕ್ಷಣ ತಜ್ಞರು, ಪರಿಪಕ್ವ ರಾಜಕಾರಣೆಗಳು, ಮಹಾಸಾಹಿತಿಗಳು ಒಪ್ಪಿಕೊಂಡಿದ್ದಾರೆ.

ಈ ಹಿನ್ನಲೆಯಲ್ಲಿ ದೇ. ಜವರೇಗೌಡ ಅವರು ಉಪಕುಲಪತಿಗಳಾಗಿದ್ದಾಗ ಯಾವ ಭಾಷೆಯಲ್ಲಾದರೂ ಕೂಡ ಪರೀಕ್ಷೆ ಬರೆಯಿರಿ ಎಂದು ಘೋಷಿಸಿದರು. ಇವರ ಮೂಲ ಉದ್ದೇಶ ಎಲ್ಲರೂ ಸುಲಭವಾದ ತಾಯಿ ಭಾಷೆಯಾದ ಕನ್ನಡದಲ್ಲಿ ಬರೆಯುತ್ತಾರೆ. ಆಗ ತಾನಾಗಿಯೇ ಕನ್ನಡ ಸಮೃದ್ಧವಾಗಿ ಬೆಳೆಯುತ್ತದೆ ಎಂಬುದೇ ಆಗಿತ್ತು. ದೇ. ಜವರೇಗೌಡರು ಹಲವಾರು ಭಾಷಣಗಳಲ್ಲಿ ಸರ್ಕಾರಗಳ ವಿರುದ್ಧ ಸಿಡಿದೇಳುವುದುಂಟು. ಇಡೀ ಕರ್ನಾಟಕದಲ್ಲಿ ಕನ್ನಡ ಬಳಸಿ ಎಂದು. ಕನ್ನಡ ಕಲಿತು ಮಾತನಾಡಲಿ, ಇಲ್ಲ ಅಲ್ಲಿ ಭಾಷಾಂತರಕಾರರನ್ನು ನಿಯೋಜಿಸಿ ಆಗ

ಅಲ್ಲಿ ಉತ್ತರ ಕೊಡುವಾಗ ಕನ್ನಡದಲ್ಲಿ ಉತ್ತರ ಕೊಡಲಿ ಎಂದು ಉಪಯುಕ್ತ ಸಲಹೆಗಳನ್ನು ನೀಡುತ್ತಾರೆ. ಇದು ಕೂಡ ಕನ್ನಡ ಅಭ್ಯುದಯ ದೃಷ್ಟಿಯಿಂದಲೇ. ಅವರ ಕನ್ನಡ ಪ್ರೇಮ ಎಲ್ಲೆಲ್ಲೂ ಅಂದರೆ ನಿಂತಿರಲಿ, ಕುಳಿತಿರಲಿ, ಪಾಠ ಹೇಳುತ್ತಿರಲಿ, ಬೇರೆಯವರ ಜೊತೆ ಮಾತನಾಡುತ್ತಿರಲಿ ಅವರನ್ನು ಮಾತ್ರ ಬಿಟ್ಟಿದ್ದಲ್ಲ. ಇವರು ಅಧ್ಯಾಪಕರಾಗಿದ್ದಾಗ ಐಚ್ಛಿಕ ಕನ್ನಡಕ್ಕೆ ವಿದ್ಯಾರ್ಥಿಗಳು ಸೇರಲು ಹೆದರುತ್ತಿದ್ದರು. ಅಂಥ ಸಂದರ್ಭದಲ್ಲಿ ದೇ.ಜವರೇಗೌಡ ಕನ್ನಡ ಅಧ್ಯಾಪಕರನ್ನು ಕರಣಿಕನ ಹತ್ತಿರ ಕೂರಿಸಿ ಹೊಸದಾಗಿ ಪ್ರವೇಶ ಪಡೆಯಲು ಬಂದ ವಿದ್ಯಾರ್ಥಿಗೆ ಬಲತ್ಕಾರದಿಂದಲೇ ಐಚ್ಛಿಕ ಕನ್ನಡಕ್ಕೆ ಎಳೆದದ್ದು ಉಂಟು. ಇದಕ್ಕೆಲ್ಲ ಕಾರಣ ಐಚ್ಛಿಕ ಕನ್ನಡ ವಿದ್ಯಾರ್ಥಿಗಳು ಕನ್ನಡವನ್ನು ಓದಿಕೊಂಡರೆ ನಾಲ್ಕಾರು ಜನರಿಗೆ ಕನ್ನಡ ಪ್ರೇಮವನ್ನು ಹಂಚುತ್ತಾರೆ. ಕನ್ನಡದಲ್ಲಿ ಏನಾದರೂ ಕೆಲಸ ಮಾಡುತ್ತಾರೆ ಎಂಬುದು ದೇ. ಜವರೇಗೌಡರ ಆಲೋಚನೆಯಾಗಿತ್ತು. ಅವರು ಎಲ್ಲಿ ಹೋಗುತ್ತಾರೋ ಅಲ್ಲೆಲ್ಲ ಐಚ್ಛಿಕ ಕನ್ನಡ ತರಗತಿ ಇದೆಯೇ? ಎಂಬುದನ್ನು ಮೊದಲು ವಿಚಾರಿಸುತ್ತಿದ್ದರು. ಅದಕ್ಕೋಸ್ಕರ ಹಲವಾರು ಕಮಿಟಿಗಳಿಗೆ ತಾವೇ ಸ್ವತಃ ಹಾಕಿಸಿಕೊಂಡು ಬೇರೆ ಬೇರೆ ಕಾಲೇಜುಗಳಿಗೆ ಹೋಗಿ ಕನ್ನಡವನ್ನು ಬೆಳೆಸುವ ದೃಷ್ಟಿಯಿಂದ ಐಚ್ಛಿಕ ಕನ್ನಡ ವಿಭಾಗವನ್ನು ಬೆಳೆಸುವಂತೆ ಪ್ರೇರೇಪಣೆ ನೀಡಿದರು.

ದೇ. ಜವರೇಗೌಡರ ಶಿಕ್ಷಣ ಪರಚಿಂತನೆಗಳಲ್ಲಿ ಬಹಳ ಮುಖ್ಯವಾದದ್ದು ಅವರ ಸಮೂಹ ಕೇಂದ್ರಿತ ಮನೋಧರ್ಮ. ದೇ. ಜವರೇಗೌಡ ಕೇವಲ ವ್ಯಕ್ತಿಯಲ್ಲ ಅವರೊಂದು ಶಕ್ತಿ ಎಂಬುದಾಗಿಸಿದ್ದು ಕನ್ನಡ ಅಧ್ಯಯನ ಸಂಸ್ಥೆ. ದೇ.ಜವರೇಗೌಡ ಬರುವವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಎಂಟು ಪತ್ರಿಕೆ, ನಾಲ್ಕು ಜನ ಕನ್ನಡ ಅಧ್ಯಾಪಕರನ್ನು ಒಳಗೊಂಡ ಒಂದು ಸೀಮಿತ ಕ್ಷೇತ್ರವಾಗಿತ್ತು. ಪ್ರತಿವರ್ಷ ಹತ್ತಾರು ವಿದ್ಯಾರ್ಥಿಗಳಿಗೆ ಬೋಧಿಸುತ್ತಾ, ಜೀವನದುದ್ದಕ್ಕೂ ಒಂದೆರಡು ಪುಸ್ತಕ, ಹತ್ತಾರು ಲೇಖನ ಬರೆಯುವುದೇ ಜೀವನದ ಧನ್ಯತೆ, ವಿಭಾಗದ ಸಾರ್ಥಕತೆ ಎಂದು ಅಲ್ಲಿಯ ಅಧ್ಯಾಪಕರು ಭಾವಿಸಿದ್ದರು. ಇದರಿಂದ ವಿಭಾಗ ಕೇವಲ ಒಂದು ಕೂಪವಾಗಿ ಮಾರ್ಪಟ್ಟಿದ್ದಿತು. ಒಕ್ಕಲುಮಗ ದೇ.ಜವರೇಗೌಡ ಅವರು ಅಧಿಕಾರ ವಹಿಸಿಕೊಳ್ಳುತ್ತಲೇ ಕಾಲುವೆಗಳನ್ನು

ತೋಡಿ, ಆ ಕೂಪವನ್ನು ಹತ್ತೂ ಕಡೆಗೆ ಹರಿಗಡಿದುದು. ಅದನ್ನು ಪ್ರವಾಹವಾಗಿ ಜನತೆಯ ಹತ್ತಿರ ಒಯ್ದುದು ಒಂದು ಚರಿತ್ರಾರ್ಹ ಘಟನೆಯೆನಿಸಿದೆ. ಈವರೆಗೆ ಕನ್ನಡದ ಗುಡಿಯಾಗಿ ನಿಂತಿದ್ದ ವಿಭಾಗ ಈಗ ರಥವಾಗಿ ಚಲಿಸ ತೊಡಗಿತು. ಈ ರಥಕ್ಕೆ ಎಳೆಯುವ ಎತ್ತು ಉರುಳುವ ಗಾಲಿಯಾದರು ದೇ. ಜವರೇಗೌಡ ಇವೆಲ್ಲವನ್ನೂ ಕನ್ನಡ ಅಭಿವೃದ್ಧಿಗಾಗಿ ಮಾಡಿದವರಾಗಿದ್ದಾರೆ. ದೇ. ಜವರೇಗೌಡ ವಿಶ್ವವಿದ್ಯಾನಿಲಯಕ್ಕೆ ಬಂದ ಮೇಲೆ ಈ ಜನತೆ ಒಂದು ಕಡೆ, ವಿದ್ವಜ್ಜನತೆ ಒಂದು ಕಡೆ ಎಂಬ ವಿಲಕ್ಷಣ ವಾತಾವರಣವನ್ನು ಸೃಷ್ಠಿ ಮೂಡಲಿಲ್ಲ. ಇವುಗಳ ಸಮನ್ವಯದ ಕನಸನ್ನು ಕಂಡು ಅವನ್ನೂ ನನಸಾಗಿಸುವ ಒಂದು ವಿನೂತನ ಪ್ರಯೋಗ ಮಾಡಿದವರು ಇವರು.

"ಕನ್ನಡ ವಿಭಾಗ" ಕರ್ನಾಟಕ ವಿಭಾಗವಾಗ ತೊಡಗುತ್ತಿರುವಾಗಲೇ ದೇ. ಜವರೇಗೌಡ ಅವರು ಕನ್ನಡ ಅಧ್ಯಯನ ಸಂಸ್ಥೆಯನ್ನಾಗಿ ಪರಿವರ್ತಿಸಿದರು. ಇವರು ಮಾಡಿದ ಈ ಕೆಲಸ ಕನ್ನಡ ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ದೊಡ್ಡ ತಿರವು ಪಡೆಯಿತು. ಇದೇ ಸಂದರ್ಭದಲ್ಲಿ ಅವರು ಮಾಡಿದ ಮೊದಲ ಕೆಲಸವೆಂದರೆ ಸ್ನಾತಕೋತ್ತರ ಕೋರ್ಸ್ ಪಠ್ಯಕ್ರಮಗಳಿಗೆ ಬದಲಾಗಿ ಮುಕ್ತ ಪಠ್ಯಕ್ರಮ ರೂಪಿಸಿದು ಮಹತ್ವದ ಅಂಶಗಳಲ್ಲಿ ಒಂದಾಗಿದೆ. ಈಗ ಇರುವ ಕಡ್ಡಾಯ ಪತ್ರಿಕೆಗಳಲ್ಲಿ ವೈವಿಧ್ಯತೆ ಕಂಡು ಬಂದಿತ್ತು. ಐಚ್ಛಿಕ ಕನ್ನಡ ಪತ್ರಿಕೆಗಳ ಸಂಖ್ಯೆ ದಿನೇ ದಿನೇ ಬೆಳವಣಿಗೆಯಾಯಿತು. ಅಂದಿನಿಂದಲೇ ದಕ್ಷಿಣ ಭಾರತ, ಭಾರತ ಮತ್ತು ಭಾರತೋತ್ತರ ವಿದ್ಯೆಗಳ ಸೇತುವೆ ಕನ್ನಡ ಪಠ್ಯಕ್ಕೆ ಪ್ರಾಪ್ತವಾಯಿತು. ಒಂದು ರೀತಿಯಲ್ಲಿ ಪ್ರೌಢ ಅಧ್ಯಯನವನ್ನು ಪ್ರಾರಂಭಿಸಿ, ರಕ್ತಹೀನತೆಯಿಂದ ಬಳಲುತ್ತಿದ್ದ ಸ್ನಾತಕೋತ್ತರ ಪಠ್ಯಕ್ರಮ ಮಾಂಸಖಂಡ ತುಂಬಿಕೊಂಡು ಬೆಳೆದು ದಷ್ಟಪುಷ್ಟವಾಯಿತು. ಇದಕ್ಕೆ ಪೂರಕವಾಗಿಯೇ ಭಾಷಾಶಾಸ್ತ್ರ, ದಕ್ಷಿಣ ಭಾರತೀಯ ಸಾಹಿತ್ಯ ಜಾನಪದ - ಹೀಗೆ ಇನ್ನೂ ಮೂರು ಸ್ನಾತಕೋತ್ತರ ವರ್ಗಗಳನ್ನು ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಿ ಜಾರಿಗೆ ತಂದರು. ಅದೇ ಅಲ್ಲದೆ ಕನ್ನಡ ಬೆಳವಣಿಗೆಯ ದೃಷ್ಟಿಯಿಂದ ಅನೇಕ ಡಿಪ್ಲೊಮ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಿದರು. ಜಗತ್ತಿನ ಎಲ್ಲ ಜ್ಞಾನವೂ ಕನ್ನಡದಲ್ಲಿ ಲಭ್ಯವಿರಬೇಕೆಂಬ ಸದುದ್ದೇಶದಿಂದ ಪ್ರಾರಂಭಿಸಲಾದ ಕನ್ನಡ ಅಧ್ಯಯನ ಸಂಸ್ಥೆ,

ಕನ್ನಡ ಸಾಹಿತ್ಯ ಬೋಧನೆ, ಸಂಶೋಧನೆಗಳೇ ಅಲ್ಲದೇ ಬೇರೆ ಬೇರೆ ಶಾಸ್ತ್ರ ವಿಷಯಗಳನ್ನು ಕುರಿತು ಕನ್ನಡದಲ್ಲಿ ವೈಚಾರಿಕ ಗ್ರಂಥಗಳ ಮತ್ತು ಪಠ್ಯ ಪುಸ್ತಕಗಳ ರಚನೆ, ಪ್ರಾಚೀನ ಕನ್ನಡ ಕೃತಿಗಳ ಸಂಪಾದನೆ, ಭಾಷಾಂತರ, ಭಾರತೀಯ ಸಾಹಿತ್ಯದ ಭೋದನೆ, ಎಪಿಗ್ರಾಫಿಯಾ ಕರ್ನಾಟಿಕದ ಪರಿಷ್ಕರಣ ಹಾಗೂ ಮುದ್ರಣ. ಕನ್ನಡದಲ್ಲಿ ವಿಶ್ವಕೋಶದ ಬೃಹತ್ ಸಂಪುಟಗಳ ಪ್ರಕಟಣೆ, ಅನ್ಯಭಾಷಿಕರಿಗೆ ಕನ್ನಡ ಭಾಷೆಯ ಬೋಧನೆ, ಜಾನಪದ ಹೀಗೆ ಹಲವಾರು ವಿಭಾಗಗಳನ್ನು ತೆರೆದು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ದಾಪುಗಾಲು ಇಟ್ಟರು. ಇವರ ಮುಖ್ಯವಾದ ಆಲೋಚನೆಯೆಂದರೆ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಲ್ಲದಕ್ಕೂ ಕನ್ನಡದ ರೂಪ ಕೊಡಬೇಕು, ಕನ್ನಡದಲ್ಲಿ ಸಕಲ ಜ್ಞಾನಗಳ ದರ್ಶನವಾಗಬೇಕು. ಇಡೀ ಕರ್ನಾಟಕದಲ್ಲೇ ಒಂದು ಸೂರ ಅಡಿಯಲ್ಲಿ ಬೇರೆ-ಬೇರೆ ಅಂಗಗಳನ್ನು ಕೂಡಿಸುವ ಒಂದು ಮಹಾ ಪ್ರಯೋಗ ನಡೆದಿದ್ದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲು, ಅದರಲ್ಲೂ ಪುಸ್ತಕ ಪ್ರಕಟಣೆಯೆಂದರೆ ದೇ.ಜವರೇಗೌಡ ಅವರಿಗೆ ವಿಶೇಷ ಪ್ರೀತಿ. ಸಂಶೋಧನೆ ಕೇವಲ ಬೌದ್ಧಿಕಶ್ರಮದಲ್ಲಿ ಪರ್ಯವಸಾನಗೊಳ್ಳದೆ, ಪ್ರಕಟಣಾ ರೂಪದಲ್ಲಿ ಕಾಣಿಸಿಕೊಳ್ಳಬೇಕೆಂಬ ಉತ್ಕಟ ಹಂಬಲ ಅವರದು. ಪ್ರಸಾರಂಗದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದ ಅವರಿಗೆ ಪ್ರಕಟಣೆಯ ಕಷ್ಟ ಸುಖಗಳ ವಾಸ್ತವ ಸ್ಥಿತಿಯ ಪರಿಚಯವಿದ್ದಿತು. ಈ ಅನುಭವವನ್ನು ಆಧಾರವಾಗಿಟ್ಟುಕೊಂಡು ಪ್ರಯತ್ನಿಸುವಲ್ಲಿ ಪ್ರಸಾರಂಗದ ಪ್ರಕಟಣೆಗಳೆಂದರೆ ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆಗಳೇ ಎಂಬಂತೆ ಪುಸ್ತಕಗಳ ಮೇಲೆ ಪುಸ್ತಕಗಳ ಹೊರಬಂದವು. ಸಾಲದುದ್ದಕ್ಕೆ ವಿಚಾರ ಸಂಕಿರಣ, ಕಮ್ಮಟ, ಸಭೆ ಸಮಾರಂಭಗಳು ವರ್ಷದುದ್ದಕ್ಕೂ ಜರುಗಿ, ವಿಶ್ವವಿದ್ಯಾನಿಲಯದ ಆವರಣದಲ್ಲಿ ಕನ್ನಡಕ್ಕೆ, ಕನ್ನಡ ಅಧ್ಯಯನ ಸಂಸ್ಥೆಗೆ ಘನತೆ ಗೌರವಗಳು ಪ್ರಾಪ್ತವಾದವು. ಈಗ ಕನ್ನಡದ ಸರ್ವಸಮಸ್ಯೆಗಳಿಗೆ ಪರಿಹಾರ ನೀಡುವ ಕೇಂದ್ರ ವ್ಯಕ್ತಿಯಾಗಿ ಕನ್ನಡ ಪರಹಿತಚಿಂತಕರಾಗಿ ದೇ. ಜವರೇಗೌಡರು ರಾಜ್ಯ ಮಟ್ಟದಲ್ಲಿ ಕಂಗೊಳಿಸಿದರು. ಹೀಗೆ ಇವರ ಕನ್ನಡ ಕಟ್ಟುವ ಮತ್ತು ಬೆಳೆಸುವ ಕ್ರಿಯೆ ಪ್ರಯೋಗಶೀಲವಾದದ್ದು ಮತ್ತು ಸಾರ್ವತ್ರಿಕವಾದುದಾಗಿದೆ.

೨. ಕನ್ನಡ ಆಡಳಿತ ಕ್ಷೇತ್ರದಲ್ಲಿ ಪ್ರಮುಖ ಮಾಧ್ಯಮವಾಗಬೇಕು

ಕರ್ನಾಟಕ ಏಕೀಕರಣ ಸಾಧನೆಯಾಗಿ ಮೂವತ್ತನಾಲ್ಕು ವರ್ಷಗಳು ಮುಗಿಯುತ್ತಲಿವೆ. ಯಾವ ಉದ್ದೇಶದಿಂದ ಭಾಷಾವಾರು ಪ್ರಾಂತ ರಚನೆಗೆ ರಾಷ್ಟ್ರಪಿತ ಗಾಂಧೀಜಿ ಆರ್ಶೀವಾದ ನೀಡಿದ್ದರೋ ಯಾವ ಕಾರಣಕ್ಕಾಗಿ ನಾಡಿನ ಜನ ಅದಕ್ಕಾಗಿ ಹಾ ತೊರೆದರೋ ಆ ಕಾರಣ ಉದ್ದೇಶಗಳು ಇನ್ನೂ ಈಡೇರದಿರುವುದು ದುರ್ದೈವದ ಸಂಗತಿಯಾಗಿದೆ. ಕೇವಲ ಐದಾರು ತಿಂಗಳಲ್ಲಿ ಈಡೇರಬೇಕಾಗಿದ್ದ ಈ ಕಾರ್ಯ ಇನ್ನೂ ಈಡೇರದಿರುವುದು ನಿರ್ವೀರ್ಯತೆಗೂ ಈವರೆಗಿನ ಮುಖ್ಯಮಂತ್ರಿಗಳ ಅಸಾಮರ್ಥ್ಯಕ್ಕೂ ಸಾಕ್ಷಿಯಾಗಿದೆಯೆಂದು ಸ್ಪಷ್ಟಪಡಿಸಬೇಕಾಗಿದೆ.

ಕನ್ನಡನಾಡು ನುಡಿ, ನೆಲ, ಜಲ ಇವುಗಳನ್ನು ಕುರಿತು ಯಾವ ಸೊಲ್ಲೆತ್ತಿದರು ಅದು ಪುನರಾವರ್ತನೆಯಾಗುತ್ತದೆ. ಅಷ್ಟರಮಟ್ಟಿಗೆ ಚಳವಳಿಗಳು, ಹೋರಾಟಗಳು, ಚಿಂತನ ಮಂಥನಗಳಾಗಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಕನ್ನಡಕ್ಕೆ ಸರಿಯಾದ ಸ್ಥಾನಮಾನ ದೊರೆಯಬೇಕು, ಕನ್ನಡ ಭಾಷೆ ಸರ್ವತೋಮುಖವಾಗಿ ಅಭಿವೃದ್ಧಿಹೊಂದಬೇಕು, ಕನ್ನಡ ಭಾಷೆಯೇ ಕರ್ನಾಟಕದಲ್ಲಿ ಆಡಳಿತ ಭಾಷೆಯಾಗಬೇಕು ಎಂಬ ಹಂಬಲದಿಂದ ಬಹಳ ಹಿಂದಿನಿಂದಲೂ ಹಲವರು ಹೋರಾಟ ಮಾಡುತ್ತಾ ಬಂದಿರುವುದನ್ನು ಕಂಡರೂ ಕನ್ನಡದ ಏಳ್ಗೆಗಾಗಿ. ತಮ್ಮ ಜೀವನವನ್ನು ಮುಡಿಪಾಗಿಟ್ಟು ಹೋರಾಡಿದವರಲ್ಲಿ ದೇ. ಜವರೇಗೌಡರು ಅಗ್ರಗಣ್ಯರಾಗಿದ್ದಾರೆ. ಭಾಷೆಯ ಗೊಂದಲದಲ್ಲಿ ತೊಳಲುತ್ತಿದ್ದ ಪರಿಸ್ಥಿತಿಯಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಸರಿಯಾದ ವ್ಯಕ್ತಿಯನ್ನು ಕಾಯುತ್ತಿದ್ದ ಕಾಲದಲ್ಲಿಯೇ ದೇ. ಜವರೇಗೌಡರು ಬಂದು ಕನ್ನಡದ ವಿಷಯದಲ್ಲಿ ಜವರಾಯಿ ಗೌಡರಾಗಿಯೇ ಕೆಲಸ ಮಾಡಿ ಕನ್ನಡಕ್ಕೊಂದು ಶಕ್ತಿಯಾದರು.

ದೇ. ಜವರೇಗೌಡ ಅವರೇ ಹೇಳುವಂತೆ "ಕನ್ನಡ ಆಡಳಿತ ಭಾಷೆಯಾದೊಡನೆ ಶಿಕ್ಷಣ ಮಾಧ್ಯಮ ಕನ್ನಡವಾಗುತ್ತದೆ. ಕಾನ್ವೆಂಟುಗಳು ಸಹ ಕನ್ನಡ ಮಾಧ್ಯಮದ ಮೂಲಕ ಸಕಲ ವ್ಯವಹಾರಗಳನ್ನು ಒದಗಿಸುತ್ತಾರೆ. ತಾಂತ್ರಿಕ ಕಾಲೇಜುಗಳಿಗೂ ಕನ್ನಡ ಮಾಧ್ಯಮ ಲಗ್ಗೆ ಹೂಡುತ್ತದೆ.

ಲೋಕಸೇವಾ ಆಯೋಗ ಅನಿವಾರ್ಯವಾಗಿ ಎಲ್ಲ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಬೇಕಾಗುತ್ತದೆ. ಕೋರ್ಟುಗಳ ಭಾಷೆಯಲ್ಲಿಯೂ ಪರಿವರ್ತನೆ ಸಾಧ್ಯವಾಗುತ್ತದೆ. ನಾನಾ ಭಾಷೆಗಳನ್ನು ಮಾತಾಡುವ ಜನ ಕನ್ನಡವನ್ನು ಬಳಸುವಾಗ ಅದಕ್ಕೆ ವೈಶಾಲ್ಯ ಸಮನಿಸುತ್ತದೆ. ಕೇಂದ್ರ ಸರ್ಕಾರದ ಕಚೇರಿಗಳು, ಅನ್ಯಭಾಷಾದ್ವೀಪಗಳಾಗಿ ರಾಜ್ಯದಲ್ಲುಳಿಯಲು ಕಷ್ಟವಾಗುತ್ತದೆ. ಇಷ್ಟೆಲ್ಲ ಸಾಧ್ಯವಾದಾಗ ಭಾಷೆಯಲ್ಲಿ ಕ್ರಾಂತಿ ಸಂಭವಿಸುತ್ತದೆ, ಎನ್ನುತ್ತಾರೆ.

ಬ್ರಿಟಿಷರ ಕಾಲದಲ್ಲಿ ಕನ್ನಡಕ್ಕೆ ಯಾವ ರೀತಿಯ ತೊಂದರೆಯಾಗಿರಲಿಲ್ಲ. ಈ ಮಾತಿಗೆ ಸಾಕ್ಷಿಯಾಗಿ ವ್ಯಾಕರನಾದ ಬಿ.ಮಲ್ಲಪ್ಪ ಅವರಿಗೆ ಅಂದಿನ ಸರ್ಕಾರದ ಕಾರ್ಯದರ್ಶಿ ಬಿ.ಎಲ್.ರೈಸ್ ಅವರು ಬರೆದ ನಿರೂಪದ ಪ್ರತಿಯೊಂದನ್ನಿಲ್ಲಿ ಉದ್ಧರಿಸಬಹುದಾಗಿದೆ.

ಮೈಸೂರು ಸೀಮೆಯ ವಿದ್ಯಾಭ್ಯಾಸದ ಸೆಕ್ರೆಟರಿ ಆಫೀಸಿನಿಂದ ಮೈಸೂರು ಗೌ|| ಕನ್ನಡ ಸ್ಕೂಲ್ ಹೆ|| ಮಾಸ್ಟರ್ ಬಿ. ಮಲ್ಲಪ್ಪನವರಿಗೆ ಹುಕ್ಕುಂ ಆಂಕೀ.....

ನೀವು ಗುಜರಾಯಿಸಿದ ಮಾಹೆ ಜುಲೈ ೧೯ನೇ ಮರಕುಂ ರಿಜಿಸ್ಟರ್ ದಾಖಲೆ ೨೪೫೩ನೇ ಅರ್ಜಿ ವಿವರ ತಿಳಿಯಲಾಯಿತು.

ಈ ಆಫೀಸ್ಸಿನ ಕನ್ನಡ ಟ್ರಾನ್ಸ್‌ಸ್ಲೇಟರ್ ಕೆಲಸಕ್ಕೆ ನಿಮ್ಮನ್ನು ಮೊಖರೂರ್ಮಾಡತಕ್ಕ ವಿಷಯದಲ್ಲಿ ಶಿಫಾರಸ್ ಮಾಡಲ್ಪಡಲು ನಿಮಗೆ ಇಷ್ಟವುಂಟೆ ಆಬಗ್ಗೆ ತಿಳಿಸುವುದು.

ತಾರೀಖು ೧೨ನೇ ಮಾಹೆ ಸೆಪ್ಟೆಂಬರ್	ಸಹಿ
ಸನ್ ೧೮೮೩ನೇ ಇಸವಿ	L. Rice,
ದರಜಾಗ ಬೆಂಗಳೂರು	Edn. Secretary

ಒಂದು ಶತಮಾನದ ಹಿಂದೆ ಕನ್ನಡದ ಪರಿಸ್ಥಿತಿ ಸ್ಥಾನಮಾನಗಳು ಇಂದಿಗಿಂತ ಉತ್ತಮವಾಗಿದ್ದುವೆಂದು ನಿಸ್ಸಂಕೋಚವಾಗಿ ಹೇಳಬಹುದಾಗಿದೆ. ಆಂಗ್ಲರು ಈ ರಾಷ್ಟ್ರದಿಂದ ಕಾಲ್ಕಿತ್ತನಂತರ ಕನ್ನಡಕ್ಕೆ ತೊಂದರೆಯಾಯಿತೇ ಹೊರತು ಉಪಕಾರವಾಗಲಿಲ್ಲ ಎಂದು ತಿಳಿಸುತ್ತಾರೆ.

ದೇ. ಜವರೇಗೌಡ ಉಪಕುಲಪತಿಗಳಾದಾಗ ವಿಶ್ವವಿದ್ಯಾನಿಲಯ ಮತ್ತು ಸರ್ಕಾರಿ ಕೆಲಸ ಮಾಡುವವರಿಗಾಗಿ 'ಕಛೇರಿ ಕೈಪಿಡಿ' ಪುಸ್ತಕವನ್ನು ಹೊರ ತಂದುದು ಇವರ ಧೈರ್ಯ ಸಾಹಸಗಳಿಗೆ ಹಿಡಿದ ಕನ್ನಡಿಯಾಗಿದೆ. "ಇವರು ಕುಲಪತಿಗಳಾದಾಗ ಕನ್ನಡ ಬೆಳವಣಿಗೆಯ ದೃಷ್ಟಿಯಿಂದ ನಾಮ ಕಾಮಧೇನು ಕಲ್ಪವೃಕ್ಷಕ್ಕೆ ಕಟ್ಟಿದಂತಾಯಿತು ಎಂದು ಭಾವಿಸಿದೆವು" ಎಂದು ಪ್ರಭುಶಂಕರ ಅವರ ಮಾತು ಅಕ್ಷರಶಃ ಸತ್ಯವಾದುದಾಗಿದೆ.

ಕನ್ನಡ ಆಡಳಿತ ಮಾಧ್ಯಮ ಹಾಗೂ ಕನ್ನಡ ಸ್ಥಾನ ಸುಭದ್ರಗೊಳ್ಳಬೇಕಾದರೆ ಅವರು ನೀಡಿರುವ ಸಲಹೆಗಳೆಂದರೆ,[೧೦]

೧. ಶಾಸನದತ್ತ ಅಧಿಕಾರವುಳ್ಳ ಕನ್ನಡ ವಿರೋಧಿ ಅಧಿಕಾರಿಗಳನ್ನು ಶಿಕ್ಷಿಸುವ ಕಮೀಷನ್ನರ ನೇಮಕವಾಗಬೇಕು.

೨. ಶಿಕ್ಷಣ ಇಲಾಖೆ ಮತ್ತು ವಿಶ್ವವಿದ್ಯಾನಿಲಯಗಳು ಕೂಡಲೇ ಕನ್ನಡ ಮಾಧ್ಯಮ ವನ್ನಂಗೀಕರಿಸುವಂತೆ ಆಜ್ಞೆ ಮಾಡಬೇಕು. ಕನ್ನಡ ಮಾಧ್ಯಮ ಕಾಲೇಜುಗಳಿಗೆ ಪ್ರೋತ್ಸಾಹಧನ ನೀಡತಕ್ಕದ್ದು.

೩. ಕನ್ನಡ ಬಾರದವರನ್ನು ಸರ್ಕಾರೀ ಅಥವಾ ಸರ್ಕಾರೀ ಪೋಷಿತ ಇಲಾಖೆ ಅಥವಾ ಸಂಸ್ಥೆಗಳಿಗೆ ನೇಮಿಸಿಕೊಳ್ಳದಂತೆ ನಿರೂಪ ಹೊರಡಿಸಬೇಕು.

೪. ಕನ್ನಡ ಬಾರದ ಸಣ್ಣ ದೊಡ್ಡ ಅಧಿಕಾರಿಗಳಿಗೆ ಆಡಳಿತ ತರಬೇತಿ ಕೇಂದ್ರಗಳಲ್ಲಿ ಕನ್ನಡ ಕಲಿಕೆಗಾಗಿಯೇ ಆರು ತಿಂಗಳನ್ನು ಮೀಸಲಿರಿಸ ತಕ್ಕದ್ದು.

೫. ರಾಜ್ಯದೊಳಗಿನ ಪತ್ರ ವ್ಯವಹಾರಗಳು ಕನ್ನಡದಲ್ಲಿದ್ದರೆ ಮಾತ್ರ ಪುರಸ್ಕಾರ ನೀಡತಕ್ಕದ್ದು. ಇಂಗ್ಲಿಷ್‌ನಲ್ಲಿದ್ದವನ್ನು ಗೊಟ್ಟಕ್ಕೆಸೆಯ ತಕ್ಕದ್ದು.

೧೦- ಕನ್ನಡ ಚಿಂತನೆ - ಡಾ. ದೇ. ಜವರೇಗೌಡ ಪ್ರಕಟಣೆ ಕನ್ನಡ ಹಂಪಿ ವಿಶ್ವವಿದ್ಯಾನಿಲಯ, ಹಂಪಿ 2002 ಪುಟ-೭೧-೭೨.

೬. ಕನ್ನಡದ ಬೆರಳಚ್ಚು ಕಲಿಯದವರಿಗೆ ಅಥವಾ ಕನ್ನಡದಲ್ಲಿ ಪತ್ರ ವ್ಯವಹಾರ ನಡೆಸದವರಿಗೆ ಬಡ್ತಿ ನೀಡಕೂಡದು.

೭. ರಾಜ್ಯದೊಳಗಿನ ಕೇಂದ್ರ ಸರ್ಕಾರದ ಕಚೇರಿಗಳೂ ರಾಜ್ಯದ ಒಳವ್ಯವಹಾರಗಳಿಗೆ ಕನ್ನಡವನ್ನೇ ಬಳಸತಕ್ಕದ್ದು. ಅವಶ್ಯವೆನಿಸಿದರೆ ಆ ಅಧಿಕಾರಿಗಳಿಗೂ ಕನ್ನಡದ ತರಬೇತಿಗೆ ಅವಕಾಶ ಕಲ್ಪಿಸತಕ್ಕದ್ದು.

೮. ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಒಂದೇ ಪ್ರಥಮ ಭಾಷೆಯೆಂದೂ ಉಳಿದವು ದ್ವಿತೀಯ, ತೃತೀಯ ಸ್ಥಾನಗಳಲ್ಲಿ ನಿಲ್ಲಬಹುದೆಂದೂ ಘೋಷಿಸತಕ್ಕದ್ದು.

೯. ಲೋಕಸೇವಾ ಆಯೋಗದ ಪರೀಕ್ಷೆಗಳು ಪೂರ್ಣವಾಗಿ ಕನ್ನಡದಲ್ಲಿಯೇ ನಡೆಯತಕ್ಕದ್ದೆಂದೂ ಮೂರು ವರ್ಷ ಮಾತ್ರ ಆಂಗ್ಲ ಭಾಷೆಯಲ್ಲಿಯೂ ಮುಂದುವರಿಯಬಹುದೆಂದೂ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಕನ್ನಡ ಪತ್ರಿಕೆ ಕಡ್ಡಾಯವಾಗಬೇಕೆಂದೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕಡ್ಡಾಯವಾಗಿರಕೂಡದೆಂದೂ ಸ್ಪಷ್ಟ ಪಡಿಸತಕ್ಕದ್ದು.

೧೦. ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಕಛೇರಿಗಳು ಮತ್ತು ಕಾರ್ಖಾನೆಗಳ ನೌಕರರು ಕನ್ನಡಿಗರೊಡನೆ ವ್ಯವಹಾರ ನಡೆಸುತ್ತ ಅವರೊಡನೆ ಸಾಮರಸ್ಯದಿಂದ ಬಾಳಬೇಕಾಗಿರುವುದರಿಂದ ಅಲ್ಲಿಯ ಕನ್ನಡೇತರರಿಗೆ ಕನ್ನಡದ ಪರಿಚಯವನ್ನು ಕಡ್ಡಾಯಗೊಳಿಸಬೇಕು. ಅಷ್ಟೇ ಅಲ್ಲ ಅಲ್ಲಿ ಬಳಸುವ ಫಾರಂ ವಗೈರಿಗಳು ಕನ್ನಡದಲ್ಲಿಯೂ ಇರಬೇಕು.

೧೧. ವರಿಷ್ಠ ನ್ಯಾಯಾಲಯ, ರಾಯಭಾರಿ ಇಲಾಖೆ, ಕೇಂದ್ರ ಲೋಕಸೇವಾ ಆಯೋಗ ಇವೇ ಮೊದಲಾದ ಪ್ರತಿಷ್ಠೆಯ ಕಛೇರಿಗಳಲ್ಲಿ ಕನ್ನಡಿಗರಿಗೆ ಉಚಿತ ಸ್ಥಾನವಿರಬೇಕು. ಕೇಂದ್ರ ಕಾರ್ಯ ಸೌಧದ ಗುಮಾಸ್ತೆ, ಸೂಪರಿಂಟೆಂಡೆಂಟ್ ಹುದ್ದೆಗಳಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಎಲ್ಲಾ ರಾಜ್ಯಗಳವರಿಗೂ ಪ್ರಾತಿನಿಧ್ಯವಿರತಕ್ಕದ್ದು. ಹಾಗಿಲ್ಲದಿದ್ದಲ್ಲಿ ಸವಲತ್ತು ಸೌಲಭ್ಯಗಳು

ಎಲ್ಲಾ ರಾಜ್ಯಗಳಿಗೂ ಸಮನಾಗಿ ಹಂಚಿಕೆಯಾಗುವುದಿಲ್ಲ. ಆ ಹುದ್ದೆಗಳಿಗೆ ಹೋಗುವವರು ಸಂಪರ್ಕ ಭಾಷೆಯನ್ನು ಕಲಿತಿರಬೇಕು.

೧೨. ಸರ್ಕಾರದ ಎಲ್ಲ ಹಂತಗಳಲ್ಲಿಯೂ ಏಕಕಾಲದಲ್ಲಿ ಕನ್ನಡ ಮಾಧ್ಯಮ ಜಾರಿಗೆ ಬರದಿದ್ದರೆ ಅದು ಯಶಸ್ವಿಯಾಗುವುದಿಲ್ಲವೆಂಬುದನ್ನು ಸಚಿವ ಸಂಪುಟ ಮನದಟ್ಟು ಮಾಡಿಕೊಳ್ಳಬೇಕು. ಸರ್ಕಾರಿ ಹುಕುಂಗಳೆಲ್ಲ ಕನ್ನಡದಲ್ಲಿಯೇ ಬರತಕ್ಕದ್ದೆಂದೂ ಶಾಸನಗಳ ಕರಡುಗಳನ್ನು ಕನ್ನಡದಲ್ಲಿಯೇ ತಯಾರಿಸಿ ಅವಶ್ಯವೆನಿಸಿದರೆ ಬೇರೆ ಭಾಷೆಗೆ ಪರಿವರ್ತಿಸಿಕೊಳ್ಳಬಹುದೆಂದೂ ಕೂಡಲೇ ತೀರ್ಮಾನ ಕೈಗೊಳ್ಳಬೇಕು.

ಈ ಮೇಲಿನ ಸೂತ್ರಗಳನ್ನು ಸರ್ಕಾರ ಕಟ್ಟುನಿಟ್ಟಾಗಿ ಪಾಲಿಸಿದಾಗ ಮಾತ್ರ ಅದರ ನಿಷ್ಠೆ ಸಾಬೀತಾಗುತ್ತದೆ. ಕನ್ನಡಕ್ಕೆ ನ್ಯಾಯವಾದ ಸ್ಥಾನಮಾನಗಳನ್ನು ಪಡೆದಂತಾಗುತ್ತದೆ ಇಲ್ಲವಾದರೆ ಕನ್ನಡಭಾಷೆ ವಿನಾಶಕ್ಕೆ ನಾಂದಿಯಾಗುತ್ತದೆ.

(ದೇ. ಜವರೇಗೌಡ ಅವರ) ಕನ್ನಡ ಪರ ಹೋರಾಟದ ಫಲವಾಗಿ ಆಂಗ್ಲಭಾಷೆ ಉಚ್ಚಾರಣೆಯಲ್ಲಿದ್ದ ಕೆಲವು ರಾಜ್ಯದ ಹೆಸರುಗಳನ್ನು ಕೆಲವೇ ದಿನಗಳಲ್ಲಿ ಕನ್ನಡಮಯ ಹೆಸರನ್ನೇ ಬಳಸಲಾಗುತ್ತದೆ. ಇದು ಕನ್ನಡ ಪರ ಹೋರಾಟಗಾರರಿಗೆ ಸಂದ ಫಲವಾಗಿರುತ್ತದೆ.

(ಭಾನುವಾರ ೧೫, ೨೦೦೭, ದಿನಪತ್ರಿಕೆ ಪ್ರಜಾವಾಣಿ, ಪುಟ ೮)

ಕನ್ನಡಮಯವಾಗಲಿರುವ ಒಟ್ಟು ೧೩ ನಗರಗಳೆಂದರೆ :

ಬ್ಯಾಂಗಲೂರ್	-	ಬೆಂಗಳೂರು
ಮೈಸೂರ್	-	ಮೈಸೂರು
ಬೆಲ್ಲಾರಿ	-	ಬಳ್ಳಾರಿ
ಮ್ಯಾಂಗಲೂರು	-	ಮಂಗಳೂರು
ಬಿಜಾಪುರ	-	ವಿಜಾಪುರ
ಬೆಳಗಾಂ	-	ಬೆಳಗಾವಿ
ಚಿಕ್ಕಮಗಳೂರ್	-	ಚಿಕ್ಕಮಗಳೂರು
ಗುಲ್ಬರ್ಗ	-	ಕಲುಬುರ್ಗಿ
ಹೊಸಪೇಟ್	-	ಹೊಸಪೇಟೆ
ಶಿಮೊಗ	-	ಶಿವಮೊಗ್ಗ
ಹುಬ್ಳಿ	-	ಹುಬ್ಬಳ್ಳಿ
ತುಮಕೂರ್	-	ತುಮಕೂರು
ಕಾಪ್	-	ಕಾಪು.

ಈ ಮೇಲಿನ ಎಲ್ಲಾ ನಗರಗಳು ಆಂಗ್ಲ ಉಚ್ಚಾರಣೆಯಿಂದ ಹೊರಗುಳಿದು, ಅಚ್ಚ ಕನ್ನಡದ ಹೆಸರುಗಳಿಂದ ಬಳಸುವ ಪ್ರಸ್ತಾವನೆ ನಿಜಕ್ಕೂ ಸರ್ಕಾರದ ಕಾರ್ಯ ವೈಖರಿಯನ್ನು ಮೆಚ್ಚಬೇಕಾದ್ದೆ. ಏಕೆಂದರೆ ಸುವರ್ಣ ಕರ್ನಾಟಕದ ಆಚರಣೆಯ ಸಂದರ್ಭದಲ್ಲಾದರೂ ಸಹಾ ಕನ್ನಡಮಯ ಹೆಸರಾಗುತ್ತಿರುವುದು ಹರ್ಷದ ಸಂಗತಿಯಾಗಿದೆ. ಇದಕ್ಕೆ ದೇ. ಜವರೇಗೌಡ ಅವರಂತಹ ಹೋರಾಟಗಾರರಿಗೆ ಸಂದ ಫಲವಾಗಿದೆ.

೩. ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳನ್ನು ಕನ್ನಡದಲ್ಲೇ ನಡೆಸಬೇಕು

ದೇ. ಜವರೇಗೌಡ ಅವರ ಕನ್ನಡ ಪರಚಿಂತನೆಗಳಲ್ಲಿ ಬಹಳ ಮುಖ್ಯವಾದ ಅಂಶವೆಂದರೆ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ (ಕೆ.ಪಿ.ಎಸ್.ಸಿ.) ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆಗಳು ಕನ್ನಡದಲ್ಲಿರಬೇಕು, ಉತ್ತರವೂ ಕನ್ನಡ ಮಾಧ್ಯಮದಲ್ಲೇ ಬರೆಯಬೇಕು ಎಂಬುದಾಗಿ ಅವರು ನಡೆಸಿದ ಹೋರಾಟದಿಂದಾಗಿ ಕನ್ನಡ ವಿದ್ಯಾರ್ಥಿಗಳಿಗೆ ಇಂದು ಗೌರವ ಸಿಗುವಂತಾಗಿದೆ.

ಕನ್ನಡದ ಸಮಸ್ಯೆಗಳು ಕೆಲವಲ್ಲ ಹಲವಾರು. ಅವುಗಳಲ್ಲಿ ಕನ್ನಡ ಆಡಳಿತ ಮಾಧ್ಯಮವಾಗಬೇಕು ಎಂಬ ವಿಷಯಕ್ಕೆ ಸಂಬಂಧಿಸಿದ್ದು. ಅದು ಶಿಕ್ಷಣ ಮಾಧ್ಯಮವಾಗದೆ ಆಡಳಿತ ಮಾಧ್ಯಮವಾಗಲಾರದು ಎಂಬ ಅಭಿಪ್ರಾಯವಿದೆ. ಇಂಥ ಅಭಿಪ್ರಾಯವನ್ನು ದೇ. ಜವರೇಗೌಡ ಅವರು ಸಮರ್ಥಿಸಿಕೊಳ್ಳುತ್ತಾ ಕನ್ನಡೇತರರಿಂದ ಅದಕ್ಕೆ ವಿರೋಧವಿರುವುದನ್ನು ಕಟುವಾಗಿ ಟೀಕಿಸುತ್ತಾರೆ. ಕರ್ನಾಟಕದಲ್ಲಿ ಕನ್ನಡ ಆಡಳಿತ ಮಾಧ್ಯಮವಾಗಬೇಕಾದ್ದು ಪ್ರಜಾಪ್ರಭುತ್ವದ ಲಕ್ಷಣ. ಧರ್ಮ, ನೀತಿ ಅದನ್ನು ವಿರೋಧಿಸುವ ಹಕ್ಕು ಯಾರಿಗೂ ಇಲ್ಲ. ಅದು ಆಡಳಿತ ಮಾಧ್ಯಮವಾಯಿತೆಂದರೆ ಎಲ್ಲ ಶಾಲಾ ಕಾಲೇಜುಗಳಲ್ಲಿ ಕನ್ನಡ ಪ್ರಮುಖ ಸ್ಥಾನವನ್ನು ಪಡೆಯುತ್ತದೆ ಎಂಬುದು ದೇ. ಜವರೇಗೌಡ ಅವರ ಸ್ಪಷ್ಟ ನಿಲುವಾಗಿದೆ.

"ಅಧಿಕಾರಶಾಹಿಯ ಹಿಡಿತದಲ್ಲಿರುವ ಸರ್ಕಾರಕ್ಕೆ ಕನ್ನಡದ ಬಗ್ಗೆ ವಿಶ್ವಾಸವಿಲ್ಲ ; ಅದನ್ನು ಆಡಳಿತ ಮಾಧ್ಯಮವನ್ನಾಗಿ ಸ್ವೀಕರಿಸುವ ಮನಸ್ಸಿಲ್ಲ. ಚಳವಳಿ, ಕಲ್ಲೆಸತ, ಕಂಠಶೋಷಣೆಗಳಿಗೆ ಸರಕಾರ ಜಗ್ಗಲಿಲ್ಲ. ಚಳವಳಿಯ ಹಾದಿಯನ್ನು ಬಿಟ್ಟು ಗಾಂಧಿ ಪುಣೀತ ಸತ್ಯಾಗ್ರಹ ಮಾರ್ಗವನ್ನು ಹಿಡಿದರೆ ಕನ್ನಡಿಗರ ಅಭೀಪ್ಸೆ ನೆರವೇರಬಹುದೆ? ಈಗಿನ ಕಾಲಕ್ಕೂ ಪ್ರಸ್ತುತವಾಗಬಹುದೆ? ಎಂಬುದನ್ನು ಪರೀಕ್ಷಿಸಲು ನನ್ನ ಮನಸ್ಸು ಬಹುದಿನಗಳಿಂದ ತುಡಿಯುತ್ತಿತ್ತು. ನಿರಶನವೊಂದೆ ಉಪವಾಸದ

[illegible]

ಸರ್ವಲಕ್ಷಣವಲ್ಲ; ಶಾಂತಿ, ಸಹನೆ, ಸಂಯಮ, ಆತ್ಮಶಕ್ತಿ ಅದರ ಪ್ರಮುಖ ಲಕ್ಷಣಗಳು ಎನ್ನುತ್ತಾರೆ ದೇ. ಜವರೇಗೌಡ. ಸತ್ಯಾಗ್ರಹ, ವೈರ, ದ್ವೇಷ, ಮಾತ್ಸರ್ಯ ಸ್ವಾರ್ಥವಿರಹಿತನಾಗಿರಬೇಕು. ಅವನ ಹೃದಯ ಪರಿಶುದ್ಧವಾಗಿರಬೇಕು. ನನ್ನಲ್ಲಿ ಇವುಗಳ ಕೊರತೆ ಇದ್ದೇ ಇದೆ. ಈ ಕೊರತೆಯನ್ನು ನೀಗಿಸಿಕೊಳ್ಳಲು, ಹೃದಯವನ್ನು ಮಡಿ ಮಾಡಿಕೊಳ್ಳಲು ಸಹ ಉಪವಾಸ ಸತ್ಯಾಗ್ರಹ ಅನುಕೂಲವಾದೀತೆನ್ನುವ ನೆಚ್ಚುಕೆಚ್ಚುಗಳಿಂದ ನಾನು ಕೃತ ಸಂಕಲ್ಪನಾಗಿ ೩ ಸಲ ಗಾಂಧೀ ಮಾರ್ಗದಲ್ಲಿ ನನ್ನ ಶಕ್ತಿಗೆ ನಿಲುಕವಷ್ಟರ ಮಟ್ಟಿಗೆ ಶ್ರಮಿಸಲು ಯತ್ನಿಸಿದೆ. ನಿಸ್ವಾರ್ಥತೆ ಮತ್ತು ನಿಷ್ಠೆ ಜತೆಗೆ ಅನ್ಯಾಯದ ವಿರುದ್ಧ ಮಣಿಯದ ಚಲ ನನ್ನ ಧೈರ್ಯ ಸ್ಥೈರ್ಯಗಳಿಗೆ ಕಾರಣವಾಗಿದ್ದಲ್ಲವು. ನಮ್ಮೆಲ್ಲ ಸಮಸ್ಯೆಗಳ ಪರಿಹಾರಕ್ಕೆ ಗಾಂಧೀ ಮಾರ್ಗವೊಂದೆ ಸತ್ಯವಾದದ್ದೆಂಬುದು ನನ್ನ ಜೀವಂತ ಜ್ವಲಂತ ಅನುಭವವಾಗಿದೆ.

ಹೀಗೆ ದೇ. ಜವರೇಗೌಡ ಸತ್ಯಾಸತ್ಯತೆಯನ್ನು ಕಂಡು ಕೊಂಡು ಸುಮಾರು ೭೨ ಗಂಟೆಗಳ ಕಾಲ ಉಪವಾಸ ಮಾಡಿ ಕನ್ನಡಕ್ಕೆ ನ್ಯಾಯ ದೊರಕಿಸಿ ಕೊಟ್ಟವರಾಗಿದ್ದಾರೆ. ಇವರು ಮತ್ತು ಸ್ನೇಹಿತರ ಸಂಘಟನೆಯಿಂದ ಮಾಡಿದ ಉಪವಾಸ ಸತ್ಯಾಗ್ರಹದಿಂದ ಕೆಲವೇ ಗಂಟೆಗಳು ಇಲ್ಲವೆ ಒಂದೇ ಒಂದು ದಿವಸದಲ್ಲಿ ನ್ಯಾಯ ದೊರಕಿಸಿ ಕೊಟ್ಟಿರುವುದು ಸರ್ವವೇದ್ಯವಾಗಿದೆ. ಅಂದಿನ ದಿನಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳು ಆಂಗ್ಲ ಭಾಷೆಯಲ್ಲಿ ಮಾತ್ರ ನಡೆಯುತ್ತಿದ್ದವು. ಆಗ ಕನ್ನಡ ಗೌಣ ಸ್ಥಾನದಲ್ಲಿತ್ತು. ಇಂತಹ ಸಂದರ್ಭದಲ್ಲಿ ಉಪವಾಸ ಸತ್ಯಾಗ್ರಹವನ್ನು ಕೈಗೊಂಡು ಗಂಭೀರ ಹೋರಾಟ ನಡೆಸಿ ಕನ್ನಡವನ್ನು ಕೆ.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಅಳವಡಿಸಲು ಮೂಲ ಕಾರಣಕರ್ತರಾದವರು ದೇ. ಜವರೇಗೌಡ. ಇಂದಿನ ದಿನಗಳಲ್ಲಿ ಕನ್ನಡನಾಡಿನಲ್ಲಿ ಜನ ಸಾಮಾನ್ಯರ ಮಕ್ಕಳು, ಹಳ್ಳಿಯ ವಿದ್ಯಾವಂತರು ಒಟ್ಟಾರೆ ಯುವ ಜನತೆ ಇಂತಹ ಪರೀಕ್ಷೆಗಳಲ್ಲಿ ಭಾಗವಹಿಸಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ಮಾತೃಭಾಷೆಯಾದ ಕನ್ನಡ ಮಾಧ್ಯಮ. ಇದರ ಹಿಂದೆ ದೇ. ಜವರೇಗೌಡ

ಅವರ ಅಪಾರ ಶ್ರಮ ಅಡಗಿದೆ ಎಂಬುದನ್ನು ಸಮಸ್ತ ಕನ್ನಡಿಗರೂ ಮರೆಯುವಂತಿಲ್ಲ. ಇವರು ಅನೇಕ ಚಳವಳಿ, ಉಪವಾಸ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡಿರುವುದನ್ನು ಗಮನಿಸಿದಾಗ ಇವರು ಗಾಂಧೀವಾದಿಗಳೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅವರಲ್ಲಿರುವ ಈ ದಿಟ್ಟ ಮನಸ್ಥಿತಿ ಸಂಯಮವೇ ಈ ಸಾಧನೆಗೆ ಪ್ರೇರಕ ಶಕ್ತಿಯಾಗಿದೆ.

ಪ್ರಾದೇಶಿಕ ಭಾಷೆ ಸರ್ವ ಮಾಧ್ಯಮವಾಗಬೇಕಾದ್ದು ಎಲ್ಲ ದೃಷ್ಟಿಗಳಿಂದ ಅಪೇಕ್ಷಣೀಯ. ಅನಿವಾರ್ಯ ಎಂಬ ಸತ್ಯವನ್ನು ನಾನು ಹಿಂದೆಯೇ ಕಂಡುಕೊಂಡಿದ್ದೆ. ಅದು ಯಶಸ್ವಿಯಾಗಿ ಶಿಕ್ಷಣ ಮಾಧ್ಯಮ ಹಾಗೂ ಆಡಳಿತ ಮಾಧ್ಯಮವಾಗಬೇಕಾದರೆ, ಕೂಡಲೇ ಲೋಕಸೇವಾ ಆಯೋಗದ ಪರೀಕ್ಷೆಗಳು ಕಡ್ಡಾಯದ ಮಾಧ್ಯಮವಾಗಬೇಕೆಂಬುದು ಅಂಗೈನಲ್ಲಿಯಂತೆ ಸುಸ್ಪಷ್ಟ. ಹಾಗಾದಾಗ ವಿದ್ಯಾರ್ಥಿಗಳು ಅನಿವಾರ್ಯವಾಗಿ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಾರೆ. ಆಡಳಿತ ಮಾಧ್ಯಮವು ಕನ್ನಡವಾಗುತ್ತದೆ. ಭಾಷಾ ಅಲ್ಪ ಸಂಖ್ಯಾತರು ವಿಧಿಯಿಲ್ಲದೆ ಕನ್ನಡ ಕಲಿತು ಇಲ್ಲಿಯ ಸಾಂಸ್ಕೃತಿಕ ಮತ್ತು ಜೀವನ ಪ್ರವಾಹದಲ್ಲಿ ಒಂದಾಗುತ್ತಾರೆಂಬುದು ನನ್ನ ನಿಶ್ಚಿತ ಮತ ರಾಜ್ಯ ರಾಷ್ಟ್ರಗಳ ಭದ್ರತೆ ಹಾಗೂ ಐಕ್ಯದ ದೃಷ್ಟಿಯಿಂದ ಇವು ಅತ್ಯಗತ್ಯವೆನ್ನುವುದರಲ್ಲಿ ನನಗೆ ಲವಲೇಶವೂ ಸಂದೇಹವಿಲ್ಲ.

ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬರುತ್ತಿದ್ದಂತೆ, ಯಾರಿಂದಲೂ ಹೇಳಿಸಿಕೊಳ್ಳದೆ, ಮುಷ್ಕರ ಹರತಾಳ ಸಂಘರ್ಷಗಳು ನಡೆಯುವ ಮುನ್ನವೇ ಕನ್ನಡಕ್ಕೆ ಸರ್ವ ಸ್ಥಾನವನ್ನು ಕಲ್ಪಿಸಬೇಕಾದ್ದು ರಾಜಕೀಯ ಮುತ್ಸದ್ದಿಗಳ ಕರ್ತವ್ಯವಾಗಿತ್ತು. ಕೇವಲ ಅಧಿಕಾರ ಹಂಚಿಕೆಗಾಗಿ ಏಕೀಕರಣವನ್ನು ಸಾಧಿಸಿದಂತೆ ಅನಂತರದ ಘಟನೆಗಳಿಂದ ವ್ಯಕ್ತವಾಗುತ್ತಿತ್ತು. ಕುವೆಂಪು ಕುಲಪತಿಗಳಾಗಿದ್ದಾಗ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನವನ್ನು ಸ್ಥಿರಗೊಳಿಸಲು ಸ್ವಲ್ಪಮಟ್ಟಿಗೆ ಸಾಧ್ಯವಾಯಿತು. ಅವರ ಅನಂತರ ಕನ್ನಡ ತುಸು ಹಿಂಜರಿಯಿತು. ನಾನು ಗುರುಗಳ ಅಭೀಪ್ಸೆಯನ್ನು ಪೂರೈಸಲು ಪ್ರಯತ್ನಿಸಿದೆ. ಆದರೆ ಕನ್ನಡ ಆಡಳಿತ ಮಾಧ್ಯಮವಾಗದಿರುವಾಗ ಅನ್ಯಪ್ರಯತ್ನಗಳು ಎಷ್ಟೇ

ಪ್ರಾಮಾಣಿಕವಾಗಿದ್ದರೂ ವಿಫಲಗೊಳ್ಳುತ್ತವೆ ಎಂದು ತಿಳಿಸುತ್ತಾರೆ.

ದೇ. ಜವರೇಗೌಡ ಅವರು ೧೯೭೮ರ ಮಾರ್ಚ್ ತಿಂಗಳಿಂದ ಲೋಕಸೇವಾ ಆಯೋಗದ ಅಧ್ಯಕ್ಷರೊಡನೆ, ಮುಖ್ಯಮಂತ್ರಿಗಳೊಡನೆ ಪತ್ರ ವ್ಯವಹಾರ ಪ್ರಾರಂಭಿಸಿದ್ದಾರೆ. ಆ ಮುನ್ನವೇ ನಾನು ಭಾಗವಹಿಸುತ್ತಿದ್ದ ಸಭೆ ಸಮಾರಂಭಗಳಲ್ಲಿ ಈ ಬಗ್ಗೆ ಉಗ್ರವಾಗಿಯೇ ಪ್ರಚಾರ ನಡೆಸುತ್ತಿದ್ದೆ. ಸರ್ಕಾರ ಆಯೋಗಗಳ ನಿರ್ಲಕ್ಷ್ಯ ನಿಷ್ಕ್ರೀಯೆಗಳನ್ನು ಕುರಿತು ಟೀಕಿಸುತ್ತಿದ್ದೆ. ನನ್ನ ಟೀಕೆಗಳು ಗಾಳಿಯಲ್ಲಿ ಲಯವಾಗುತ್ತಿದ್ದವು. ನಾನೊಬ್ಬ ಕನ್ನಡದ ಅಂಧಾಭಿಮಾನಿಯೆಂದು ಅವರು ಭಾವಿಸಿದ್ದಿರಬೇಕು. ಆಗಿನ ಆಯೋಗದ ಅಧ್ಯಕ್ಷರಾದ ಶ್ರೀ ಜಿ. ದುಗ್ಗಪ್ಪನವರು ಸಜ್ಜನರು ಸ್ನೇಹಶೀಲರು; ಶ್ರೀ ಸಾಮಾನ್ಯ ಸ್ತರದಿಂದ ಮೇಲೆ ಬಂದವರು. ಜೂರತ್ತಿನಿಂದ ಸರ್ಕಾರದ ಮೇಲೆ ಒತ್ತಡ ತರುವ ರಾಜಸಗುಣ ಅವರಲ್ಲಿರಲಿಲ್ಲ. ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಚಾಣಾಕ್ಷರು, ದಕ್ಷರು; ಅವರು ಮನಸ್ಸು ಮಾಡಿದ್ದರೆ ಒಂದು ಲಾಜದಲ್ಲಿ ಸರ್ಕಾರಿ ಆದೇಶ ಹೊರಬರುತ್ತಿತ್ತು. ಆದರೆ ಅದು ಐಎಎಸ್ ಅಧಿಕಾರಿಗಳಿಗೆ ನುಂಗಲಾರದ ತುತ್ತು. ಕನ್ನಡವೆಂದರೆ ಅವರ ಮುಖ ಸಿಂಡರಿಸುತ್ತಿತ್ತು. ಸಾಧ್ಯವಾದಷ್ಟು ದಿನ ಅಲ್ಲ ಸಲ್ಲದ ನೆಪವೊಡ್ಡಿ ಆ ಪ್ರಶ್ನೆಯನ್ನು ಮುಂದೂಡಲು ಪ್ರಯತ್ನಿಸುತ್ತಿದ್ದರು. ಅವರು ಪ್ರಗತಿ ಕಂಟಕರು. ಸಂಪ್ರದಾಯ ಜಡರೆಂಬುದು ಶತಸಿದ್ಧ ಅದಕ್ಕಾಗಿ ಅವರು ಏನಾದರೂ ಅಡಚಣೆಯೊಡ್ಡಿ ಮಂತ್ರಿ ಮತ್ತು ಮುಖ್ಯಮಂತ್ರಿಗಳನ್ನು ದಾರಿ ತಪ್ಪಿಸುತ್ತಿದ್ದರೆಂದು ತೋರುತ್ತದೆ.

೧೧-೫-೧೯೭೮ರಂದು ನಾನು ದುಗ್ಗಪ್ಪನವರಿಗೆ ಬರೆದ ಪತ್ರದ ಪೂರ್ಣ ಪಾಠವನ್ನಿಲ್ಲಿ ದಾಖಲಿಸಿದ್ದೇನೆ.

ದೇ. ಜವರೇಗೌಡ
ಮಾಜಿ ಕುಲಪತಿ

"ಕಲಾ ನಿಲಯ"
ಮೈಸೂರು -೧೨
೧೨ನೇ ಮೇ ೧೯೭೯

ಕರ್ನಾಟಕ ಲೋಕ ಸೇವಾ ಆಯೋಗದ ಮಾನ್ಯ ಚೇರ್ಮನ್ನರಾದ ಶ್ರೀ ಜಿ.ದುಗ್ಗಪ್ಪ ಅವರಲ್ಲಿ ಜವರೇಗೌಡನ ವಿಜ್ಞಾಪನೆಗಳು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಮೂವತ್ತೆರಡು ವರ್ಷಗಳಾದವು. ಕರ್ನಾಟಕ ಏಕೀಕರಣವಾಗಿ ಇಪ್ಪತ್ತಮೂರು ವರ್ಷಗಳಾದುವು. ಭಾರತ ಬೃಹದ್ದೇಶ, ಆದ್ದರಿಂದ ಭಾಷಾ ಬಾಹುಳ್ಯ ಅನಿವಾರ್ಯ ಇಂಥ ವಿಸ್ತಾರವಾದ ನಾಡಿನಲ್ಲಿ ೧೫-೧೬ ಭಾಷೆಗಳು ಇರುವುದು ಹೆಚ್ಚಲ್ಲ. ಕೆಲವೇ ಕೆಲವು ಲಕ್ಷ ಜನ ಮಾತಾಡುವ ಏಕಭಾಷಾ ರಾಷ್ಟ್ರಗಳೂ ಉಂಟು. ದೇಶಭಾಷೆ ಅಥವಾ ಮಾತೃಭಾಷೆ ಸರ್ವ ಮಾಧ್ಯವಾಗಬೇಕಾದ್ದು ಪ್ರಜಾಪ್ರಭುತ್ವದ ಸಲ್ಲಕ್ಷಣ. ವೈಜ್ಞಾನಿಕವಾಗಿಯೂ ಅದೇ ಸಹಜ ಆಗಲಿಲ್ಲ. ಆಡಳಿತ ನಡೆಸುವವರಲ್ಲಿ ಏನೋ ಕೊರತೆಯಿದೆಯೆಂದು ಭಾವಿಸಬೇಕಾಗುತ್ತದೆ. ಅಷ್ಟೇ ಅಲ್ಲ, ಪ್ರಜಾದ್ರೋಹ. ೧೯೧೭ರಲ್ಲಿ ರಷ್ಯಾಕ್ರಾಂತಿ ಮುಕ್ತಾಯಗೊಂಡಾಗ, ಕ್ಷುಲ್ಲಕ ಭಾಷೆಗಳಿಗೂ ಮಹತ್ವದ ಸ್ಥಾನಮಾನಗಳೊದಗಿದವು. ವಿದೇಶಿ ಭಾಷೆಯಲ್ಲಿ ಸಕಲ ವ್ಯವಹಾರಗಳನ್ನು ನಡೆಸುವ ಭಾರತದಂತ ದುರ್ದೈವೀರಾಷ್ಟ್ರ ಮತ್ತೊಂದಿಲ್ಲ. ಭಾರತ ಸ್ವತಂತ್ರ ರಾಷ್ಟ್ರವೇ ಎಂಬ ಅನುಮಾನವು ಬರುತ್ತಿದೆ.

ಕನ್ನಡಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಅದು ಸರ್ವಾಂಗ ಸುಂದರವಾಗಿ ಬೆಳೆದಿದೆ. ಸುಮಾರು ಇಪ್ಪತ್ತು ವರ್ಷಗಳಿಂದ ವಿಶ್ವವಿದ್ಯಾನಿಲಯದ ಮಟ್ಟದಲ್ಲಿಯೂ ಅದು ಶಿಕ್ಷಣ ಮಾಧ್ಯಮವಾಗಿದೆ. ಆದರೆ ಅದಿನ್ನೂ ಆಯೋಗದ ಪರೀಕ್ಷೆಗಳ ಮಾಧ್ಯಮವಾಗದಿರುವುದು ಶೋಚನೀಯ ಸಂಗತಿಯಾಗಿದೆ. ಈ ಬಗ್ಗೆ ಹತ್ತಾರು ವರ್ಷಗಳಿಂದ ನಾಡಿನ ನಾಯಕರು ಮತ್ತು ವಿದ್ವಾಂಸರು ನಡೆಸಿದ ಪ್ರಯತ್ನಗಳು ವಿಫಲಗೊಂಡಿವೆ. ದುರ್ದೈವದಿಂದ ಸಾಮಾನ್ಯ ಜನರ ಅಭ್ಯುದಯದ ಕಡೆಗೆ ಮುಂದುವರಿದ ಜನರ ದೃಷ್ಟಿ ಹರಿದಿಲ್ಲ. ಕೆಲವು ನಾಯಕರ ಪ್ರಾಮಾಣಿಕ ಪ್ರಯತ್ನಗಳನ್ನು ನಮ್ಮ ಅಧಿಕಾರ ವರ್ಗ ವಿಫಲಗೊಳಿಸುತ್ತಿದೆ. ಕನ್ನಡದಲ್ಲಿ ಎಲ್ಲಿಯತನಕ ಪರೀಕ್ಷೆಗಳನ್ನು

ನಡೆಸುವುದಿಲ್ಲವೋ ಅಲ್ಲಿಯತನಕ ಅವು ಕೃತಕವೆನಿಸುತ್ತವೆ. ಪ್ರತಿಭೆಯನ್ನು ಗುರುತಿಸುವಲ್ಲಿ ವಿಫಲವಾಗುತ್ತವೆ. ಅಷ್ಟೇ ಅಲ್ಲ ಶ್ರೀ ಸಾಮಾನ್ಯನಿಗೆ ಅವುಗಳಿಂದ ಏನೇನೂ ಪ್ರಯೋಜನವಾಗುವಂತಿಲ್ಲ.

ಇತ್ತೀಚೆಗೆ ಕರ್ನಾಟಕ ಸರ್ಕಾರ ಕನ್ನಡದ ಪ್ರಗತಿಗೆ ಸಾಕಷ್ಟು ಸಹಾಯ ನೀಡುತ್ತಿದೆ. ಕೋರ್ಟು ಕಚೇರಿಗಳಲ್ಲಿಯೂ ಕನ್ನಡದ ಬಳಕೆ ಪ್ರಾರಂಭವಾಗುತ್ತಿದೆ. ಕೋರ್ಟು ಭಾಷೆ ಕನ್ನಡವೇ ಆಗಬೇಕೆಂದು ಮುಖ್ಯ ನ್ಯಾಯಾಧೀಶರೂ ಒತ್ತಾಯಪಡಿಸುತ್ತಿದ್ದಾರೆ. ಹೀಗಿದ್ದೂ ಲೋಕಸೇವಾ ಆಯೋಗ ಕನ್ನಡದಲ್ಲಿ ಪರೀಕ್ಷೆ ನಡೆಸದಿರುವುದು ದುರ್ದೈವ. ಕೇಂದ್ರ ಲೋಕಸೇವಾ ಆಯೋಗ ಕನ್ನಡದಲ್ಲಿಯೂ ಪರೀಕ್ಷೆಗಳನ್ನು ನಡೆಸುತ್ತಿರುವಾಗ, ಸ್ಥಳೀಯ ಆಯೋಗ ಆಕಡೆ ನಿರ್ಲಕ್ಷ್ಯದಿಂದಿರುವುದು ಸರಿಯಲ್ಲ, ಸಮರ್ಥನೀಯವಲ್ಲ. ಆದ್ದರಿಂದ ಆಯೋಗ ಈ ಕೂಡಲೇ ಕನ್ನಡದಲ್ಲಿ ಎಲ್ಲ ಪರೀಕ್ಷೆಗಳನ್ನು ನಡೆಸಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ. ಕೆಲವು ಕನ್ನಡಿಗರಿಗಾಗಿ ಐದು ಹತ್ತು ವರ್ಷಗಳ ಕಾಲ ಆಂಗ್ಲ ಭಾಷೆಯನ್ನು ದ್ವಿತೀಯ ಮಾಧ್ಯಮವನ್ನಾಗಿ ಮುಂದುವರಿಸುವುದಾದರೆ ನನ್ನ ಆಕ್ಷೇಪವಿಲ್ಲ.

ಈ ಕೂಡಲೇ ಆಯೋಗ ಈ ದಿಶೆಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ವಿನಮ್ರರಾಗಿ ಭಿನ್ನವಿಸಿಕೊಳ್ಳುತ್ತೇನೆ. ಕೈಗೊಳ್ಳಲಿಲ್ಲ, ಬರುವ ನವೆಂಬರ್ ಒಂದು ಅಥವಾ ಎರಡರಿಂದ ಪರಿಸ್ಥಿತಿ ಅಪೇಕ್ಷಿಸಿದಲ್ಲಿ ಇನ್ನೂ ಮುಂಚಿತವಾಗಿಯೇ ನಾನು ಮತ್ತು ನನ್ನ ಮಿತ್ರರು ಆಯೋಗದ ಕಚೇರಿಯ ಮುಂದೆ ಉಪವಾಸ ಸತ್ಯಾಗ್ರಹ ನಡೆಸಬೇಕೆಂದು ನಿರ್ಧರಿಸಿದ್ದೇವೆ. ಈ ನಮ್ಮ ಸತ್ಯಾಗ್ರಹಕ್ಕೆ ಎಲ್ಲ ಕನ್ನಡಿಗರ ಬೆಂಬಲವಿದೆಯೆಂಬುದನ್ನು ನಿಮ್ಮಲ್ಲಿ ಸ್ಪಷ್ಟವಾಗಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ವೈಯಕ್ತಿಕವಾಗಿ ಆಯೋಗದ ಯಾವ ಸದಸ್ಯರ ಬಗ್ಗೆಯೂ ನನಗೆ ಬೇಸರವಿಲ್ಲ. ನಿಮ್ಮಲ್ಲಂತೂ ನನಗೆ ಪೂರ್ಣವಿಶ್ವಾಸವಿದೆ. ಇದು ಮೂರು ಕೋಟಿ ಕನ್ನಡಿಗರ ಅಳಿವುಳಿವಿನ ಪ್ರಶ್ನೆ. ಆದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುನ್ನ ಎಲ್ಲ ಸಮಸ್ಯೆಗಳನ್ನು ಸಂಪೂರ್ಣವಾಗಿ ಬಗೆಹರಿಸುವ ವಿವೇಕ ನಿಮ್ಮಲ್ಲಿದೆಯೆಂದು ನಂಬಿದ್ದೇನೆ.

ಈ ಪತ್ರ ತಲುಪಿದ್ದಕ್ಕೆ ದಯೆಯಿಟ್ಟು ಉತ್ತರ ಬರೆಯಿರಿ. ಆದಷ್ಟು ಜಾಗ್ರತೆ ಕನ್ನಡ ಮಾಧ್ಯಮವನ್ನು ಕಾರ್ಯಗತಗೊಳಿಸುವ ಬಗ್ಗೆ ಸಕಾರಾತ್ಮಕವಾದ ಪತ್ರ ಬರೆಯುವಿರೆಂದು ನಂಬಿದ್ದೇನೆ.

ಈ ಪತ್ರದ ನಕಲನ್ನು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಿಗೆ, ವಿರೋಧ ಪಕ್ಷದ ನಾಯಕರಿಗೆ, ಜನತಾ ಪಕ್ಷದ ಅಧ್ಯಕ್ಷರಿಗೆ ಹಾಗೂ ಇತರ ಕೆಲವರಿಗೆ ಕಳಿಸುತ್ತಿದ್ದೇನೆ.

ತಮ್ಮ ವಿಶ್ವಾಸ ಏಕ ರೀತಿಯಾಗಿರಲಿ,

ಇಂತಿ ತಮ್ಮವ
ದೇ. ಜವರೇಗೌಡ

ಈ ರೀತಿ ದೇ. ಜವರೇಗೌಡ ಅವರ ಪತ್ರ ವ್ಯವಹಾರದ ಶೈಲಿಯೂ ಕೂಡ ಒಬ್ಬರ ಮನಸ್ಸನ್ನು ತಟ್ಟುವ ರೀತಿಯಲ್ಲಿ ಬರೆಯುತ್ತಾರೆ. ಇದರಿಂದ ಅವರ ಕನ್ನಡ ಪ್ರೇಮ ಎಂಥದ್ದು ಎಂಬ ಅಂಶ ನಮಗೆ ಸ್ಪಷ್ಟವಾಗುತ್ತದೆ. ಇವರ ಕನ್ನಡದ ಪ್ರೇಮ ಕೇವಲ ಭಾವನಾತ್ಮಕವಾಗಿರದೆ ಸವಲತ್ತುಗಳನ್ನು ಕಲ್ಪಿಸಿಕೊಡುವಲ್ಲಿಯೂ ಕೂಡ ಯಶಸ್ವಿಯಾಗಿದೆ ಎಂಬುದಕ್ಕೆ ಇದೇ ಸಾಕ್ಷಿಯಾಗಿದೆ. ಕೆಲವೊಂದು ಪತ್ರ ವ್ಯವಹಾರವನ್ನು ನಡೆಸಿಯೂ ಕೂಡ ಪ್ರಯೋಜನವಿಲ್ಲದಿದ್ದಾಗ ೧೯೭೮ ನವೆಂಬರ್ ೨೦ ರಂದು ೨ ದಿನ ಬೆಂಗಳೂರಿನಲ್ಲಿ ಆಯೋಗದ ಕಚೇರಿಯ ಮುಂದೆ ದೇ.ಜವರೇಗೌಡ ಮತ್ತು ಸಿದ್ಧಯ್ಯ ಪುರಾಣಿಕರು, ಇನ್ನಿತರ ಸ್ನೇಹಿತರ ಜೊತೆ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿಯೇ ಬಿಟ್ಟರು. ಅಂದು ಶ್ರೀಮಾನ್ ದುಗ್ಗಪ್ಪನವರಿಗೆ ಕೆಲವು ಷರತ್ತುಗಳನ್ನು ತಿಳಿಸುತ್ತಾರೆ. ಆ ಷರತ್ತುಗಳೆಂದರೆ:

೧. ಲೋಕಸೇವಾ ಆಯೋಗದ ಸಕಲ ಹಂತಗಳಲ್ಲಿಯೂ ಪರೀಕ್ಷಾ ಮಾಧ್ಯಮ ಕನ್ನಡ ವಾಗಬೇಕು.

೨. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಆಂಗ್ಲಭಾಷೆ ಎಲ್ಲಿಯೂ ಕಡ್ಡಾಯವಾಗಬಾರದು.

ಹೀಗೆ ಬರೆದು ಕಳುಹಿಸಿ ಉಪವಾಸವನ್ನು ಮಾಡಲು ಮುಂದಾಗುತ್ತಾರೆ. ಇದಕ್ಕೆ ನಾಡಿನ ಜನಗಳಿಂದ, ಸಾಹಿತಿಗಳಿಂದ ಅಪಾರ ಮನ್ನಣೆ ದೊರೆಯುತ್ತದೆ. ಇವರಿಗೆ ಪ್ರೋತ್ಸಾಹಕಾರರಾಗಿ

[illegible]

ಎಂ. ಚಿದಾನಂದ ಮೂರ್ತಿಯವರು, ಬಂಡಾಯ ಸಾಹಿತ್ಯ ಸಂಘಟನಾ ಕೇಂದ್ರ ಸಮಿತಿಯ ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ಸಿದ್ಧಲಿಂಗಯ್ಯ ಇವರು ಕೂಡ ಪತ್ರಿಕೆಗಳಿಗೆ ಹೇಳಿಕೆ ನೀಡಿ ದೇ. ಜವರೇಗೌಡ ಮತ್ತು ಪುರಾಣಿಕರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ನಮ್ಮ ನಿಲುವಿನ ಒಂದು ಭಾಗವೇ ಆಗಿದೆ ಎಂಬುದಾಗಿ ಸ್ಪಷ್ಟಪಡಿಸುತ್ತಾರೆ. ದೇ. ಜವರೇಗೌಡ ಅವರಿಗೆ ಉಪವಾಸದ ಸಂದರ್ಭದಲ್ಲಿ ಕುವೆಂಪು ಅವರ ಕವಿವಾಣಿ ಕನ್ನಡವೇ ಸತ್ಯ ಕನ್ನಡವೇ ನಿತ್ಯ! ಎಂದು ಕನ್ನಡಿಗರ ಹೃದಯ ಮಂದಿರಗಳಲ್ಲಿ ಮಾತ್ರವಲ್ಲ, ಕನ್ನಡನಾಡಿನ ಗುಡಿಗೋಪುರ, ಗಿರಿಕಂದರ, ಕೆರೆ ಕೊಳ್ಳ, ಮರ ಬಳ್ಳಿಗಳಲ್ಲಿ ಸಚರಾಚರ ವಸ್ತುಗಳಲ್ಲಿ ಮಾರ್ದನಿಸುತ್ತಿತ್ತು. ಮಾನವೀಯ ಗುಣಗಳ ಸಾಕಾರರಾಗಿದ್ದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರ ಹೃದಯವನ್ನು ಇವರ ಉಪವಾಸ ಸತ್ಯಾಗ್ರಹ ತಟ್ಟಿತು. ಅವರಿಗೂ ಕನ್ನಡದ ಮೇಲಿನ ಅಪಾರ ಭಕ್ತಿಯಿಂದಲೇ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಈ ಕೂಡಲೇ ಕನ್ನಡದ ಮೂಲಕವಾಗಿ ನಡೆಸುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟ ಮೇಲೆ ತಮ್ಮ ಉಪವಾಸವನ್ನು ನಿಲ್ಲಿಸಿದರು.

ಈ ರೀತಿ ದೇ. ಜವರೇಗೌಡ ಅವರ ಉಪವಾಸದ ಫಲದಿಂದಾಗಿ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡ ಬಳಕೆಯಾದಂತೆ ಆಯಿತು. ಈ ನಿಲುವನ್ನು ಸರ್ಕಾರಕ್ಕೆ ಅರಿವಾಗುವಂತೆ ಮಾಡಿದವರು ಸಿದ್ದಯ್ಯ ಪುರಾಣಿಕರು ಹಾಗೂ ದೇ. ಜವರೇಗೌಡರು ಹಾಗೂ ಇದರ ಹಿಂದೆ ಸಾಕಷ್ಟು ಕನ್ನಡದ ಕಟ್ಟಾಳುಗಳು ಕೆಲಸ ಮಾಡಿರುವುದನ್ನು ಈ ಸಂದರ್ಭದಲ್ಲಿ ನೆನೆಯ ಬಹುದಾಗಿದೆ. ಒಟ್ಟಿನಲ್ಲಿ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯುವಂತೆ ಮಾಡಿದ ದೇ.ಜವರೇಗೌಡ ಅವರನ್ನು ಕನ್ನಡನಾಡಿನ ಸಮಸ್ತರು ಸ್ಮರಿಸಲೇಬೇಕು. ಇದು ಕೂಡ ಉನ್ನತ ಸ್ಥಾನದಲ್ಲಿ ಕನ್ನಡಕ್ಕೆ ಒಂದು ಸ್ಥಾನಮಾನ ಕಲ್ಪಿಸಿದ ಕನ್ನಡ ಭಾಷೆಗೆ ಸಂದ ಗೌರವವಾಗಿದೆ. ಜೊತೆಗೆ ದೇ. ಜವರೇಗೌಡ ಅವರ ಕನ್ನಡ ಪರಚಿಂತನೆಯಲ್ಲಿ ಬಹಳ ಮುಖ್ಯವಾದ ಸಂಗತಿಯಾಗಿದೆ.

೪. ಕನ್ನಡ ಪಂಡಿತರಿಗೆ ಬಿಎಡ್ ಓದಲು ಅವಕಾಶ ಮಾಡಿಕೊಟ್ಟರು

ಕನ್ನಡ ಪಂಡಿತರಿಗಾಗುತ್ತಿದ್ದ ಅನ್ಯಾಯವನ್ನು ದೇ. ಜವರೇಗೌಡ ಅವರು ಅದಕ್ಕೆ ನ್ಯಾಯವನ್ನು ಒದಗಿಸಬೇಕು ಎನ್ನುವ ದೃಷ್ಟಿಯಿಂದ ಪಂಡಿತ ಪರೀಕ್ಷೆಯನ್ನು ಡಿಗ್ರಿ ಪರೀಕ್ಷೆಗೆ ಸಮಾನವೆಂದು ಘೋಷಿಸಿದರು. ಬಿ.ಎಡ್. ಪಾಸಾದವರು ಕನ್ನಡ ಎಂ.ಎ. ತರಗತಿಗೂ ಸೇರಬಹುದೆಂದು ಅನುಮತಿ ನೀಡಿಲಾಯಿತು. ಪಂಡಿತರು ಸಹ ಕೆ.ಎ.ಎಸ್. ಮೊದಲಾದ ಪರೀಕ್ಷೆಗಳಿಗೆ ಕೂರಲಿ, ತಹಸಿಲ್ದಾರ್, ಪೊಲೀಸ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಸ್ಪರ್ಧಿಸಲೆಂಬುದೇ ದೇ. ಜವರೇಗೌಡ ಅವರ ಈ ಎಲ್ಲ ಪ್ರಯತ್ನಗಳಿಗೆ ಮೂಲಕಾರಣ. ಈ ಪ್ರಯತ್ನದಿಂದ ಕನ್ನಡ ಪಂಡಿತರಿಗೆ 'ಶಾಲು ಪಂಡಿತ' ರೆಂದು ಅವರಿಗಂಟಿಕೊಂಡಿದ್ದ ಕಳಂಕ ನಿವಾರಣೆಯಾಯಿತು.

ದೇ. ಜವರೇಗೌಡ ಕನ್ನಡ ಹಿತದೃಷ್ಟಿಯಿಂದ ಮಾಡಿದ ಒಂದು ಸಾಹಸದ ವಿಷಯ ಕನ್ನಡ ಪಂಡಿತ ತರಗತಿಗಳಿಗೆ ಗೌರವಾನ್ವಿತವಾದ ಸ್ಥಾನಮಾನಗಳನ್ನು ನೀಡುವ ದೃಷ್ಟಿಯಿಂದ. ಬಿ.ಎಡ್. ತರಗತಿಗೆ ಕನ್ನಡ ಪಂಡಿತರಿಗೆ ಹಾಜರಾಗುವಂತೆ ಅವಕಾಶ ಕಲ್ಪಿಸಿದರು. ಕನ್ನಡ ಪಂಡಿತರಾದರೂ ಪಂಡಿತರಾಗಿಯೇ ಸೇವೆಯಿಂದ ನಿವೃತ್ತರಾಗುತ್ತಿದ್ದರು. ಮೂರು ವಿಷಯಗಳನ್ನೋದಿದ ಪ್ರಯುಕ್ತ ಪದವೀಧರರ ಜ್ಞಾನಕೋಶಕ್ಕೆ ವೈಶಾಲ್ಯ ಲಭಿಸುತ್ತಿತ್ತು. ನಿಜ, ಆದರೆ ಸಂಸ್ಕೃತದೊಡನೆ ಕನ್ನಡವನ್ನು ಆಳವಾಗಿ ಅಭ್ಯಾಸ ಮಾಡುತ್ತಿದ್ದುದರಿಂದ ಪಂಡಿತರ ಜ್ಞಾನಕ್ಕೆ ಗಂಭೀರತೆ, ಗಾಂಭೀರ್ಯಗಳು ಒದಗುತ್ತಿದ್ದವು ಎನ್ನುತ್ತಾರೆ. ಇಂಗ್ಲಿಷ್, ಸಂಸ್ಕೃತ ಕಾಲುವೆಗಳ ಜ್ಞಾನ ಕನ್ನಡ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಅತ್ಯಾವಶ್ಯಕ. ಅದರಲ್ಲೂ ಕನ್ನಡ ಬೋಧಕರಿಗೆ ಸಂಸ್ಕೃತ, ಇಂಗ್ಲಿಷ್ ಎರಡೂ ಅನಿವಾರ್ಯ ಪದವೀಧರರು ಇಂಗ್ಲಿಷ್ ಕಲಿಯುತ್ತಾರೆ. ಅವರಿಗೆ ಸಂಸ್ಕೃತದ ಸೋಂಕಿಲ್ಲ."ಸಂಸ್ಕೃತದ ಸೋಂಕಿಲ್ಲದವನು ಖಂಡಿತವಾಗಿ ಕನ್ನಡದಲ್ಲಿ ಖಚಿತ ಜ್ಞಾನ ಸಂಪಾದಿಸಲಾರನು", ಇಂಗ್ಲಿಷ್ ಕಲಿಯದ ಪಂಡಿತನಿಗೆ ಆಧುನಿಕ ಜ್ಞಾನದ ಸಂಪರ್ಕವಿರುವುದಿಲ್ಲ. ಈ ಕಾರಣಕ್ಕಾಗಿ ಪಂಡಿತ ಪರೀಕ್ಷೆಯ ಪಠ್ಯಕ್ರಮದಲ್ಲಿ ಒಂದು ತೌಲನಿಕ ಸಾಹಿತ್ಯ ಪತ್ರಿಕೆಯನ್ನೂ ಜತೆಗೆ ಎರಡಾದರೂ

[illegible]

ಇಂಗ್ಲಿಷ್ ಭಾಷೆಯ ಪತ್ರಿಕೆಗಳನ್ನೂ ಅಳವಡಿಸಿ, ಪಂಡಿತರನ್ನು ಆಧುನೀಕರಣ ಗೊಳಿಸಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದವರು ದೇ. ಜವರೇ ಗೌಡ ಅವರು.

ಕನ್ನಡ ಪಂಡಿತ ಸ್ಥಾನಮಾನಗಳನ್ನು ಹೆಚ್ಚಿಸಬೇಕು ಎನ್ನುವ ಉದ್ದೇಶದಿಂದ ಅಂದಿನ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ಮಂಚಯ್ಯನವರನ್ನೂ ಎಚ್.ಎನ್.ನಂಜೇಗೌಡ ಮೊದಲಾದ ಪಂಡಿತರನ್ನೂ ಸೇರಿಸಿಕೊಂಡ ದೇ. ಜವರೇಗೌಡ ಅವರು 'ಕನ್ನಡ ಅಧ್ಯಾಪಕ ಪರಿಷತ್ತನ್ನು' ಸ್ಥಾಪಿಸಿದರು. ಈ ಸ್ನೇಹಿತರುಗಳು ತ್ರಿಕರಣ ಪೂರ್ವಕವಾಗಿ ದೇ. ಜವರೇಗೌಡ ಅವರೊಡನೆ ಶ್ರಮಿಸಿದರು. ಬಿ.ಎಡ್. ಪದವಿಯಲ್ಲದೆ ಪಂಡಿತರನ್ನು ಪದವೀಧರರಿಗೆಣೆಯಾಗಿ ಗ್ರಹಿಸಲಾಗದೆಂಬ ನಿಯಮವಿದ್ದದ್ದರಿಂದ, ಅವರಿಗೆ ಬಿ.ಎಡ್. ತರಗತಿಗೆ ಪ್ರವೇಶಾವಕಾಶವೊದಗಿಸುವ ಜವಾಬ್ದಾರಿಯನ್ನು ದೇ. ಜವರೇಗೌಡ ಅವರು ವಹಿಸಿಕೊಂಡರು. ಕೇವಲ ಪಂಡಿತ ಹುದ್ದೆಗೆ ಮಾತ್ರವಲ್ಲದೆ, ರೆವಿನ್ಯೂ ಪೋಲಿಸ್ ಮೊದಲಾದ ಇಲಾಖೆಗಳಿಗೂ ಅವರು ಅರ್ಹರೆಂದು ಗಣಿಸುವ ಸಲುವಾಗಿ ಪಂಡಿತ ಪರೀಕ್ಷೆ ಪದವಿ ಪರೀಕ್ಷೆಗೆ ಸಮವೆಂದು ಮಾನ್ಯಮಾಡಲಾಯಿತು. ಕನ್ನಡ ಭೋದನ ಮಾಧ್ಯಮವಾಗದೆ ಪಂಡಿತರು ಬಿ.ಎಡ್. ಪದವಿ ತರಗತಿಗೆ ಸೇರುವಂತಿರಲಿಲ್ಲ. ಆಗಿನ ಡೀನರೂ ಪ್ರಾಧ್ಯಾಪಕರೂ ಸಂಚು ಹೂಡಿ ಕನ್ನಡ ಮಾಧ್ಯಮ ಬರಹ ಹಾಗೆ ತಾವು ಕಲಿತಿದ್ದ ಕುಟಿಲ ವಿದ್ಯೆಯನ್ನೆಲ್ಲ ಪ್ರದರ್ಶಿಸಿದರು. ಅದಾವುದಕ್ಕೂ ಜಗ್ಗದ ದೇ. ಜವರೇಗೌಡ ಅವರು ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ನಿರ್ಣಯವನ್ನು ಮಂಡಿಸಿ, ವಾದಿಸಿ, ಜೋರು ಮಾಡಿ ಒಪ್ಪಿಗೆ ಪಡೆದರು. ಜತೆಗೆ ಪಂಡಿತರು ಎಂ.ಎ. ತರಗತಿಗಳಿಗೆ ಸೇರುವ ಅವಕಾಶವನ್ನು ಸಹ ಕಲ್ಪಿಸಲಾಯಿತು.

ದೇ. ಜವರೇಗೌಡ ಅವರು ನಡೆಸಿದ ಈ ಹೋರಾಟ ಏನನ್ನು ಸೂಚಿಸುತ್ತದೆ ಎಂದರೆ ಒಬ್ಬ ವ್ಯಕ್ತಿ ವ್ಯಷ್ಟಿಗಿಂತ ಸಮಷ್ಟಿಯ ಹಿತಕ್ಕಾಗಿ ಸಾಧನೆ ಮಾಡಬೇಕೆಂಬುದು ಗೊತ್ತಾಗುತ್ತದೆ.

ಅವರು ಕನ್ನಡದ ವಿಷಯವನ್ನು ಯಾವ ರೀತಿ ಮಂಡಿಸುತ್ತಿದ್ದರು ಎಂಬುದು ತಿಳಿಯುತ್ತದೆ. ಒಂದು ವ್ಯವಸ್ಥೆಯಲ್ಲಿ ಕೊಂಡು ಕೂಡ ಅಪಾರ ಸಾಧನೆ ಮಾಡಿದವರೆಂದರೆ ದೇ. ಜವರೇಗೌಡ.

ದೇ. ಜವರೇಗೌಡ ಈ ಕನ್ನಡ ಪಂಡಿತ ಪರೀಕ್ಷೆಯನ್ನು ರದ್ದುಗೊಳಿಸುವ ಸನ್ನಾಹ ನಡೆದಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಕನ್ನಡದ ಒಂದಂಗ ಭಗ್ನವಾಯಿತೆಂದೇ ಅವರ ಲೆಕ್ಕ. ನಾಲಗೆಯಲ್ಲಿ ಹುಣ್ಣಾದರೆ ಅದಕ್ಕೆ ತಕ್ಕ ಮದ್ದು ಮಾಡಬೇಕೆ ಹೊರತು ಅದನ್ನೇ ಕಿತ್ತು ಹಾಕುವುದು ಬುದ್ಧಿವಂತ ವೈದ್ಯನ ಲಕ್ಷಣವಲ್ಲ ಎನ್ನುತ್ತಾರೆ.

೫. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಕೆಲಸಗಳಲ್ಲಿ ಆದ್ಯತೆ ಇರಬೇಕು

ಮುಸ್ಲಿಂ ಮತಕ್ಕೆ ಸೇರಿದ ಉಪಕಾರ್ಯದರ್ಶಿಯೊಬ್ಬರು ನನ್ನನ್ನೊಮ್ಮೆ ತಮ್ಮ ಕೋಣೆಗೆ ಕರೆಸಿಕೊಂಡು ಫೈಲಿನಲ್ಲಿಯ ಟಿಪ್ಪಣಿಗಳನ್ನು ಮೆಚ್ಚಿಕೊಂಡು "Are you a litereture Student?" ಎಂದು ಕೇಳಿದರು. ನಾನು ಸಹಜವಾಗಿಯೇ ಹೌದೆಂದೆ. ಕೆಲವು ದಿನಗಳ ನಂತರ ಕನ್ನಡ ಅಧ್ಯಾಪಕ ಹುದ್ದೆಗೆ ಅವರ ಮೂಲಕ ಅರ್ಜಿ ಕಳುಹಿಸಿದಾಗ ಮತ್ತೆ ನನ್ನನ್ನು ಕರೆಸಿ 'Being a literature student, how can you apply for a kannada teacher's post? ಎಂದು ಕೇಳಿದರು "I am an M.A. in Kannada literature" ಎಂದೆ. ಆಗ ಅವರ ಮುಖ ನೋಡಬೇಕಿತ್ತು! ಪಾಪ, ಪಟೇಲ ಶ್ಯಾನುಭೋಗರನ್ನಾಳುವ ಎಂ.ಸಿ.ಎಸ್., ಐ.ಎ.ಎಸ್ ಅಧಿಕಾರಿಗಳ ದಿವ್ಯದೃಷ್ಟಿಗೆ ಇಂಗ್ಲಿಷ್ ಸಾಹಿತ್ಯವೊಂದೇ ಏಕಮೇವಾದ್ವಿತೀಯ ಸಾಹಿತ್ಯ, ಉಳಿದದ್ದು ಸಾಹಿತ್ಯವೇ ಅಲ್ಲ!.[೧೧]

ಈ ಮೇಲಿನ ಘಟನೆ ಕನ್ನಡದ ಕಣ್ಮಣಿಯಾದ ದೇ. ಜವರೇಗೌಡ ಅವರ ಜೀವನದಲ್ಲಿ ನಡೆದ ಪ್ರಸಂಗ. ಕನ್ನಡವೆಂದರೆ ಕೇವಲವಾಗಿ ಕಾಣುತ್ತಿದ್ದ ಅಂದಿನ ಪರಿಸ್ಥಿತಿಯಲ್ಲಿ ನರಸಿಂಹನಂತೆ ಉಗ್ರವಾಗಿ ಪ್ರತಿಕ್ರಿಯಿಸಿದವರು ದೇ. ಜವರೇಗೌಡ.

'ಕನ್ನಡವೇ ಸತ್ಯ!
ಕನ್ನಡವೇ ನಿತ್ಯ'

ಎಂಬ ಕವಿವಾಣಿಯಂತೆ, ಕನ್ನಡದಲ್ಲಿ ಹುಟ್ಟಿ ಬೆಳೆದ ಕನ್ನಡಿಗರಿಗೆ ಉದ್ಯೋಗದಲ್ಲಿ ಅವಕಾಶವಿಲ್ಲವೆಂದಾಗ ಎಂತಹವರನ್ನು ಸಹಾ ಬಡಿದೆಬ್ಬಿಸುವ ವಿಚಾರವಾಗಿದೆ.

ಸುಮಾರು ಐವತ್ತು ದಶಕಗಳ ಹಿಂದೆ ಕನ್ನಡ ಎಂದರೆ ಲೋಕದ ಜನ ಮೂಗು ಮುರಿಯುತ್ತಿದ್ದ ಕಾಲವದು. ಕನ್ನಡವನ್ನು ಓದುವ ವಿದ್ಯಾರ್ಥಿ, ಕಲಿಸುವ ಮೇಷ್ಟ್ರು, ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕ - ಎಲ್ಲರೂ ಎಲ್ಲರ ಅವಜ್ಞೆಗೆ ಪಾತ್ರರಾಗಿದ್ದ ದುಷ್ಕಾಲ.

೧೧ - ಹೋರಾಟದ ಬದುಕು - ಲೇಖಕರು ದೇ.ಜವರೇಗೌಡ (ಆತ್ಮಕಥೆ) ಪ್ರಕಟಣೆ - ದೇ.ಜವರೇಗೌಡ ಟ್ರಸ್ಟ್ ಮೈಸೂರು, ಪುಟ ೧೧೨.

ಕನ್ನಡ ಎಂ.ಎ. ಪಾಸು ಮಾಡಿದವರಿಗೆ ಯಾವ ಕಛೇರಿಯ ಬಾಗಿಲಿಗೆ ತಲೆ ತಾಡಿಸಿದರೂ ತೆರೆಯದಿದ್ದ ದುಷ್ ದುಷ್ ಕಾಲ. ಕನ್ನಡವನ್ನು ಓದಿ ಕೆಟ್ಟೆನಲ್ಲಾ ಎಂದು ಪರಿತಪಿಸುತ್ತಿದ್ದ ನಿರಾಶೆಯಿಂದ ಕಂಗೆಟ್ಟಿದ್ದ ಬಡತನದಿಂದ ಪರದಾಡುತ್ತಿದ್ದ ದುರ್ದಿನ. ಅದೆ ತಾನೆ ಬಿ.ಎಂ.ಶ್ರೀ, ಕುವೆಂಪು, ಅ.ನ.ಕೃ, ಎ.ಆರ್.ಕೃ, ಡೆಪ್ಯೂಟಿ ಚೆನ್ನಬಸಪ್ಪ ಮೊದಲಾದವರು ಕನ್ನಡದ ಏಳ್ಗೆಗಾಗಿ, ಅದರ ಸ್ಥಾನಮಾನಗಳಿಗಾಗಿ ಸರ್ವಪ್ರಯತ್ನವನ್ನು ನಡೆಸಿದರೂ ಕನ್ನಡ ಓದಿದವರಿಗೆ ಉದ್ಯೋಗಾವಕಾಶಗಳು ವಿರಳವಾಗಿದ್ದ ಬರಗಾಲವದು. ಸ್ವತಃ ಸರ್ಕಾರದ ಕಾರ್ಯಸೌಧದಲ್ಲಿ ಕರಣಿಕರಾಗಿ, ಆ ವೃತ್ತಿ ಬೇಸರವಾಗಿ ಪ್ಲೀಡರ್ ಆಗ ಬೇಕೆಂದು ಬಯಸುತ್ತಿದ್ದಾಗ, ಅಂದರೆ ನಾಲ್ಕು ವರ್ಷದ ನಂತರ ನನ್ನ ದೈವ ನನ್ನನ್ನು ವಿಶ್ವವಿದ್ಯಾನಿಲಯಕ್ಕೆ ತಂದಿತು. ಗುರುಕೃಪೆಯಿಂದ ಕನ್ನಡ ಓದಿದವರಿಗೆ ಮತ್ತು ಕನ್ನಡದ ಹೋರಾಟಗಾರರಿಗೆ ಸೇವೆ ಸಲ್ಲಿಸುವ ಅವಕಾಶಗಳೂ ನನಗೆ ದೊರತದ್ದುಂಟು. ಅಂತಹ ಸಂದರ್ಭದಲ್ಲಿ ದೇ. ಜವರೇಗೌಡ ಅವರಿಗೆ ಇದ್ದ ಒಂದೇ ಒಂದು ಛಲವೆಂದರೆ ಕನ್ನಡ ಓದಿದವರಿಗೆ ನೌಕರಿ ದೊರೆಯಬೇಕು ಎಂಬ ದೃಢಸಂಕಲ್ಪವನ್ನು ಅದೇ ಮಾಡಿದರು. ಅದಕ್ಕಾಗಿ ಅವರು ಹಗಲಿರುಳೆನ್ನದೆ ಕನ್ನಡದಲ್ಲಿ ಓದಿದವರಿಗೆ ಕೆಲಸಗಳಲ್ಲಿ ಆದ್ಯತೆ ಇರಬೇಕೆಂದು ಹೋರಾಡಿದರು. ಇದು ಒಬ್ಬ ಭಾಷಾಪ್ರೇಮಿಗೆ ಇರಬೇಕಾದ ಸ್ವಾಭಿಮಾನದ ಪ್ರಶ್ನೆಯಾಗಿದೆ.

ಕನ್ನಡ ಮಾಧ್ಯಮದ ಮೂಲಕ ಡಿಗ್ರಿ ಪಡೆದುಕೊಂಡ ವಿದ್ಯಾರ್ಥಿಗಳು ದೇ. ಜವರೇಗೌಡ ಅವರ ಹತ್ತಿರ ಬಂದು "ಸಾರ್, ಲೋಕಸೇವಾ ಆಯೋಗದ ಮುಂದೆ ಸಂದರ್ಶನಕ್ಕೆ ಹೋಗಿದ್ದೆ ಸಾರ್, ಕನ್ನಡದ ವಿದ್ಯಾರ್ಥಿ ಎಂದ ಕೂಡಲೆ ಮುಂದೆ ಪ್ರಶ್ನೆ ಕೇಳದೆಯೆ ಕಳಿಸಿಬಿಟ್ಟರು". "ಬ್ಯಾಂಕಿನ ಕೆಲಸಕ್ಕೆ ಅರ್ಜಿಹಾಕಿಕೊಂಡು ಸಂದರ್ಶನಕ್ಕೆ ಹೋದೆ, ಅಲ್ಲಿಯ ಅಧಿಕಾರಿಗಳಂತೂ ಅವಮಾನ ಮಾಡಿ ಕಳಿಸಿದರು". "ಕಾರ್ಖಾನೆಯೊಂದಕ್ಕೆ ಕೆಲಸ ಕೇಳಲು ಹೋದೆ, ಇಲ್ಲಿಗೇಕೆ ಬಂದೆ? ನಿಮ್ಮ ಕನ್ನಡದ ಕುವರ ಕಡುಗಲಿ ಇದ್ದಾರಲ್ಲ, ಅವರ ಬಳಿ ಹೋಗಿ ಎಂದು ಹೀಗೆಲ್ಲ ಮುಖಭಂಗ ಮಾಡುತ್ತಾ"ರೆಂದು ಕಣ್ಣೀರು ಸುರಿಸುತ್ತ ತಮ್ಮ ನೋವನ್ನು ಹೇಳುತ್ತಾರೆ. ಆದರೆ

ದೇ. ಜವರೇಗೌಡರು ಹೇಳುವುದಿಷ್ಟೆ, ಇಂಗ್ಲಿಷ್ ಅಥವಾ ಹಿಂದಿ ಕಲಿತವರಿಗೆ ಹೊರಗೆ ಸಾಕಷ್ಟು ನೌಕರಿ ಸಿಗುತ್ತವೆ; ಕನ್ನಡ ಕಲಿತವರಿಗೆ ಮತ್ತೆಲ್ಲಿಯೂ ಕೆಲಸ ಸಿಗುವುದಿಲ್ಲ. ಆದ್ದರಿಂದ ಕರ್ನಾಟಕ ಸರ್ಕಾರದಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ನೌಕರಿಗಳನ್ನು ಮೀಸಲಿಡುವುದು ಧರ್ಮ. ಕೆಲವು ಐ.ಟಿ.ಬಿ.ಟಿ. ಕಂಪನಿಗಳು ಕರ್ನಾಟಕದಲ್ಲಿ ನೆಲೆ ನಿಂತಿವೆ. ಅವರಿಗೆ ಕರ್ನಾಟಕದ ನೀರು, ಗಾಳಿ, ಭೂಮಿ ಬೇಕು. ಆದರೆ ಕನ್ನಡಿಗರಿಗೆ ಕೆಲಸ ಕೊಡಲು ಸಾಧ್ಯವಿಲ್ಲ ಎಂದು ಹೇಳುವ ಕೈಗಾರಿಕೋದ್ಯಮಿಗಳ ವಿರುದ್ಧ ದೇ. ಜವರೇಗೌಡ ಉದ್ಯೋಗದಲ್ಲಿ ಪ್ರಾತಿನಿದ್ಯ ಕನ್ನಡಗರಿಗೆ ನೀಡಬೇಕೆಂದು ಗುಡುಗುತ್ತಾರೆ. ಆದ್ದರಿಂದ ದೇ. ಜವರೇಗೌಡ ಅವರ ಮುಖ್ಯಗುರಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ನೌಕರಿಯಲ್ಲಿ ಆದ್ಯತೆ ಸಿಗಬೇಕು. ಕರ್ನಾಟಕದ ಕಾರ್ಖಾನೆಯಲ್ಲಿ ಕನ್ನಡಿಗರಿಗೆ ಆದ್ಯತೆ ನೀಡುವ ತನಕ ನನಗೆ ಶಾಂತಿ ಇರುವುದಿಲ್ಲ ಎನ್ನುತ್ತಾರೆ ದೇ. ಜವರೇಗೌಡ.

೬. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗುವಂತಾಗಬೇಕು

ದೇ.ಜವರೇಗೌಡ ಅವರು ಈವರೆಗೂ (ಜುಲೈ ೧೬, ೨೦೦೭ನೆ ಇಸವಿಗೆ ಅವರಿಗೆ ೯೦ ವರ್ಷ ಸಂದಿದೆ, ೯೦ ವರ್ಷ ತುಂಬಿದ್ದರೂ) ನವಯುವಕನಂತೆ ಕಂಗೊಳಿಸುತ್ತಿರುವ ಅವರು ಜೀವನದ ಒಂದು ಬಲಪ್ರದವಾದ ಆಕಾಂಕ್ಷೆಯೆಂದರೆ "ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗುವಂತಾಗಬೇಕು" ಎಂಬುದಾಗಿದೆ. ತಮಿಳಿಗಿಂತಲೂ ಕನ್ನಡ ಪ್ರಾಚೀನವಾದದ್ದೆ ಅದು ಎಂತಹ ಕನ್ನಡಿಗನಿಗೂ ತಿಳಿದಿರುವ ಸಂಗತಿ. ರಾಜಕೀಯದಿಂದ ತಮಿಳರು ತಮ್ಮ ಭಾಷೆಯನ್ನು ಪ್ರಾಚೀನವಾದದ್ದೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕಿ ತಮಿಳನ್ನು ಶಾಸ್ತ್ರೀ ಭಾಷೆಯಾಗಿ ಪರಿವರ್ತಿಸಿಕೊಂಡರು. ಕನ್ನಡಕ್ಕೆ ತನ್ನದೇ ಆದ ಪ್ರಾಚೀನತೆ ಇದೆ. ಸಾಹಿತ್ಯ ಸಮೃದ್ಧಿ ಇದೆ. ಇಡೀ ವಿಶ್ವದಲ್ಲಿಯೇ ಕನ್ನಡ ಸಾಹಿತ್ಯದಲ್ಲಿರುವ ವಚನ ಸಾಹಿತ್ಯ ಬೇರೆಲ್ಲಿಯೂ ಸಿಗುವುದಿಲ್ಲ. ಒಂದೊಂದು ವಚನವೂ ಅನುಭವಾಮೃತದ ನುಡಿಮುತ್ತಾಗಿದೆ ಎನ್ನುವ ದೇ. ಜವರೇಗೌಡ ಅವರ ಬದುಕಿನ ಮುಖ್ಯವಾದ ಕೆಲಸ ಎಂದರೆ ತಪ್ಪಾಗಲಾರದು. ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಎಂಬ ಕೂಗು ಕೇಳಿದರೆ ಆ ಕೂಗಿನ ಹಿಂದೆ ಇರುವವರು ದೇ. ಜವರೇಗೌಡ ಅವರು. ಕರ್ನಾಟಕದ ಎಂ.ಪಿ.ಗಳು ಮನಸ್ಸು ಮಾಡಿದರೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೆಲವೇ ದಿನಗಳಲ್ಲಿ ದೊರಕುತ್ತದೆ. ಆದರೆ ಸ್ವಜನ ಪಕ್ಷಪಾತದಿಂದ ತಮ್ಮ ನಾಡಿನ ಏಳ್ಗೆಗೆ ಕೊಡಲಿ ಪೆಟ್ಟನ್ನು ಹಾಕುತ್ತಿರುವವರು ಈ ರಾಜಕೀಯದವರು. ಅವರಿಗೆ ಭಾಷಾಪ್ರೇಮ. ದೇಶಪ್ರೇಮ ಸ್ವಲ್ಪವೂ ಇಲ್ಲವಾಗಿದೆ. ಆದ್ದರಿಂದಲೇ ಅವರು ಕನ್ನಡ ದ್ರೋಹಿಗಳು ಎಂದು ದೇ.ಜವರೇಗೌಡರು ಕಿಡಿಕಾರುತ್ತಾರೆ.

ಶಾಸ್ತ್ರೀಯ ಭಾಷೆಯ ಲಕ್ಷಣಗಳೆಂದರೆ "ಕ್ಲಾಸಿಕಲ್ ಲಾಂಗ್ವೇಜ್" ಅನ್ನು ಶಾಸ್ತ್ರೀಯ ಭಾಷೆಯೆಂದು ಅರ್ಥೈಸಲಾಗುತ್ತಿದೆ. ಆ ಅರ್ಥ ತಪ್ಪು; ಅದನ್ನು ಅಭಿಜಾತ ಭಾಷೆಯೆಂದೂ ಪುರಾತನ ಭಾಷೆಯೆಂದೂ ಉತ್ಕೃಷ್ಟ ಭಾಷೆಯೆಂದು ಕರೆಯಬೇಕೆಂದು ವಿದ್ವಾಂಸರ ಹೇಳಿಕೆ. ತಮಿಳಿನಲ್ಲಿ 'ಚೆಮ್ಮೊಳಿ' ಎಂಬ ಪದವನ್ನು ಬಳಸುತ್ತಾರೆ. ಶ್ರೇಷ್ಠವಾದ, ನಯವಾದ, ನೇರವಾದ,

ಅದ್ಭುತವಾದ ಭಾಷೆ ಎಂಬ ಅರ್ಥವನ್ನು ಆ ಪದ ಸೂಚಿಸುತ್ತದೆ. ಅದಕ್ಕೆ ಸಂವಾದಿಯಾಗಿ ಕನ್ನಡದಲ್ಲಿರುವ 'ಚೆನ್ನುಡಿ'ಯನ್ನೇಕೆ ಬಳಸಬಾರದು ಎಂಬ ಸೂಚನೆಯೂ ಇದೆ. ಸದ್ಯಕ್ಕೆ ಪದ ಯಾವುದಾದರು ಸರಿಯೇ ಕನ್ನಡಕ್ಕೆ ಕ್ಲಾಸಿಕಲ್ ಲಾಂಗ್ವೇಜ್ ಸ್ಥಾನಮಾನ ದೊರೆಯುವುದು ಬಹಳ ಮುಖ್ಯವಾದ ಸಂಗತಿ.

ಅತ್ಯುತ್ಕೃಷ್ಟವೂ ಅಮೂಲ್ಯವೂ ಪ್ರಭಾವಶಾಲಿಯೂ ಆಗಿದ್ದು, ಈಗ ಚಾಲ್ತಿಯಲ್ಲಿಲ್ಲದ, ಆದರೆ ಪ್ರಾಚೀನ ಪಠ್ಯಗಳ ಮೂಲಕ ಅಧ್ಯಯನ ಮಾಡಬಹುದಾದ ಭಾಷೆಯನ್ನು ಕ್ಲಾಸಿಕಲ್ ಲ್ಯಾಂಗ್ವೇಜ್ ಎಂದು ಭಾಷಾ ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆಯಾಗಿ ಘೋಷಿಸಬೇಕೆಂಬ ವಾದವನ್ನು ೧೮೮೭ ರಷ್ಟು ಹಿಂದೆಯೇ ಪರುಮತ್ತಿಯಲ್ ಕಲ್ಡೆಂಗ್ನರ್ ಎಂಬ ಪಂಡಿತರು ಪ್ರಾರಂಭಿಸಿದ್ದರು. ತಮಿಳು, ಸಂಸ್ಕೃತ ಮೊದಲುಗೊಂಡು ಯಾವ ಭಾಷೆಯ ಪ್ರಭಾವಕ್ಕೂ ಒಳಗಾಗಿಲ್ಲ ಎಂದು ೨೦೦೦ನೇಯ ಇಸವಿ ಏಪ್ರಿಲ್ ತಿಂಗಳಲ್ಲಿ ಬರ್ಕ್ಲಿ ನಗರದಲ್ಲಿನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಸಂಸ್ಕೃತ ಮತ್ತು ತಮಿಳು ಪ್ರಾಧ್ಯಾಪಕ ಜಾರ್ಜ್ ಎಲ್. ಹಾರ್ಟ್‌ರವರ ಅಭಿಪ್ರಾಯವಾಗಿದೆ.

ಕೆಲವು ವರ್ಷಗಳಿಂದ ತಮಿಳರು ಈ ಶಾಸ್ತ್ರೀಯ ಸ್ಥಾನಮಾನದ ಬಗ್ಗೆ ಕೇಂದ್ರ ಸರ್ಕಾರ ಒತ್ತಡ ಹಾಕಿ ಸಂಸ್ಕೃತಕ್ಕಿಲ್ಲದ ಸ್ಥಾನ ಈ ತಮಿಳಿಗೆ ದೊರಕಿದೆ. ಯಾವುದೇ ಒಂದು ಭಾಷೆ ಶಾಸ್ತ್ರೀಯ ಭಾಷೆಯಾಗಬೇಕಾದರೆ ಕೇಂದ್ರ ಸರ್ಕಾರ ಹಾರ್ಟ್ ಅವರ ಸೂತ್ರವನ್ನು ಆಧಾರವಾಗಿಟ್ಟುಕೊಂಡು ಈ ರೀತಿ ಲಕ್ಷಣಗಳನ್ನು ಪಟ್ಟಿ ಮಾಡಿದೆ.

೧. ಒಂದು ಭಾಷೆ ಪುರಾತನವಾಗಿರಬೇಕು.

೨. ಅದು ತಾನೇ ತಾನಾಗಿ ಸ್ವತಂತ್ರವಾಗಿ ಹುಟ್ಟಿ ಬೆಳೆದಿರಬೇಕು.

೩. ಅದು ಯಾವ ಭಾಷೆಯ ಪ್ರಭಾವಕ್ಕೂ ಒಳಪಡಬಾರದು.

೪. ಸಮೃದ್ಧವೂ ಉತ್ಕೃಷ್ಟವೂ ಆದ ಸಾಹಿತ್ಯವನ್ನು ಹೊಂದಿರಬೇಕು.

ತಮಿಳಿನಂತೆ ಕನ್ನಡವೂ ಸದಾ ಶಾಸ್ತ್ರೀಯ ಭಾಷೆಗೆ ಅರ್ಹವಾದ ಭಾಷೆಯಾಗಿದೆ. ಕನ್ನಡ ಪ್ರಪ್ರಾಚೀನ ಭಾಷೆಯೆಂಬುದರಲ್ಲಿ ಲೇಶ ಮಾತ್ರವೂ ಸಂದೇಹವಿಲ್ಲ. ಫಾದರ್ ಹೆರಾಸ್ ಎಂಬುವರು ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯಲ್ಲಿ ಕನ್ನಡದ ಚಹರೆಗಳನ್ನು ಗುರುತಿಸಿದ್ದಾರೆ. ರಾಮಾಯಣ ಮಹಾಭಾರತಗಳ ಕರ್ತೃಗಳಿಗೆ ಕರ್ನಾಟಕದ ಅಸ್ತಿತ್ವ ಗೊತ್ತಿತ್ತು. ಎರಡು ಸಾವಿರ ವರ್ಷಗಳ ಹಿಂದಿನಿಂದಲೂ ಕನ್ನಡ ಭಾಷೆ ಬಳಕೆಯಲ್ಲಿತ್ತು. ಅಪಾರ ಜನಪದ ಸಾಹಿತ್ಯ ಸೊಂಪಾಗಿ, ಹುಲುಸಾಗಿ ಬೆಳೆದಿತ್ತು. ಇದನ್ನು ರಚಿಸುತ್ತಿದ್ದವರು ನಿರಕ್ಷರಿಗಳು. ಜಗತ್ತಿನ ಯಾವ ಮಹಾಕಾವ್ಯಗಳಿಗೂ ಸರಿಸಾಟಿಯಾದ ವಡ್ಡಾರಾಧನೆ (೯೨೦) ಎಂಬ ಗದ್ಯಕಾವ್ಯ. ಪಂಪನ ಎರಡು ಮಹಾಕಾವ್ಯಗಳ ಪ್ರೌಢಿಮೆಯನ್ನೂ ವೈಭವವನ್ನೂ ಗಮನಿಸಿದಾಗ ಅವುಗಳಿಗೆ ಪೂರ್ವದಲ್ಲಿ ಹಲವು ಶತಮಾನಗಳಿಂದ ಕನ್ನಡದಲ್ಲಿ ಸಾಹಿತ್ಯ ಕೃಷಿ ನಡೆದಿರಬೇಕೆಂಬ ಊಹೆ ಸಕಾರಣವಾಗಿದೆ.

ಕನ್ನಡ ಸಾಹಿತ್ಯಕ್ಕೆ ಎರಡು ಸಾವಿರ ವರ್ಷಗಳ ಅವಿಚ್ಛಿನ್ನ ಸುದೀರ್ಘವಾದ ಇತಿಹಾಸವಿದೆ. ಮೂಲಕೃತಿಗಳ ಅನುಕೃತಿಗಳಲ್ಲವೆನ್ನುವಂತೆ ಪುನರ್ ಸೃಷ್ಟಿಸಿದ್ದಾರೆ. ಪಂಪನ ಕರ್ಣ, ದುರ್ಯೋಧನ, ಸಖ್ಯ, ಭರತ ಬಾಹುಬಲಿಗಳ ಪ್ರಸಂಗಗಳೇ ಈ ಮಾತಿಗೆ ಸಾಕ್ಷಿ. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವಂತು ವಾಲ್ಮೀಕಿ ರಾಮಾಯಣಕ್ಕಿಂತ ತೀರ ಭಿನ್ನವೆನ್ನುವುದನ್ನು ವಿಮರ್ಶಕರು ಬಲ್ಲವರಾಗಿದ್ದಾರೆ. ಯಾವ ಕಾಲದ ಎಂಥ ಪ್ರತಿಭಾವಂತರ ಕೃತಿಯೇ ಆಗಲಿ, ಅದು ಸಂಪೂರ್ಣ ಸ್ವತಂತ್ರ ಕೃತಿಯಾಗಿರಲಾರದು. ಒಬ್ಬನ ಕೈ ಇನ್ನೊಬ್ಬನ ಜೇಬಿನಲ್ಲಿದ್ದೇ ಇರುತ್ತದೆ.

ಹಳಗನ್ನಡದಲ್ಲಿ ಸಾಕಷ್ಟು ಶಾಸ್ತ್ರ ಸಾಹಿತ್ಯವೂ ಇದೆ. ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಇಲ್ಲದ ಸಾಹಿತ್ಯ ಪ್ರಕಾರಗಳು ಕನ್ನಡದಲ್ಲಿವೆ. ಅವೇ ವಚನ ಮತ್ತು ದಾಸ ಸಾಹಿತ್ಯಗಳು. ಜಗತ್ತಿನ ಯಾವ ಭಾಷೆಯಲ್ಲಿಯೂ ಕಾಣ ಸಿಗದ ಕ್ರಾಂತಿ ಸಾಹಿತ್ಯವನ್ನು ಬಸವಾದಿ ಶರಣರು ಸೃಷ್ಟಿಸಿದರೆನ್ನುವುದು ಹೆಮ್ಮೆಯ ಸಂಗತಿ. ಕನ್ನಡದಲ್ಲಿಯೇ ಹುಟ್ಟಿದ ಚಂಪೂ ಪದ್ಧತಿ ಸಂಸ್ಕೃತಾದಿ ಭಾಷೆಗಳ ಕಡೆಗೆ ಹರಿಯಿತ್ತೆಂದು ರಂ. ಶ್ರೀ. ಮುಗಳಿಯವರು ಪ್ರತಿಪಾದಿಸಿದ್ದಾರೆ.

ತ್ರಿಪದಿ, ಚೌಪದಿ, ಷಟ್ಪದಿಗಳಂತು ಅಚ್ಚಗನ್ನಡ ಛಂದಸ್ಸುಗಳು. ಸಂಗೀತದ ವಿಚಾರ ಬಂದಾಗ ದಕ್ಷಿಣ ಭಾರತದ ಸಂಗೀತ ಪದ್ಧತಿ ಕರ್ನಾಟಕ ಸಂಗೀತವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಪುರಂದರದಾಸರು ಅದರ ಜನಕರೆಂದು ಇತಿಹಾಸ ಹೇಳುತ್ತದೆ. ಸಂಗೀತದಲ್ಲಿ ಬಹು ಪ್ರಾಚೀನವೂ ಪ್ರಮುಖವೂ ಆದ ಗ್ರಂಥ ಬೃಹದ್ದೇಶಿ. ಅದರ ಕರ್ತೃ ಮತಂಗ ಐದನೆಯ ಶತಮಾನದವನು. ಋಷ್ಯಮೂಕ ಪರ್ವತದ ಬಳಿಯ ಕನ್ನಡಿಗ, ಗ್ರಂಥ ಮಾತ್ರ ಸಂಸ್ಕೃತದಲ್ಲಿದೆ. ಅದರಲ್ಲವನು ಕನ್ನಡದ ಹಾಡುಗಳನ್ನೂ ಉದಾಹರಿಸಿದ್ದಾನೆ,[೧೨] ಇದು ಭಾಷೆಯ ಪ್ರಾಚೀನತೆಗೂ ಒಂದು ಆಧಾರ.

ಇಂಡಿಯಾದಲ್ಲಿ ಮಾತ್ರವಲ್ಲ ಇಡೀ ಜಗತ್ತಿನಲ್ಲಿಯೇ ಕರ್ನಾಟಕ ಸಂಸ್ಕೃತಿ ಶ್ರೇಷ್ಠವಾಗಿದ್ದು, ಎಣೆಯಿಲ್ಲದ್ದಾಗಿದೆ. ಕನ್ನಡ ನಾಡಿನ ಜನಜೀವನವನ್ನು ಯಥಾವತ್ತಾಗಿ ಪ್ರತಿಬಿಂಬಿಸುವ ಶಾಸನಗಳು ಸಾಹಿತ್ಯ ಸಂಸ್ಕೃತಿ ಪರಂಪರೆಯನ್ನು ಗಟ್ಟಿಯಾಗಿ ಉಳಿಸಿರುವ ಶಾಶ್ವತ ಆಸ್ತಿಗಳು. ಐಹೊಳೆ, ಪಟ್ಟದ ಕಲ್ಲು, ಬಾದಾಮಿ, ಹಳೇಬೀಡು, ಬೇಲೂರು, ಬಳ್ಳಿಗಾವೆ, ಹಂಪೆ, ಶ್ರವಣಬೆಳಗೊಳ, ಎಲ್ಲೋರ, ಎಲಿಫೆಂಟಾ ಗುಹೆ, ದೊಡ್ಡಗದ್ದವಳ್ಳಿ, ಅಜಂತ, ಬಿಜಾಪುರ ಇಲ್ಲಿಯ ಭುವನಮೋಹಕ ಶಿಲ್ಪಕಲೆ ಕರ್ನಾಟಕ ಸಂಸ್ಕೃತಿಯ ಶ್ರೀಮಂತಿಕೆಗೆ ದ್ಯೋತಕವಾಗಿವೆ.

'ಕರ್ನಾಟಕ ಚರಿತ್ರೆಯೆಂದರೆ ದಕ್ಷಿಣ ಭಾರತ ಚರಿತ್ರೆ' ಎಂದು ಎಂ.ಎಚ್.ಕೃಷ್ಣ ಅವರ ಮಾತು ಬಹಳ ಮುಖ್ಯ. ಕರ್ನಾಟಕ ರಾಜರು ರೂಪಿಸಿದ ರಾಜಕೀಯ ಕ್ಷೇತ್ರವೂ ಭರತ ಖಂಡದಲ್ಲಿಯೇ ಅನುಪಮವಾಗಿತ್ತು. ಭಾರತ ವ್ಯಾಪ್ತಿಯ ಗೌರವ ಮನ್ನಣೆಗಳನ್ನು ಪಡೆದಂಥ ವೀರಾಧಿವೀರರು ಇಲ್ಲಿ ಆಗಿ ಹೋಗಿದ್ದಾರೆ. ಕದಂಬ ವಂಶದ ಮಯೂರ ವರ್ಮನಿಂದ ಪ್ರಾರಂಭವಾದ ಈ ಶೂರರ ಪರಂಪರೆ ಶ್ರೀ ಕೃಷ್ಣ ದೇವರಾಯನ ಕಾಲದವರೆಗೂ ಏಕ ಪ್ರಕಾರವಾಗಿ ಸಾಗುತ್ತದೆ. ಇದಲ್ಲದೆ ಉತ್ತರ ಭಾರತದಲ್ಲಿ ಇಂದಿಗೂ ಕನ್ನಡ ಹೆಸರಿನ ಹಳ್ಳಿಗಳು ಇವೆ. ಅಷ್ಟೇ ಅಲ್ಲದೆ ಸಂಸ್ಕೃತಕ್ಕೆ ಕನ್ನಡಿಗರ ಕೊಡುಗೆ ಸಾಕಷ್ಟಿದೆ. ಧ್ವನಿ ಮತ್ತು ಶಾಂತ ರಸಗಳ ಕಲ್ಪನೆ ಮೊದಲು ಕವಿರಾಜ ಮಾರ್ಗದಲ್ಲಿ ಕಾಣಿಸಿಕೊಳ್ಳುತ್ತದೆ. ಸಂಸ್ಕೃತದಲ್ಲಿ ಸಂಗೀತ ಶಾಸ್ತ್ರವನ್ನು ರಚಿಸಿದವರಲ್ಲಿ ಕನ್ನಡಿಗರೇ ಹೆಚ್ಚಿನವರು.

೧೨ - ಡಾ|| ಎಚ್.ತಿಪ್ಪೇರುದ್ರಸ್ವಾಮಿ, ಡಿವಿಕೆ ಮೂರ್ತಿ, ಪ್ರಕಾಶನ, ಮೈಸೂರು, ಕರ್ನಾಟಕ ಸಂಸ್ಕೃತಿ ಸಮೀಕ್ಷೆ - ಪುಟ ೬೬೨.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಕನ್ನಡ ಭಾಷೆ ತನ್ನದೇ ಆದ ಪ್ರಾಚೀನತೆ, ಸಂಸ್ಕೃತಿಯ ಹಿರಿಮೆಯನ್ನು ಹೊಂದಿದೆ. ಆದರೂ ಸಹಾ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ದೊರಕದಿರುವುದು ಶೋಚನೀಯ ಸಂಗತಿಯಾಗಿದೆ. ಯಾವುದೇ ಒಂದು ಭಾಷೆ ಶಾಸ್ತ್ರೀಯ ಭಾಷೆಯಾದರೆ ಅದಕ್ಕಾಗುವ ಲಾಭಗಳೆಂದರೆ ಆರ್ಥಿಕ ಲಾಭದ ಜತೆಗೆ, ಪ್ರತಿಷ್ಠೆಯ ಸ್ಥಾನಮಾನ ಮುಖ್ಯವೆಂದು ಲಿಂಗದೇವರು ಹಳೆಮನೆ ಸ್ಪಷ್ಟಪಡಿಸಿದ್ದಾರೆ. ಉನ್ನತ ಅಧ್ಯಯನ ಕೇಂದ್ರದ ಸ್ಥಾಪನೆ, ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳ ಏರ್ಪಾಡು, ಅನ್ಯಭಾಷಾ ಪ್ರದೇಶಗಳಲ್ಲಿ ಶಾಸ್ತ್ರೀಯ ಭಾಷೆಯ ಪ್ರಸಾರ, ಆ ಭಾಷೆಯಲ್ಲಿ ಸಂಶೋಧನೆ ನಡೆಸಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ವಾಂಸರಿಗೆ ಧನ ಸಹಾಯ ಹಾಗೂ ಪ್ರಶಸ್ತಿ ವಿತರಣೆ ಆಗುತ್ತದೆ.

ದೇ. ಜವರೇಗೌಡ ಅವರು ತಮಿಳಿಗೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿದ್ದಕ್ಕೆ ದುಃಖವಿಲ್ಲ, ಆಕ್ರೋಶವಿಲ್ಲ, ತಮ್ಮ ಭಾಷೆ ಇತರ ಭಾಷೆಗಳಿಗಿಂತ ಮೇಲು ಎನ್ನುವ ಸ್ವಪ್ರಶಂಸೆ ಕನ್ನಡ ಪ್ರಾಚೀನ ಭಾಷೆ ಮಾತ್ರವಲ್ಲ ಜಗತ್ತಿನಲ್ಲಿಯೇ ಸಮೃದ್ಧವಾದ ಭಾಷೆ. ಇದನ್ನು ಕಡೆಗಣಿಸಿದಾಗ ಆತ್ಮಗೌರವ ಸ್ವಾಭಿಮಾನವುಳ್ಳ ಜನರಲ್ಲಿ ಸಾತ್ವಿಕ ಕ್ರೋಧ ಹೆಡೆಯೆತ್ತುವುದು ಸಹಜ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೇವಲ ಆರ್ಥಿಕ ಲಾಭದ ಪ್ರಶ್ನೆಯಲ್ಲ. ಅದು ಇದೇ ಕನ್ನಡಿಗರ ಆತ್ಮಗೌರವದ ಪ್ರಶ್ನೆ ಎಂದು ದೇ.ಜವರೇಗೌಡ ಹೇಳುತ್ತಾರೆ. ತಮಿಳಿಗಿಂತಲೂ ಎಲ್ಲ ವಿಧಗಳಿಂದ ಅದಕ್ಕಿಂತಲೂ ಸಮೃದ್ಧ ಶ್ರೀಮಂತವಾದ ಭಾಷೆಯನ್ನು ಪಡೆದಿರುವ ಕನ್ನಡಿಗರಿಗೇಕೆ ಈ ಸರಸ್ವತೀ ಶಕ್ತಿಯಲ್ಲಿ ಗೌರವ ಭಾವವಿಲ್ಲ ಎಂದು ಮರುಗುತ್ತಾರೆ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆಯಬೇಕು. ಅದಕ್ಕಾಗಿ ತನ್ನ ಪ್ರಾಣವನ್ನೇ ಪಣವಿಟ್ಟು ಹೋರಾಡಲು ಸಿದ್ಧ ಎನ್ನುವ ದೇ. ಜವರೇಗೌಡ ಅವರು ಕನ್ನಡ ನಾಡಿನ ಒಂದು ಅಮೂಲ್ಯ ರತ್ನ ಎಂದರೆ ತಪ್ಪಾಗಲಾರದು. ಅವರ ಕನ್ನಡ ಪರ ಚಿಂತನೆಗಳಲ್ಲಿ ಈ ವಿಷಯವೂ ಬಹಳ ಪ್ರಮುಖವಾದುದು.

[illegible]

೭. ಕನ್ನಡ ಮುಂದೇನಾಗಬೇಕಾಗಿದೆ

"ಕನ್ನಡ ಕಲಿತ ನೀವೆಲ್ಲ ಅಧ್ಯಾಪಕರೇ ಆಗಬೇಕೆಂದಿಲ್ಲ. ನೀವೆಲ್ಲ ಬೇರೆ ಬೇರೆ ಉದ್ಯೋಗ ಕೈಗೊಳ್ಳಬೇಕು. ಸರಕಾರದ ವಿವಿಧ ಇಲಾಖೆಗಳಲ್ಲಿ ಕನ್ನಡ ಕಲಿತವರು ಸೇರಿಕೊಳ್ಳಬೇಕು. ಐ.ಎ.ಎಸ್., ಐ.ಪಿ.ಎಸ್, ಐ.ಸಿ.ಎಸ್ ಪರೀಕ್ಷೆಗಳನ್ನು ಪಾಸು ಮಾಡಬೇಕು. ನಿಮ್ಮ ಜತೆ ಡಾಕ್ಟರು, ಇಂಜಿನಿಯರು, ವಕೀಲರು ಎಲ್ಲರೂ ತಮ್ಮ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲೇ ಬರೆಯಬೇಕು. ಆಗ ಮಾತ್ರ ಕನ್ನಡದ ಉದ್ಧಾರ ಸಾಧ್ಯ ಎನ್ನುತ್ತಾರೆ ದೇ.ಜವರೇಗೌಡ.[೧೩]

ದೇ. ಜವರೇಗೌಡ ಅವರು ಮುಖ್ಯವಾಗಿ ಕರ್ನಾಟಕದ ಹೆಸರು ಚಿರಕಾಲವಾಗಿ ಉಳಿಯಬೇಕಾದರೆ, ಕನ್ನಡ ಸರ್ವಮಾಧ್ಯಮವಾಗಿ ಬಳಕೆಯಾಗಬೇಕೆಂಬುದು ಆಗ ಮಾತ್ರ ಕನ್ನಡ ಭಾಷೆಯ ಉದ್ಧಾರವಾಗುತ್ತದೆ ಎಂಬ ಚಿಂತನೆ ಅವರದು. ಕರ್ನಾಟಕದಲ್ಲಿ ಹುಟ್ಟಿ ಬೆಳೆದು ಅದರ ಹೆಸರಿಗಾಗಿ ಹೋರಾಟ ಮಾಡುವ ಕೆಲವೇ ಮಂದಿಗಳಲ್ಲಿ ದೇ. ಜವರೇಗೌಡ ಪ್ರಮುಖರು. ಆಂಗ್ಲಭಾಷೆ ಆಡಳಿತ ಮಾಧ್ಯಮವಾದರೆ ಅದು ನಾಡಿನ ಎಷ್ಟು ಜನಕ್ಕೆ ತಿಳಿಯುತ್ತದೆ. ಖಂಡಿತವಾಗಿಯೂ ಅದು ಜನ ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಆದ್ದರಿಂದ ಕನ್ನಡವನ್ನು ಆಡಳಿತ ಮಾಧ್ಯಮವನ್ನಾಗಿ ಜಾರಿಗೆ ತರುವುದು ಸುಲಭ. ಕಬ್ಬಿಣ ಕೆಂಪಗೆ ಕಾದಿರುವಾಗಲೇ ಬಡಿದು ಬಗ್ಗಿಸಬೇಕು. ಜನತೆಯ ಮನಸ್ಸು ಹದವಾಗಿರುವಾಗಲೇ ಚಳವಳಿಯ ಕಾವು ಆರುವ ಮುನ್ನವೇ ಸರ್ಕಾರದ ಮೇಲೆ ಒತ್ತಡ ತರಬೇಕಾದ್ದು ಮುಂಚೂಣಿಯಲ್ಲಿರುವವರ ಕರ್ತವ್ಯ ಎಂಬುದಾಗಿ ದೇ.ಜವರೇಗೌಡ ಅಭಿಪ್ರಾಯಪಡುತ್ತಾರೆ. ಈ ಆಡಳಿತ ಮಾಧ್ಯಮ ಯಶಸ್ಸನ್ನು ಸಾಧಿಸಬೇಕಾದರೆ ಸರ್ಕಾರ ಮತ್ತು ಜನತೆಯ ಪರಸ್ಪರ ಸಹಕಾರದಿಂದ ಸಾಧ್ಯವಾಗುತ್ತದೆ. ಅನ್ಯೋನ್ಯ ಸಹಕಾರವಿಲ್ಲದಿದ್ದಲ್ಲಿ ಅವೆರಡೂ ಒಂಟಿ ರೆಕ್ಕೆಯ ಹಕ್ಕಿಯಂತೆ ಮುದುಡಬೇಕಾಗುತ್ತದೆ ಎಂಬ ಅಂಶವನ್ನು ತಿಳಿಸುತ್ತಾ, ಕನ್ನಡದ ಅಭಿವೃದ್ಧಿಯ ಬಗ್ಗೆ ಸರ್ಕಾರ ಕೈಗೊಳ್ಳಬೇಕಾದ ಕರ್ತವ್ಯಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಗುರುತಿಸಬಹುದಾಗಿದೆ :

೧೩ - ಪದ್ಮಶ್ರೀ ದೇ.ಜವರೇಗೌಡ, ಸಂ. ತ. ಚಿ. ಚಲುವೇಗೌಡ, ತಳಗವಾದಿ ಪ್ರಕಾಶನ, ಮೈಸೂರು. ಪುಟ ೧೮.

೧. ಕೋರ್ಟು ಕಛೇರಿಗಳ ವ್ಯವಹಾರಗಳೆಲ್ಲ ಕನ್ನಡದಲ್ಲಿಯೇ ಜರುಗಬೇಕು. ಕನ್ನಡದಲ್ಲಿಲ್ಲದ ಲೆಕ್ಕ ಪತ್ರಗಳನ್ನು ಅವು ಯಾವ ಇಲಾಖೆಗಳಿಗೆ ಸಂಬಂಧಿಸಿರಲಿ ಅಥವಾ ಖಾಸಗಿ ಸಂಸ್ಥೆಗಳಿಗೆ ಸೇರಿದವುಗಳಾಗಿರಲಿ ಮುಲಾಜಿಲ್ಲದೆ ತಿರಸ್ಕರಿಸತಕ್ಕದ್ದು.

೨. ಮಂತ್ರಿಗಳು ಕನ್ನಡದಲ್ಲಿಯೇ ಟಿಪ್ಪಣಿ ಬರೆಯತಕ್ಕದ್ದು.

೩. ಶಾಸನಗಳು ಮತ್ತು ಸರ್ಕಾರಿ ಆಜ್ಞೆಗಳನ್ನು ಕನ್ನಡದಲ್ಲಿಯೇ ಮಾಡತಕ್ಕದ್ದು.

೪. ಕರ್ನಾಟಕದೊಳಗಿನ ಕೇಂದ್ರಸರ್ಕಾರದ ಕಚೇರಿಗಳೊಡನೆ ಕನ್ನಡದಲ್ಲಿಯೇ ವ್ಯವಹರಿಸತಕ್ಕದ್ದು.

೫. ನಾಮಫಲಕಗಳು ಕನ್ನಡದಲ್ಲಿಯೇ ಇರತಕ್ಕದ್ದು.

೬. ಕನ್ನಡ ಹಂತಹಂತವಾಗಿ ಆಡಳಿತ ಮಾಧ್ಯಮವಾಗಬೇಕೆನ್ನುವ ಥಳುಕು ಘೋಷಣೆಯನ್ನು ಅಂತ್ಯಗೊಳಿಸಬೇಕು; ಅಂದರೆ ಕೂಡಲೆ ಅದು ಜಾರಿಗೆ ಬರಬೇಕು.

೭. ಕನ್ನಡ ಬರೆದ ಅಧಿಕಾರಿಗಳಿಗೆ ೬ ತಿಂಗಳು ರಜೆಕೊಟ್ಟು ಅವರ ತರಬೇತಿಗೆ ಅನುಕೂಲ ಕಲ್ಪಿಸತಕ್ಕದ್ದು.

೮. ಕನ್ನಡದಲ್ಲಿ ಲೆಕ್ಕವಿಡದ ವ್ಯಾಪಾರಿಗಳನ್ನು ವಂಚಕರೆಂದು ಸಾರಿ ಶಿಕ್ಷೆ ವಿಧಿಸಬೇಕು.

೯. ಕನ್ನಡದಲ್ಲಿ ಪತ್ರ ವ್ಯವಹಾರ ನಡೆಸದ ಅಧಿಕಾರಿಗಳ ಬಡ್ತಿಯನ್ನು ತಡೆಹಿಡಿಯಬೇಕು.

ಒಂದೆಡೆ ಸರ್ಕಾರ ತನ್ನ ಪಾಲಿನ ಕರ್ತವ್ಯವನ್ನು ಪಾಲಿಸಬೇಕು ಎಂದು ಹೇಳಿದ ದೇ. ಜವರೇಗೌಡರ ಜನತೆ ಸಹ ಕನ್ನಡದ ಬಗ್ಗೆ ಎಚ್ಚೆತ್ತುಕೊಂಡು ಅವರೂ ಪ್ರಾಮಾಣಿಕವಾಗಿ ಮಾಡಬೇಕಾದ ಕರ್ತವ್ಯಗಳನ್ನು ದೇ. ಜವರೇಗೌಡ ಈ ರೀತಿ ತಿಳಿಸುತ್ತಾರೆ.

೧. ಸರ್ಕಾರೀ ಅಥವಾ ಖಾಸಗಿ ಸಂಸ್ಥೆಗಳೊಡನೆ ಕನ್ನಡದಲ್ಲಿಯೇ ವ್ಯವಹರಿಸಬೇಕು.

೨. ಕನ್ನಡದಲ್ಲಿ ವ್ಯವಹಾರ ನಡಸದ ಹೋಟಲು, ಸಿನಿಮಾ, ಅಂಗಡಿ ಮಳಿಗೆ, ಕಚೇರಿಗಳನ್ನು ಬಹಿಷ್ಕರಿಸಬೇಕು.

೩. ಕನ್ನಡವಿಲ್ಲದ ನಾಮಫಲಕಗಳನ್ನು - ಖಾಸಗಿ ಮನೆಯವಾದರೂ ಸರಿಯೆ - ಕಿತ್ತೆಸೆಯಬೇಕು.

೪. ಕನ್ನಡವನ್ನು ಗೌರವಿಸದ ಅಧಿಕಾರಿಗಳಿಗೆ ಸಾರ್ವಜನಿಕವಾಗಿ ಛೀಮಾರಿ ಹಾಕಬೇಕು.

೫. ಮದುವೆ ಮೊದಲುಗೊಂಡು ಯಾವ ಎಂಥ ಸಮಾರಂಭಕ್ಕೆ ಸಂಬಂಧಿಸಿದ ಆಹ್ವಾನ ಪತ್ರಿಕೆಯಾಗಲಿ ಕನ್ನಡದಲ್ಲಿಲ್ಲದ ಪಕ್ಷದಲ್ಲಿ ಉತ್ತರ ಸಹ ನೀಡಬಾರದು.

೬. ಹೊರಗಿನ ಆಗಂತುಕರು ವಿನಾ ಉಳಿದವರೊಡನೆ ಕನ್ನಡ ಬಿಟ್ಟು ಇತರ ಭಾಷೆಗಳ ಮೂಲಕ ವ್ಯವಹರಿಸಬಾರದು, ಮಾತಾಡಕೂಡದು.

೭. ಕನ್ನಡದ ಸೋಂಕಿಲ್ಲದ ಸಾರ್ವಜನಿಕ ಅಥವಾ ಖಾಸಗಿ ಸಮಾರಂಭಗಳನ್ನು ಬಹಿಷ್ಕರಿಸಬೇಕು. ಅಗತ್ಯವೆನಿಸಿದರೆ ಪ್ರತಿಭಟಿಸಬೇಕು.

೮. ಯಾವ ಮಾರ್ಗದಿಂದಾದರೂ ಸರಿಯೆ ಕೇಂದ್ರ, ಸರ್ಕಾರದ ಕಾರ್ಖಾನೆ ಹಾಗೂ ಕಚೇರಿಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡುವಂತೆ ಒತ್ತಾಯ ತರಬೇಕು.

೯. ಕನ್ನಡ ಮಾತಾಡದ ಜನರೊಡನೆ ಸಹಕರಿಸಕೂಡದು. ಕನ್ನಡ ಬರದ ಅಧಿಕಾರಿಗಳನ್ನು ಸಭೆ ಸಮಾರಂಭಗಳಿಂದ ದೂರವಿಡಬೇಕು.

೧೦. ಚುನಾವಣೆಗಳಲ್ಲಿ ಕನ್ನಡದ ಪರವಾಗಿರುವವರಿಗೆ, ಕನ್ನಡಕ್ಕಾಗಿ ಹೋರಾಡುವ ಸಂಕಲ್ಪಕಾರರಿಗೆ ಮಾತ್ರ, ಓಟು ಕೊಡಬೇಕು.

ಈ ಮೇಲ್ಕಂಡ ರೀತಿ ನೀಡುವ ಸಲಹೆಗಳು ತುಂಬಾ ವೈಜ್ಞಾನಿಕ ದೃಷ್ಟಿಕೋನದಿಂದ ಕೂಡಿದವುಗಳಾಗಿವೆ. ಅಷ್ಟೇ ಅಲ್ಲದೆ ಸರ್ವಕಾಲಕ್ಕೂ ಚಿಂತನ ಮಂಥನ ಮಾಡುವವುಗಳಾಗಿವೆ. ಅದೇ ರೀತಿ ಉಪಯುಕ್ತವಾದ ಸಲಹೆಗಳಾಗಿವೆ.

ಅಧ್ಯಾಯ-೪ : ಉಪಸಂಹಾರ

ಪ್ರಸ್ತುತ ಸಂದರ್ಭದಲ್ಲಿ ದೇಜಗೌ ಎನ್ನುವ ಮುತ್ತಿನ ಮೂರಕ್ಷರವೇ ಅನನ್ಯವಾದದು. ಹಳ್ಳಿಗಾಡಿನ ಪರಿಸರದಿಂದ ಬಂದು ಸ್ವಶಕ್ತಿಯಿಂದ ಹಾಗೂ ಪ್ರಗಲ್ಭ ಪಾಂಡಿತ್ಯದಿಂದ ಕನ್ನಡ ಸಾರಸ್ವತ ಲೋಕದಲ್ಲಿ ಮೇರು ಸ್ಥಾನಕ್ಕೆ ಏರಿದ ಯಶಸ್ಸು ಇವರದು. ಬದುಕಿನುದ್ದಕ್ಕೂ ಕನ್ನಡ ಎಂಬ ತ್ರ್ಯಯಕ್ಷರಿ ನಾಮವನ್ನು ಜಪಿಸುತ್ತಲೇ ನಾಡು-ನುಡಿಯ ಏಳಿಗೆಗೆ ಕಟಿಬದ್ಧರಾಗಿ ನಿಂತ ದೇ. ಜವರೇಗೌಡ ಕನ್ನಡ ಭಾಷೆಗೆ ಸಾಹಿತ್ಯ ಸಂಸ್ಕೃತಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಇವತ್ತಿನ ದಿನಗಳಲ್ಲಿ ಕನ್ನಡ ಭಾಷೆಗೆ ಅಷ್ಟಿಷ್ಟೇನಾದರೂ ಮಾನ್ಯತೆ ಲಭಿಸಿದೆ ಎನ್ನುವುದಾದರೆ ಅದು ಕುವೆಂಪು ಅವರ ಕಾರುಣ್ಯ ಶಿಶುವಾದ ದೇ. ಜವರೇಗೌಡ ಅವರಿಂದ ಎಂಬುದು ಸತಃ ಸಿದ್ಧವಾದ ಮಾತು. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು, ಕನ್ನಡಕ್ಕೆ ಸೂಕ್ತ ಸ್ಥಾನಮಾನ ಸಿಗುವಂತಾಗಬೇಕು, ಕನ್ನಡಭಾಷೆ ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಬೇಕು, ಕನ್ನಡವೇ ಕರ್ನಾಟಕದ ಆಡಳಿತ ಭಾಷೆಯಾಗಬೇಕು ಎಂದು ಕನ್ನಡಿಗರನ್ನು ಎಚ್ಚರಿಸಿ ಹೋರಾಟಕ್ಕೆ ಅಣಿಗೊಳಿಸಿ ಜನತಾ ಪ್ರಜ್ಞೆಯನ್ನು ಜಾಗೃತಿಗೊಳಿಸಿದ ಕೀರ್ತಿ ದೇ. ಜವರೇಗೌಡ ಅವರದು.

ಕನ್ನಡ ಭಾಷೆಯನ್ನು ಬೆಳೆಸುವ ನಿಟ್ಟಿನಲ್ಲಿ ಹಾಕಿಕೊಂಡ ಕಾರ್ಯಕ್ರಮಗಳು. ಅದರ ಫಲಗಳನ್ನು ಗಮನಿಸಿದಾಗ ದೇ. ಜವರೇಗೌಡ ಒಬ್ಬ ಮಹಾನ್ ಕನ್ನಡದ ಶಕ್ತಿಯಾಗಿ ಜನಿಸಿದರೇನೋ ಎಂದೆನಿಸುತ್ತದೆ. ಇವರು ಕಾಣದ ದೈವವನ್ನು ನಂಬದೆ ಕಷ್ಟಗಳು ಸುತ್ತುವರಿದಿದ್ದರೂ, ನಿಂದೆಗಳು ಬಂದರೂ, ಧೈರ್ಯದಿಂದ ಕನ್ನಡಕ್ಕಾಗಿ ಪುರುಷ ಪ್ರಯತ್ನವನ್ನು ಮಾಡಿ ಮುನ್ನುಗ್ಗಿದರು. ಕನ್ನಡದ ವಿಷಯದಲ್ಲಿ ಅವರು ಕಂಡ ಕಾಣ್ಕೆಗಳನ್ನು ನನಸಾಗಿಸುವಲ್ಲಿ ಅಹರ್ನಿಶಿ ದುಡಿದಿದ್ದಾರೆ. ದೇ. ಜವರೇಗೌಡ ಅವರ ಬದುಕು ಹೋರಾಟದ ಬದುಕೇ ಆದ್ದರಿಂದ ತಮ್ಮ ಅಧಿಕಾರಾವಧಿಯಲ್ಲಂತೂ ಹೋರಾಟವನ್ನೇ ನಡೆಸಿ ಕನ್ನಡಕ್ಕೊಂದು ಸ್ಥಾನಮಾನವನ್ನು ಕಲ್ಪಿಸಿಕೊಟ್ಟರು. ಅಂದು ಉಪವಾಸ ಮಾಡದೇ ಇದ್ದರೆ ಇಂದು ಕೆ.ಎ.ಎಸ್. ಪರೀಕ್ಷೆಗಳನ್ನು, ಕನ್ನಡ ಮಾಧ್ಯಮದಲ್ಲಿ ಬರೆಯಲು

[illegible]

ಬರುತ್ತಿರಲಿಲ್ಲವೆಂದೇ ಹೇಳಬಹುದು. ಅಂದು ಅವರು ಬುಲ್ಡೋಜರ್‌ನಂತೆ ಮುನ್ನುಗ್ಗಿದರಿಂದ ಇಂದು ಕನ್ನಡದ ಸ್ಥಾನ ವ್ಯಾಪಕವೂ, ಸರ್ವಾಂಗೀಣವೂ ಆದ ಬೆಳವಣಿಗೆಯನ್ನು ಕಂಡಿದೆ. ಕೆಲವೊಂದು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಯೋಜನೆಗಳ್ನು ಮೌನವಾಗಿಯೇ ಜಾರಿಗೆ ತಂದು "ಮೌನ ಕ್ರಾಂತಿಯನ್ನೇ" ಉಂಟು ಮಾಡಿದವರು ಇವರು.

ಜ್ಞಾನ ಕೇವಲ ಕೆಲವರ ಸ್ವತ್ತಾಗಬಾರದು, ಅದು ನಾಡಿನ ಕಡುಬಡವರ ಗುಡಿಸಲುಗಳಿಗೂ ಪ್ರವೇಶಿಸಬೇಕು. ಅಲ್ಲಿಯ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬುದು ಇವರ ಮಹದಾಸೆಯಾಗಿತ್ತು. ಅದಕ್ಕೊಂದು ಶಾಶ್ವತವಾದ ಯೋಜನೆಗಳನ್ನು ರೂಪಿಸಿ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿ ಜನಸಾಮಾನ್ಯರ ಹತ್ತಿರಕ್ಕೆ ಕೊಂಡೊಯ್ದರು. ಒಟ್ಟಿನಲ್ಲಿ ಕನ್ನಡ ಭಾಷೆಗಾಗಿ ಬಿತ್ತಿ ಬೆಳೆಯ ಬೇಕಾದುದನ್ನು ಬೆಳೆದು, ಕನ್ನಡಿಗರ ಕೃತಜ್ಞತೆಗೆ ದೇ. ಜವರೇಗೌಡ ಪಾತ್ರರಾಗಿದ್ದಾರೆ. ಕನ್ನಡವನ್ನು ಸಮರ್ಥವಾಗಿ ಬೆಳೆಸಿ, ಬೆಳೆಸುತ್ತಲೇ ಅಪಾರ ಸಾಹಿತ್ಯ ಕೃಷಿಯನ್ನು ಮಾಡಿದರು. ದೇ. ಜವರೇಗೌಡ ಅಂದರೆ ಕನ್ನಡ, ಕನ್ನಡವೆಂದರೆ ದೇ. ಜವರೇಗೌಡ ಅನ್ನುವಷ್ಟರ ಮಟ್ಟಿಗೆ ಇವರು ಮಾಡಿದ ಕನ್ನಡದ ಕೆಲಸಗಳು ನಮಗೆಲ್ಲರಿಗೂ ದಾರಿದೀಪವಾಗಿದೆ.

ದೇ. ಜವರೇಗೌಡ ಅವರ ಸಾಹಿತ್ಯಕ ಬದುಕಿನ ಚುತರ್ಮುಖಗಳೆಂದರೆ ಜೀವನಚರಿತ್ರೆ, ಅನುವಾದ, ತೌಲನಿಕ ಅಧ್ಯಯನ ಮತ್ತು ಆತ್ಮಕಥಾ ಲೇಖನ ಈ ನಾಲ್ಕು ಕ್ಷೇತ್ರಗಳಲ್ಲಿ ದೇ. ಜವರೇಗೌಡ ಮಾಡಿರುವಷ್ಟು ಸಾಧನೆ ಕನ್ನಡದ ಕ್ಷೇತ್ರಗಳು ಇನ್ನೊಬ್ಬ ಲೇಖಕ ಮಾಡಿರುವ ಉದಾಹರಣೆ ನಮ್ಮೆದುರಿಗಿಲ್ಲ. ಈ ನಾಲ್ಕು ಕ್ಷೇತ್ರಗಳು ದೇ. ಜವರೇಗೌಡ ಅವರಿಗೆ ಬಲು ಪ್ರಿಯವಾದವು. ಅಪ್ಯಾಯಮಾನವಾದವುಗಳು. ಹೀಗಾಗಿಯೇ ಈ ಕ್ಷೇತ್ರಗಳಲ್ಲಿ ಮಾದರಿಯಾಗುವಂಥ ಕೆಲಸಗಳನ್ನು ಮಾಡಿ ಕನ್ನಡ ಸಾರಸ್ವತ ಲೋಕದ ಅಚ್ಚರಿಯಾಗಿದ್ದಾರೆ. ದೇ. ಜವರೇಗೌಡ ಆರಿಸಿಕೊಂಡ ಈ ನಾಲ್ಕು ಕ್ಷೇತ್ರಗಳು ಸವಾಲೆಸೆಯುವಂಥ, ಪಾಂಡಿತ್ಯವನ್ನು ಬಯಸುವಂಥ ಭಾಷೆಗಳ ಮೇಲಿನ ಪ್ರಭುತ್ವ ಮತ್ತು ಬಳಲದ ಪರಿಶ್ರಮವನ್ನು ಬೇಡುವಂಥವು. ಈ ಎಲ್ಲವನ್ನು

ಒಟ್ಟಿಗೆ ಮೈಗೂಡಿಕೊಂಡು ದೇ. ಜವರೇಗೌಡ ತಮ್ಮ ಬದುಕಿನ ಅವಧಿಯಲ್ಲಿ ಮಾಡಿರುವ ಸಾಧನೆ ಮತ್ತು ಅವರು ಏರಿರುವ ಎತ್ತರ ಒಂದು ತಪಸ್ವಿಯ ಸಾಧನೆ ಆಗಿದೆ.

"ಇಡೀ ಏಷ್ಯಾದಲ್ಲಿ ಪತ್ರಿಕೋದ್ಯಮದ ಸ್ನಾತಕೋತ್ತರ ಕೇಂದ್ರವನ್ನು ಮೊಟ್ಟಮೊದಲಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೆರೆದದ್ದು ದೇ. ಜವರೇಗೌಡ ಅವರು. ಯುಜಿಸಿಯವರು ಅದಕ್ಕೆ ಅವಕಾಶವನ್ನು ಕೊಟ್ಟಿರಲಿಲ್ಲ. ಆಗ ಶ್ರೀ ಕೃಷ್ಣಮೂರ್ತಿ ನಾಡಿಗರೂ ಬಹಳ ಸಹಾಯ ಮಾಡಿದರು. ೧೯೭೦ರಲ್ಲಿ ಹೆಗಡೆಯವರು, ಶಂಕರೇಗೌಡರು ಆ ಕೆಲಸವನ್ನು ಆಗ ಮಾಡಿಸಿದರು" ಎಂದು ನೆನಪಿಸಿಕೊಳ್ಳುತ್ತಾರೆ ದೇ. ಜವರೇಗೌಡ.

ಸಂಶೋಧನೆ ಮತ್ತು ವಿಮರ್ಶೆಯ ಕ್ಷೇತ್ರಗಳಿಗೆ ದೇ. ಜವರೇಗೌಡ ಅವರು ನೀಡಿರುವ ಕೊಡುಗೆಯಂತೂ ಅಪಾರವಾದುದು. ಅವುಗಳು ವೈವಿಧ್ಯಪೂರ್ಣವೂ, ಮೌಲಿಕವೂ, ಮಹತ್ವಪೂರ್ಣವೂ ಆಗಿ ಮೂಡಿಬಂದಿದೆ. ಅಲ್ಲಿ ದೇ.ಜವರೇಗೌಡ ಅವರ ವ್ಯಾಪಕವಾದ ಅಧ್ಯಯನ ಆಳವಾದ ವಿಮರ್ಶನ ದೃಷ್ಟಿ, ಮೌಲಿಕ ಚಿಂತನೆಗಳು ನಮ್ಮ ಗಮನ ಸೆಳೆಯುವಂತಿದೆ. 'ಗದ್ಯಶೈಲಿ' ಗ್ರಂಥವಂತೂ ಕನ್ನಡ ಗದ್ಯ ಪಡೆದು ಕೊಂಡಿರುವ ವಿವಿಧ ಆಯಾಮಗಳನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದೆ. 'ಸ್ಥಳನಾಮ ವ್ಯಾಸಂಗ' ವಂತೂ ಆಕ್ಷೇತ್ರದಲ್ಲಿ ಸಂಶೋಧನೆ ಮಾಡುವವರಿಗೆ ಕೈಪಿಡಿಯಂತಿದೆ, ಮಾರ್ಗದರ್ಶಿಯೂ ಆಗಿದೆ.

ಪಂಡಿತ ವರ್ಗದ ಆಲಕ್ಷ್ಯ ಹಾಗೂ ತಿರಸ್ಕಾರದಿಂದ ಕಡೆಗಣಿಸಲ್ಪಟ್ಟಿದ್ದ ಕನ್ನಡ ಜಾನಪದಕ್ಕೆ ಅಂತಾರಾಷ್ಟ್ರೀಯ ಮಾನ್ಯತೆಯನ್ನು ದೊರಕಿಸಿಕೊಟ್ಟವರು ದೇ. ಜವರೇಗೌಡ. ಸಾಹಿತ್ಯ ಪ್ರಕಾರಗಳಲ್ಲಿ ದೇ. ಜವರೇಗೌಡ ಅವರಿಗೆ ಪ್ರಮುಖವಾದುದು ಅನುವಾದ. ಅನುವಾದ ಎಂದರೆ ಮುಟ್ಟಲೂ ಹೆದರುವಂಥ ಬೃಹತ್ತಾದ, ಮಹತ್ತರವಾದ ಗ್ರಂಥಗಳು ದೇ.ಜವರೇಗೌಡ ಅವರಿಂದ ಕನ್ನಡಕ್ಕೆ ಲಭ್ಯವಾಗಿದೆ. ಇಡೀ ರಷ್ಯನ್ ಸಮಾಜವನ್ನು ದೇ. ಜವರೇಗೌಡ ಸಮರ್ಥವಾಗಿ ಕನ್ನಡಕ್ಕೆ

ತಂದಿದ್ದಾರೆ. ಟಾಲ್‌ಸ್ಟಾಯ್ ಅವರ 'ಪುನರುತ್ಥಾನ', 'ಯುದ್ಧ ಮತ್ತು ಶಾಂತಿ', 'ಅನ್ನಾಕರೆನಿನಾ' ಅಂಥ ಮಹತ್ವದ ಕೃತಿಗಳನ್ನು ದೇ. ಜವರೇಗೌಡ ಸಮರ್ಥವಾಗಿಯೇ ಕನ್ನಡಕ್ಕೆ ಅನುವಾದಿಸಿದ್ದಾರೆ. ಭಾಷಾಂತರ ಅಧ್ಯಯನ ವಿಷ್ಯವು ಕರ್ನಾಟಕದಲ್ಲಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಅಧ್ಯಯನ ವಿಷಯವಾಗಲು ದೇ. ಜವರೇಗೌಡ ಕಾರಣರೆಂಬುದನ್ನು ನಾವು ಮರೆಯುವಂತಿಲ್ಲ.

ಶಿಕ್ಷಣದ ಮೌಲ್ಯ ಉತ್ತಮಗೊಳ್ಳಬೇಕು, ವಿಶ್ವವಿದ್ಯಾನಿಲಯಗಳು ಗುಣಾತ್ಮಕ ಬೆಲೆ ಕಳೆದುಕೊಳ್ಳುತ್ತಿವೆ. ಕೇವಲ ಸರ್ಟಿಫಿಕೇಟ್ ಪ್ರಧಾನ ಶಿಕ್ಷಣವಾಗುತ್ತಿದೆ. ಆದರೆ ಅದು ಬದುಕು ಮತ್ತು ಮಾನವೀಯತೆ ಪ್ರಧಾನ ಶಿಕ್ಷಣವಾಗಬೇಕು ಎನ್ನುತ್ತಾರೆ ದೇ.ಜವರೇಗೌಡ. ಕನ್ನಡ ಸರ್ವತೋಮುಖ ಬೆಳವಣಿಗೆ ಆಗಬೇಕಾದರೆ ಕನ್ನಡ ಸರ್ವ ಮಾಧ್ಯಮ ಆಗಬೇಕು, ಶಿಕ್ಷಣ ಮಾಧ್ಯಮ ಆಗಬೇಕು, ಆಡಳಿತ ಮಾಧ್ಯಮ ಆಗಬೇಕು. ಇವುಗಳು ಮುಖ್ಯವಾಗಿ ಆದರೆ ಇನ್ನು ಉಳಿದವು ತಾವಾಗಿಯೇ ಹಿಂಬಾಲಿಸುತ್ತವೆ. ಕರ್ನಾಟಕದ ಒಳಗಿರತಕ್ಕ ಎಲ್ಲಾ ಕಛೇರಿ ಶಾಲೆಗಳಿಗೂ ಈ ಮಾತು ಅನ್ವಯಿಸುತ್ತದೆ. ಕೇಂದ್ರ ಸರ್ಕಾರ ಆಗಬಹುದು, ಖಾಸಗಿ ಕಛೇರಿಗಳೂ ಆಗಬಹುದು ಎಲ್ಲಾ ಕಡೆಯೂ ಕನ್ನಡ ಮಾಧ್ಯಮವಿರಬೇಕು. ಬ್ಯಾಂಕ್‌ಗಳಲ್ಲಿ ಅಂಚೆ ಕಛೇರಿ ಯಾವುದಾದರೂ ಇರಲಿ ಅಪವಾದವಿಲ್ಲದೆ ಅಲ್ಲೆಲ್ಲ ಕನ್ನಡ ಮಾಧ್ಯಮ ಜಾರಿಗೆ ಬರಬೇಕು ಎಂಬುದು ದೇ. ಜವರೇಗೌಡ ಅವರ ಕನ್ನಡಪರ ಚಿಂತನೆಗಳಾಗಿವೆ.

ದೇ. ಜವರೇಗೌಡ ಅವರದು ಅತ್ಯಂತ ಪ್ರಖರವಾದ ವಿಚಾರಧಾರೆ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ ಚಿಂತನೆಗಳ ಹಾಗೂ ವೈಚಾರಿಕತೆ ಧಾರ್ಮಿಕತೆ, ಎಲ್ಲವೂ ಮನುಷ್ಯನ ಬದುಕನ್ನು ಮತ್ತು ಸಂಸ್ಕೃತಿಯನ್ನು ಹಸನುಗೊಳಿಸುವ ಕಡೆಗೆ ಹರಿದಿವೆ. ಅದರಲ್ಲೂ ಪ್ರಮುಖವಾಗಿ ಇವರ ಕನ್ನಡ ಭಾಷೆಗೆ ಸಂಬಂಧಿಸಿದ ಚಿಂತನೆಗಳು ಈ ನಾಡಿನ ಶ್ರೇಯೋಭಿವೃದ್ಧಿಗೆ ಮಾರ್ಗದರ್ಶಿಯಾಗಿವೆ. ಇವರ ಚಿಂತನೆ ಯೋಜನೆಗಳು ಸಾರ್ವಕಾಲಿಕವಾದವುಗಳಾಗಿವೆ. ಇವರ ವಿಚಾರಗಳು ಗಂಭೀರವೂ ವಿಚಾರ ಯೋಗ್ಯವೂ ಆಗಿವೆ.

ದೇ. ಜವರೇಗೌಡ ಅವರಿಗೆ ಈಗ ೯೦ರ ವಯೋವೃದ್ಧರು, ಜ್ಞಾನವೃದ್ಧರು. ಇವರ ಮನಸ್ಸು ಮಾಗಿದ ಫಲವಾಗಿದೆ. ದೃಷ್ಟಿಯಲ್ಲಿ ದ್ರಷ್ಟಾರನ ನೋಟವಿದೆ. ದೇ. ಜವರೇಗೌಡ ಎಷ್ಟು ಸರಳರಾಗಿದ್ದಾರೆಂದರೆ 'ಇವರು ಅವರಾ' ಎಂಬ ವಿಸ್ಮಯವುಂಟಾಗುತ್ತದೆ. ಒಂದು ದಟ್ಟಿ ಪಂಚೆ, ಮೇಲೊಂದು ಜುಬ್ಬಾ ತೊಟ್ಟು ಕುವೆಂಪು ಟ್ರಸ್ಟ್‌ನ ಪ್ರತಿಕಾರ್ಯದಲ್ಲೂ ಸಾಕ್ಷೀಭೂತರಾಗಿ ಮಳೆಯನ್ನದೆ, ಬಿಸಿಲೆನ್ನದೆ ನಿಂತು ಕೆಲಸ ಮಾಡುವ ಸಮರ್ಪಿತ ಭಾವವನ್ನು ನೋಡಿದಾಗಲೆಲ್ಲ ಹಾಗೂ ನೋಡುವವರಿಗೆಲ್ಲ ಅದ್ಭುತ ವಿಸ್ಮಯರಾಗಿ ಕಂಡಿದ್ದಾರೆ. ಕನ್ನಡದ ಬಗ್ಗೆ ಕಾಳಜಿವುಳ್ಳ ಅದರಲ್ಲೂ ತಮ್ಮ ಬದುಕಿನ ಅವಿನಾಭಾಗದಂತೆ ಕನ್ನಡದ ದೀಕ್ಷೆ ಸ್ವೀಕರಿಸಿ ಅರ್ಧಶತಮಾನಕ್ಕೂ ಮಿಕ್ಕ ವರ್ಷಗಳುದ್ದಕ್ಕೂ ದೇ. ಜವರೇಗೌಡ ಕನ್ನಡಕ್ಕಾಗಿ ಮಾಡಿಕೊಂಡು ಬಂದಿರುವ ಸೇವೆ ಕನ್ನಡನಾಡು ಸದಾ ಸ್ಮರಿಸಬೇಕಾದಂಥದ್ದಾಗಿದೆ.

ಅನುಬಂಧ

ಪ್ರೊ. ದೇ.ಜ.ಗೌ. ಅವರ ಜೀವನ ಸಂಗತಿಗಳು

ಹೆಸರು	:	ದೇ. ಜವರೇಗೌಡ (ದೇವೇಗೌಡ - ಜವರೇಗೌಡ)
ಕಾವ್ಯನಾಮ	:	ದೇಜಗೌ
ತಂದೆಯ ಹೆಸರು	:	ದೇವೇಗೌಡ
ತಾಯಿಯ ಹೆಸರು	:	ಚನ್ನಮ್ಮ
ಹುಟ್ಟಿದ ಸ್ಥಳ	:	ಚಕ್ಕರೆ, ಚನ್ನಪಟ್ಟಣ, ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕರ್ನಾಟಕ
ಹುಟ್ಟಿದ ದಿನಾಂಕ	:	೦೬.೦೭.೧೯೧೮
ವಿದ್ಯಾರ್ಹತೆ	:	ಎಂ.ಎ. ಕನ್ನಡ, ಡಿ.ಲಿಟ್ ಪದವಿ

ಅಲಂಕರಿಸಿದ ಹುದ್ದೆಗಳು

ಮೈಸೂರು ವಿ.ವಿ. ಕನ್ನಡ ಅಧ್ಯಾಪಕ	೧೯೪೬
ಕಾರ್ಯದರ್ಶಿ, ಮೈಸೂರು ವಿ.ವಿ. ಪ್ರಕಟಣೆಗಳು	೧೯೫೪
ಕನ್ನಡ ಅಸಿಸ್ಟೆಂಟ್ ಪ್ರೊಫೆಸರ್	೧೯೫೫
ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿ	೧೯೫೭
ಪ್ರಿನ್ಸಿಪಾಲ್, ಸಹ್ಯಾದ್ರಿ, ಕಾಲೇಜು, ಶಿವಮೊಗ್ಗ	೧೯೬೦
ಕನ್ನಡ ವಿಭಾಗದ ರೀಡರ್ ಮತ್ತು ವಾರ್ಡನ್	೧೯೬೦
ವಿ.ವಿ. ಕಲಾ ವಿಭಾಗದ ಡೀನ್	೧೯೬೨
ಕನ್ನಡ ಪ್ರಾಧ್ಯಾಪಕರು, ಇಲಾಖೆ ಮುಖ್ಯಸ್ಥರು	೧೯೬೫
ಕನ್ನಡ ಅಧ್ಯಯನ ಸಂಸ್ಥೆ ಪ್ರಥಮ ನಿರ್ದೇಶಕರು	೧೯೬೬

ಉಪಾಧ್ಯಕ್ಷರು, ಕನ್ನಡ ನಿಘಂಟು	೧೯೬೮
ಮೈಸೂರು ವಿ.ವಿ. ಸಿಂಡಿಕೇಟ್ ಸದಸ್ಯರು	೧೯೬೮
ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು	೧೯೬೮-೭೨
ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ	೧೯೬೯
೪೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು	೧೯೭೦
ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ಗೌರವ ನಿರ್ದೇಶಕರು	೧೯೭೦
ಸುರತ್ಕಲ್ ಇಂಜಿನಿಯರಿಂಗ್ ಕಾಲೇಜು, ಗೌರ್ನಿಂಗ್ ಕೌನ್ಸಿಲ್ ಅಧ್ಯಕ್ಷರು	೧೯೭೦-೭೫
Member, NCC Evaluation Committee	೧೯೭೨
ಕರ್ನಾಟಕ ಪ್ರಿ-ಯೂನಿವರ್ಸಿಟಿ ಬೋರ್ಡಿನ ಅಧ್ಯಕ್ಷರು	೧೯೭೨-೧೯೭೫
Chairman, Assesement Committee for the NCE BEd Summer School-cum-Correspondence Course	1974
ಅಧ್ಯಕ್ಷ, ಮೈಸೂರು ವಿ.ವಿ. ಸಹಕಾರ ಸಂಘ	೧೯೮೮
ಅಧ್ಯಕ್ಷ, ಕೆ.ವಿ. ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ	೧೯೮೯
ಸದಸ್ಯ, ಪ್ರಾದೇಶಿಕ ಫಿಲ್ಮ್ ಪ್ರಮಾಣೀಕರಣ ಸಮಿತಿ	೧೯೯೦-೯೧
ಸದಸ್ಯ, ಅಂಬೇಡ್ಕರ್ ಸಾಹಿತ್ಯ ಭಾಷಾಂತರ ಸಮಿತಿ	೧೯೯೦-೯೧
ಸಂಸ್ಥಾಪಕ ಅಧ್ಯಕ್ಷ-ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ	೧೯೯೨
ಅಧ್ಯಕ್ಷ, ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು	೧೯೯೩
ಅಧ್ಯಕ್ಷ, ಇಂಡೋ-ಡ್ಯಾನಿಶ್ ಸಂಸ್ಕೃತಿ ಸಮಿತಿ	೧೯೯೩
ಉಪಾಧ್ಯಕ್ಷ-ಫೋರಂ ಫಾರ್ ಡೆಮಾಕ್ರಸಿ ಅಂಡ್ ಕಮ್ಯುನಲ್ ಎಮಿಟಿ ಕರ್ನಾಟಕ ಬ್ರಾಂಚ್	೧೯೯೪

ಅಧ್ಯಕ್ಷ-ಫೋರಂ ಫಾರ್ ಡೆಮಾಕ್ರೆಸಿ ಅಂಡ್ ಕಮ್ಯುನಲ್
ಎಮಿಟಿ ಕರ್ನಾಟಕ ಬ್ರಾಂಚ್, ಮೈಸೂರು ಜಿಲ್ಲೆ ೧೯೯೪

ಬಂದಿರುವ ಪ್ರಶಸ್ತಿ ಗೌರವಗಳು

ಸೋವಿಯತ್ ಲ್ಯಾಂಡ್ ನೆಹ್ರೂ ಪ್ರಶಸ್ತಿ

ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ರಾಜ್ಯೋತ್ಸವ ಪ್ರಶಸ್ತಿ

ತಿರುವಾಂಕೂರಿನ ದ್ರಾವಿಡ ಭಾಷಾ ವಿಜ್ಞಾನ ಸಂಸ್ಥೆಯ ವತಿಯಿಂದ
ಸೀನಿಯರ್ ಫೆಲೋ ಗೌರವ

ಕರ್ನಾಟಕ ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್

ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್

ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜ್ಯುಕೇಷನ್‌ಯಿಂದ ವಿಶೇಷ ಶೈಕ್ಷಣಿಕ ಸೇವೆಗಾಗಿ
ವಿಶೇಷ ಗೌರವ

ಪಂಪಪ್ರಶಸ್ತಿ, ನಾಡೋಜ ಗೌರವ, ಚಿದಾನಂದ ಪ್ರಶಸ್ತಿ

ಜೀಶಂಪ ಜಾನಪದ ಪ್ರಶಸ್ತಿ, ಲಕ್ಕೇಗೌಡ ಶೈಕ್ಷಣಿಕ ಪ್ರಶಸ್ತಿ

ಬಸವಶ್ರೀ ಪ್ರಶಸ್ತಿ, ಅಲ್ಲಮ ಶ್ರೀ ಪ್ರಶಸ್ತಿ, ಅನಕೃ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ,
ರಾಷ್ಟ್ರಕವಿ ಕುವೆಂಪು ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಇತ್ಯಾದಿ

ಸ್ಥಾಪಿಸಿರುವ ಸಂಸ್ಥೆಗಳು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಶ್ರೀ ಕುವೆಂಪು ವಿದ್ಯಾಪರಿಷತ್ತು

ಭಾರತೀಯ ಸ್ಥಳನಾಮ ಸಂಸ್ಥೆ

ಭಾಷಾಂತರ ಪರಿಷತ್ತು

ಕನ್ನಡ ಅಧ್ಯಯನ ಸಂಸ್ಥೆ

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ

ಶ್ರೀ ಕುವೆಂಪು ವಿದ್ಯಾಪರಿಷತ್ತು

ಹಿರಿಯ ನಾಗರಿಕ ಸಭಾ

ಕನ್ನಡ ಅಧ್ಯಾಪಕ ಪರಿಷತ್ತು

ಕೆ.ವಿ.ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ

ಪ್ರವಾಸ ಮಾಡಿರುವ ದೇಶಗಳು

ಅಮೇರಿಕಾ, ಆಫ್ರಿಕಾ, ಆಸ್ಟ್ರಿಯಾ, ಜಪಾನ್, ಜರ್ಮನಿ, ಸ್ವಿಟ್ಜರ್ಲೆಂಡ್, ಇಟಲಿ, ಇಸ್ರೇಲ್, ಐರ್ಲೆಂಡ್, ಕೀನ್ಯಾ, ಗ್ರೇಟ್‌ಬ್ರಿಟನ್, ಘಾನಾ, ನೈಜೀರಿಯಾ, ಫ್ರಾನ್ಸ್, ಶ್ರೀಲಂಕಾ, ಸಿಂಗಪುರ, ಕೆನಡಾ.

ಅಭಿನಂದನ ಗ್ರಂಥಗಳ ಸಮರ್ಪಣೆ

ಅಂತಃಕರಣ, ದೇಜಗೌ ವ್ಯಕ್ತಿತ್ವ ಮತ್ತು ಸಾಹಿತ್ಯ, ರಸಷಷ್ಟಿ, ಎಪ್ಪತ್ತರ ಹೊಸ್ತಿಲಲ್ಲಿ, ಅಮೃತ ವರ್ಷ, ಅಪೂರ್ವ, ಪುಸ್ತಕ ಪ್ರಪಂಚ (ವಿಶೇಷ ಸಂಚಿಕೆ)

ಪಿ.ಹೆಚ್.ಡಿ. ಮಾರ್ಗದರ್ಶಕರಾಗಿ 7 ಮಂದಿ ಪಿ.ಹೆಚ್.ಡಿ. ಪದವಿ ಪಡೆದಿದ್ದಾರೆ

1. ಡಾ. ಹೆಚ್.ಜೆ. ಲಕ್ಕಪ್ಪಗೌಡ
2. ಡಾ. ವಿ.ಎಸ್. ವೇಣುಗೋಪಾಲರಾವ್
3. ಡಾ. ಜೀ.ಶಂ.ಪರಮಶಿವಯ್ಯ
4. ಡಾ. ಬಿ.ನಂ. ಚಂದ್ರಯ್ಯ
5. ಡಾ. ಡಿ.ಕೆ. ರಾಜೇಂದ್ರ
6. ಡಾ. ಟಿ.ಎನ್.ಶಂಕರನಾರಾಯಣ
7. ಡಾ. ಎ.ಆರ್. ಮಂಜುನಾಥ್

ದೇಜಗೌ ಅವರನ್ನು ಕುರಿತು ರಚಿತವಾದ ಕೃತಿಗಳು

(ಜೀವನ ಚರಿತ್ರೆ, ಮಾದರಿ ಕೃತಿಗಳು)

ಕನ್ನಡ ಕಣ್ಮಣಿ, ಕನ್ನಡ ಸೇನಾನಿ, ಕರ್ಮಯೋಗಿ, ಕುಲಪತಿಯ ಸಾಧನೆಗಳು, ಗುಡಸಲಿನಿಂದ ಗಂಗೋತ್ರಿಗೆ, ದೇಜಗೌ-75 ಸಂದರ್ಶನ

ಜೀವನದ ಮುಖ್ಯ ಘಟನೆಗಳು

ಬಿ.ಎ. ಆನರ್ಸ್ ಪದವಿ	೧೯೪೧
ಸ್ವಾತಂತ್ರ್ಯ ಹೋರಾಟಗಾರರಾಗಿ ಭಾಗವಹಿಸಿದ್ದು	೧೯೪೧-೪೨
ಎಂ.ಎ. ಪದವಿ, ವಿವಾಹ, ಸೆಕ್ರೆಟರಿಯೇಟ್‌ನಲ್ಲಿ ಗುಮಾಸ್ತ	೧೯೪೩
ಮೈಸೂರು ವಿ.ವಿ. ಯಲ್ಲಿ ಕನ್ನಡ ಅಧ್ಯಾಪಕ	೧೯೪೬
ಮೊದಲ ಕೃತಿ 'ನೆನಪು ಕಹಿಯಲ್ಲ' (ಅನುವಾದ)	೧೯೪೯
ಕಾರ್ಯದರ್ಶಿ, ಮೈಸೂರು ವಿ.ವಿ. ಪ್ರಕಟಣೆಗಳು	೧೯೫೪
ಕನ್ನಡ ಅಸಿಸ್ಟೆಂಟ್ ಪ್ರೊಫೆಸರ್	೧೯೫೫
ವಿ.ವಿ. ಪರೀಕ್ಷಾಧಿಕಾರಿ ಮತ್ತು ಪ್ರಿಂಟಿಂಗ್ ಪ್ರೆಸ್‌ನ ಕಾರ್ಯನಿರ್ವಾಹಕ ಅಧಿಕಾರಿ	೧೯೫೮
ಪ್ರಿನ್ಸಿಪಾಲ್, ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜು	೧೯೬೦
ಕನ್ನಡ ವಿಭಾಗದ ರೀಡರ್, ವಾರ್ಡನ್, ಪಿ.ಜಿ.ಹಾಸ್ಟೆಲ್	೧೯೬೦
ಕನ್ನಡ ಪ್ರಾಧ್ಯಾಪಕರು, ಇಲಾಖೆಯ ಮುಖ್ಯಸ್ಥರು	೧೯೬೨
೪೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯ ಉದ್ಘಾಟನೆ	೧೯೬೩
ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಸ್ಥಾಪನಾ ಪೂರ್ವ ವರದಿ	
ವಿ.ವಿ. ಕಲಾ ವಿಭಾಗ ಡೀನ್; 'ಪುನರುತ್ಥಾನ' ಪ್ರಕಟಣೆ	೧೯೬೫

ಕ. ಅ. ಸಂಸ್ಥೆ ಪ್ರಾರಂಭ, ಪ್ರಥಮ ನಿರ್ದೇಶಕರು	೧೯೬೬
ಸೋವಿಯತ್ ಲ್ಯಾಂಡ್ ನೆಹ್ರೂ ಪ್ರಶಸ್ತಿ	೧೯೬೭
೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಗೋಷ್ಠಿ ಅಧ್ಯಕ್ಷತೆ	೧೯೬೭
ಜ್ಞಾನ ಗಂಗೋತ್ರಿ, ಸಂಪಾದಕ ಸಮಿತಿ ಅಧ್ಯಕ್ಷರು	೧೯೬೮
ಉಪಾಧ್ಯಕ್ಷರು, ಕನ್ನಡ ನಿಘಂಟು	೧೯೬೮
ಮೈಸೂರು ವಿ.ವಿ. ಸಿಂಡಿಕೇಟ್ ಸದಸ್ಯರು, ಪ್ರಧಾನ ಸಂಪಾಕರು ಕನ್ನಡ ವಿಶ್ವಕೋಶ, ಪ್ರಬುದ್ಧ ಕರ್ನಾಟಕ ಸಂಪಾದಕ ಮತ್ತು ಪ್ರಧಾನ ಸಂಪಾದಕ	೧೯೬೮
ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು	೧೯೬೮-೭೨
ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ	೧೯೬೯
೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು	೧೯೭೦
ಸುರತ್ಕಲ್ ಎಂಜಿನಿಯರಿಂಗ್ ಕಾಲೇಜು ಗವರ್ನಿಂಗ್ ಕೌನ್ಸಿಲ್ ಅಧ್ಯಕ್ಷರು	೧೯೭೦-೧೯೭೫
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮತ್ತು ಪರಿಷತ್ತಿನ ಸಂಸ್ಥಾಪಕರು ಹಾಗೂ ಗೌರವ ನಿರ್ದೇಶಕರು	೧೯೭೨
ಕರ್ನಾಟಕ ಪ್ರಿ-ಯೂನಿವರ್ಸಿಟಿ ಬೋರ್ಡಿನ ಅಧ್ಯಕ್ಷರು	೧೯೭೨-೧೯೭೫
ಅಂತಃಕರಣ ಅಭಿನಂದನ ಗ್ರಂಥ ಸಮರ್ಪಣೆ	೧೯೭೨
ಕುರುಕ್ಷೇತ್ರದಲ್ಲಿ ನಡೆದ ಅಖಿಲ ಭಾರತ ಪ್ರಥಮ ರಾಷ್ಟ್ರೀಯ ಸಾಕ್ಷರತಾ ಸಮ್ಮೇಳನದ ಉದ್ಘಾಟನೆ	೧೯೭೫
ಕುಲಪತಿ ಸ್ಥಾನದಿಂದ ಪ್ರಾಧ್ಯಾಪಕರಾಗಿ ಮರಳಿದ್ದು	೧೯೭೫
ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ	೧೯೭೫

ಧಾರವಾಡದಲ್ಲಿ ಜರುಗಿದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ	೧೯೭೬
ಪ್ರಧಾನ ಸಂಪಾದಕರು, ಪುಸ್ತಕ ಪ್ರಪಂಚ	೧೯೭೭ ರಿಂದ
ಪ್ರಾಧ್ಯಾಪಕ ಸ್ಥಾನದಿಂದ ನಿವೃತ್ತಿ	೧೯೭೭
'ಭಾರತೀಯ ಸ್ಥಳನಾಮಗಳು' ಸಂಸ್ಥೆಯ ಸ್ಥಾಪನೆ	೧೯೭೭
ಸದಸ್ಯರು, ಬಸವ ಸಮಿತಿ ವರ್ಕಿಂಗ್ ಕಮಿಟಿ	೧೯೭೮(ಪ್ರಾರಂಭದಿಂದ)
ತಿರುವಾಂಕೂರಿನ ದ್ರಾವಿಡ ಭಾಷಾ ವಿಜ್ಞಾನ ಸಂಸ್ಥೆಯ ವತಿಯಿಂದ ಸೀನಿಯರ್ ಫೆಲೋ ಗೌರವ	೧೯೭೯
ಬೀದರ್‌ನಲ್ಲಿ ೬೧ನೇ ವರ್ಷದ ಸನ್ಮಾನ	೧೯೭೯
'ರಸಷಷ್ಟಿ' ಅಭಿನಂದನ ಗ್ರಂಥ ಸಮರ್ಪಣೆ	೧೯೮೦
ಸದಸ್ಯರು, ಬಸವತತ್ವ ಪ್ರಚಾರ ಟ್ರಸ್ಟ್	೧೯೮೩
ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ	೧೯೮೫-೮೫
ರಾಜ್ಯೋತ್ಸವ ಪ್ರಶಸ್ತಿ	೧೯೮೫
'ದೇಜಗೌ ಎಪ್ಪತ್ತರ ಹೊಸ್ತಿಲಲ್ಲಿ' ಅಭಿನಂದನ ಗ್ರಂಥ ಸಮರ್ಪಣೆ	೧೯೮೭
ಸದಸ್ಯ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ	೧೯೮೭-೮೮
ಅಧ್ಯಕ್ಷ, ಕೆ.ವಿ. ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ	೧೯೮೯
ಅಧ್ಯಕ್ಷ, ಮುಳಿಯ ತಮ್ಮಪ್ಪಯ್ಯ ಶತಮಾನೋತ್ಸವ ಸಮಿತಿ (ಅನೇಕ ಅಭಿನಂದನ ಸಮಿತಿ ಅಧ್ಯಕ್ಷರಾಗಿದ್ದಾರೆ)	೧೯೮೮-೮೯
ಹಿರಿಯ ನಾಗರಿಕಾ ಸಭಾ ಸ್ಥಾಪನೆ	೧೯೮೯
ವಿಶ್ವಮಾನವ ಪ್ರಶಸ್ತಿ ಸ್ಥಾಪನೆ (ದೇಜಗೌ ಟ್ರಸ್ಟ್ ಆಶ್ರಯದಲ್ಲಿ)	೧೯೮೯-೯೦

ಪ್ರಧಾನ ಸಂಪಾದಕ ಕನಕ ಸಂಪುಟ	೧೯೮೯-೯೦
ಪ್ರಾದೇಶಿಕ ಫಿಲ್ಮ್ ಪ್ರಮಾಣೀಕರಣ ಸಮಿತಿ ಸದಸ್ಯ	೧೯೯೦-೯೧
ಅಂಬೇಡ್ಕರ್ ಸಾಹಿತ್ಯ ಭಾಷಾಂತರ ಮಂಡಳಿ, ಪರಿಶೀಲನಾ ಸಮಿತಿ ಸದಸ್ಯ	೧೯೯೦-೯೧
ಸಾವಿತ್ರಮ್ಮ-ದೇಜಗೌ ಮಹಿಳಾ ಪುರಸ್ಕಾರ ನಿಧಿ	೧೯೯೦
ಸಂಸ್ಥಾಪಕ ಅಧ್ಯಕ್ಷ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ	೧೯೯೨
ಅಧ್ಯಕ್ಷ, ಇಂಡೊ-ಡ್ಯಾನಿಸ್, ಸಂಸ್ಕೃತಿ ಸಂಘ	೧೯೯೩
'ಅಮೃತ ವರ್ಷ' ಅಭಿನಂದನ ಗ್ರಂಥ ಸಮರ್ಪಣೆ	೧೯೯೪
ಅಧ್ಯಕ್ಷ, ದಕ್ಷಿಣ ಭಾರತೀಯ ಜಾನಪದ ಸಂಸ್ಥೆ(ಫೊಸಿಲ್ಸ್)	೧೯೯೫-೯೬
ಅಧ್ಯಕ್ಷ, ದ್ರಾವಿಡ ಭಾಷಾ ವಿಜ್ಞಾನ ಸಮ್ಮೇಳನ	೧೯೯೬-೯೭
ಸಲಹಾ ಮಂಡಳಿಯ ಸದಸ್ಯ, ದ್ರಾವಿಡ ವಿಶ್ವವಿದ್ಯಾನಿಲಯ, ಕುಪ್ಪಂ	೧೯೯೮

ದೇಜಗೌ ಕುಲಪತಿಗಳಾದಾಗ ೨೪ ವಿಭಾಗಗಳಿದ್ದವು
ಹುದ್ದೆ ಬಿಡುವಾಗ ೪೮ ವಿಭಾಗಗಳಾಗಿದ್ದವು

ಅಂಚೆ ಮತ್ತು ತೆರಪಿನ ಶಿಕ್ಷಣಕ್ಕೆ ಹೊಸಕಾಯಕಲ್ಪ,
ಅಲ್ಲಿ ಸ್ನಾತಕೋತ್ತರ ತರಗತಿಗಳ ಪ್ರಾರಂಭ
ದೈಹಿಕ ಶಿಕ್ಷಣ ವಿದ್ಯಾಲಯ, ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ತರಗತಿಗಳ ಪ್ರಾರಂಭ, ಪತ್ರಿಕೋದ್ಯಮ (ಏಷ್ಯಾದಲ್ಲಿಯೇ ಮೊದಲು) ಗೃಹ ವಿಜ್ಞಾನ, ಕಾನೂನು ಶಾಸ್ತ್ರ, ಕ್ರಿಮಿನಾಲಜೆ, ರೂರಲ್ ಸ್ಟಡೀಸ್, ಸಂಗೀತ, ಗ್ರಂಥಾಲಯ ವಿಜ್ಞಾನ, ಆಯುರ್ವೇದ, ಸೌತ್ ಇಂಡಿಯನ್ ಸ್ಟಡೀಸ್, ಕೈಗಾರಿಕಾ ರಸಾಯನಶಾಸ್ತ್ರ, ಕೃಷಿ ಅರ್ಥಶಾಸ್ತ್ರ ಮೊದಲಾದವು

ರಚಿಸಿರುವ ಕೃತಿಗಳು

ಆತ್ಮಕಥೆ	:	ಹೋರಾಟದ ಬದುಕು ಭಾಗ -೧, ಭಾಗ -೨ ನೆನಪಿನ ಬುತ್ತಿ, ಕುಲಪತಿಯ ದಿನಚರಿ
ಪತ್ರ ಸಾಹಿತ್ಯ	:	ಕುಲಪತಿಯ ಪತ್ರಗಳು
ಭಾಷಣ ಸಾಹಿತ್ಯ	:	ಕುಲಪತಿಯ ಭಾಷಣಗಳು - ಒಟ್ಟು ಆರು ಭಾಗಗಳಲ್ಲಿ
ಪ್ರವಾಸ ಸಾಹಿತ್ಯ	:	ಆಫ್ರಿಕಾ ಯಾತ್ರೆ, ಪ್ರವಾಸಿಯ ದಿನಚರಿ, ಯೇಸು ವಿಭೀಷಣರ ನಾಡಿನಲ್ಲಿ, ವಿದೇಶದಲ್ಲಿ ನಾಲ್ಕು ವಾರ ವಿಸ್ಮಯಗಳ ನಾಡಿನಲ್ಲಿ, (ಅಮೇರಿಕಾದಲ್ಲಿ ಪ್ರವಾಸ, ಕಾದಂಬರಿ ಶೈಲಿಯಲ್ಲಿ) ಜಗತ್ತಿನ ನಡುನೆತ್ತಿಯ ಮೇಲೆ, ನಿಚ್ಚ ಹಸುರಿನ ನಾಡಿನಲ್ಲಿ, ಹಳದಿ ಕಲ್ಲಿನ ಉದ್ಯಾನ (ಮಕ್ಕಳಿಗಾಗಿ)
ಜಾನಪದ ಸಾಹಿತ್ಯ	:	ಜನಪದ ಗೀತಾಂಜಲಿ, ಜಾನಪದ ಅಧ್ಯಯನ, ಜಾನಪದ ವಾಹಿನಿ, ಜಾನಪದ ಸೌಂದರ್ಯ
ಜೀವನ ಚರಿತ್ರೆಗಳು	:	ಅಮೇರಿಕಾ ಗಾಂಧಿ, ಕರ್ನಾಟಕದ ರೂವಾರಿ, ಕ್ರಾಂತಿಕಾರಿ ಡಾ. ಅಂಬೇಡ್ಕರ್, ತೀನಂಶ್ರೀ, ದಾರಿದೀಪಗಳು, ನಿತ್ಯ ಸಚಿವ, ಬಸವ ಬೆಳಕು, ಬೂಕರ್ ಟಿ ವಾಷಿಂಗ್‌ಟನ್, ಮೋತಿಲಾಲ್ ನೆಹರು, ಯಾತ್ರಿಕರು, ರಾಷ್ಟ್ರಕವಿ ಕುವೆಂಪು, ಸಮಾಜವಾದಿ ಲೋಹಿಯಾ, ಲೋಕದ ಬೆಳಕು, ಲೋಕನಾಯಕ, ವ್ಯಾಕರಣದ ಮಲ್ಲಪ್ಪನವರು, ವಿಚಾರವಾದಿ ಪೆರಿಯಾರ್, ಸಾಹಿತಿಗಳ ಸಂಗದಲ್ಲಿ, ನಾರಾಯಣ ಗುರು, ದಕ್ಷಿಣೇಶ್ವರಕ್ಕೆ ನಮನ, ಶತಾಯುಷಿ ಎ.ಎನ್.ಮೂರ್ತಿ ರಾವ್, ನಾನು ಮೆಚ್ಚಿದವರು, ಶ್ರೀ ಬಸವೇಶ್ವರರು, ಸಿದ್ದಗಂಗೆಯ ಶಿವನಿಧಿ, ಕಲಾಕಂಠೀರವ ಕರಿಬಸವಯ್ಯ, ದೇವಮಾನ್ಯರು, 'ನೆನಪಿನಾಳದಲ್ಲಿ ನಿಂದವರು'.
ಮಕ್ಕಳ ಸಾಹಿತ್ಯ	:	ಆಲ್‌ಬರ್ಟ್ ಐನಸ್ಟೀನ್, ಋಷಿ ಕವಿ ರವೀಂದ್ರರು, ಕನ್ನಡ ನಾಡಿನ ಕಲಿ ಗೋಪಾಲಕೃಷ್ಣ ಗೋಖಲೆ, ನಮ್ಮ ನೆಹರು,

ಪಂಡಿತ ಮೋತಿಲಾಲ್ ನೆಹರು, ಮಕ್ಕಳ ಏಕಲವ್ಯ, ಮಕ್ಕಳ ಶೂದ್ರ ತಪಸ್ವಿ, ಮೇಡಂ ಕ್ಯೂರಿ, ವಿವೇಕಾನಂದರು, ಮಹರ್ಷಿಟಾಲ್‌ಸ್ಟಾಯ್.

ರಾಷ್ಟ್ರಕವಿ ಕುವೆಂಪು ಅವರನ್ನು ಕುರಿತು ಬರೆದಿರುವ ಕೃತಿಗಳು :

ಕುವೆಂಪು ಅವರ ಶಿಕ್ಷಣ ತತ್ವ ವಿಚಾರಗಳು, ಕುವೆಂಪು ದರ್ಶನ ಮತ್ತು ಸಂದೇಶ, ಕುವೆಂಪು ವಿಶ್ವಮಾನವ ಸಂದೇಶ, ಕುವೆಂಪು ಶೈಲಿ, ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು (ನಾಲ್ಕು ಭಾಗಗಳು) ಕುವೆಂಪು ಸಾಹಿತ್ಯದಲ್ಲಿ ಮಕ್ಕಳು, ಕುವೆಂಪು ಸಾಹಿತ್ಯದಲ್ಲಿ ರೈತ, ರಾಷ್ಟ್ರಕವಿ ಕುವೆಂಪು, ರಾಷ್ಟ್ರಕವಿ ಭಾಷಣಗಳು, ರಾಷ್ಟ್ರಕವಿ ಸಂದರ್ಶನ, ವಿಚಾರ ಕ್ರಾಂತಿಗೆ ಕುವೆಂಪು ಕರೆ, ಶ್ರೀ ಕುವೆಂಪು ಸೂಕ್ತಿಮಾಲೆ, ಶ್ರೀ ರಾಮಾಯಣದರ್ಶನಂ ವಚನ ಚಂದ್ರಿಕೆ, ಕವಿವಿಭೂತಿಗೆ ಕುವೆಂಪು.

ಸಂಶೋಧನೆ-ವಿಮರ್ಶೆ : ಇಣುಕು ನೋಟ, ಗದ್ಯಶೈಲಿ, ಗದುಗಿನ ಭಾರತ, ಒಂದು ಸಾಂಸ್ಕೃತಿಕ ಅಧ್ಯಯನ, ನೂರೆಂಟು ಪುಸ್ತಕಗಳು, ಬಸವೇಶ್ವರ-ಅಂಬೇಡ್ಕರ್, ಬಸವೇಶ್ವರ-ಕಾಲ್‌ಮಾರ್ಕ್ಸ್, ಮುನ್ನುಡಿಗಳು, ಮುನ್ನುಡಿ ತೋರಣ, ವಚನಗಳಲ್ಲಿ ವೈಚಾರಿಕತೆ, ವಚನಗಳಲ್ಲಿ ಸಮಾಜವಾದ, ವಿಶ್ವಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ, ಶರಣ ಪಥ, ಶ್ರೀ ಕುವೆಂಪು ಅವರ ದಾಂಪತ್ಯ ದರ್ಶನದ ನಾಲ್ಕು ಮಹಾ ಕವನಗಳು, ಷಡಕ್ಷರ ದೇವ, ಸರ್ವಜ್ಞ, ಸ್ಥಳನಾಮ ವ್ಯಾಸಂಗ, ಸಾಹಿತ್ಯ ಮಾರ್ಗ, ಸಾಹಿತ್ಯ ಯಾತ್ರೆ, ಸಾಹಿತಿಯ ಸಾಮಾಜಿಕ ಬದ್ಧತೆ, ಮುನ್ನುಡಿ ಕನ್ನಡಿ, ಮುನ್ನುಡಿ ಮಿನುಗು, ಜೀವನ ಚರಿತ್ರೆ ಮತ್ತು ಇತರ ಪ್ರಬಂಧಗಳು, ಮುಗಿದ ಮುನ್ನುಡಿ ಗಂಟು.

ಶಿಕ್ಷಣ ಸಾಹಿತ್ಯ : ಕೆಲವು ಶೈಕ್ಷಣಿಕ ವಿಚಾರಗಳು, ವಿದ್ಯಾಪೀಠಗಳು, ಮಂಡ್ಯ ಜಿಲ್ಲೆಯ ಶಿಕ್ಷಣ ಅಭಿವೃದ್ಧಿ ಸಮೀಕ್ಷೆ, ಪುಸ್ತಕ ಪ್ರಪಂಚ-ಪ್ರಧಾನ ಸಂಪಾದಕರು (ವಯಸ್ಕರ ಶಿಕ್ಷಣ)

ಪ್ರಬಂಧ - ಹರಟೆ : ತೆನೆ, ಕೆನೆ, ಬೆರಕೆ ಸೊಪ್ಪು

ಅಂಕಣ-ಸಂಪಾದಕೀಯ : ಅನುಭವ ಸಂಪದ, ಸಂಪಾದಕೀಯ ಸಂಕಲನ

ವಚನಗಳು ಚುಟುಕುಗಳು : ಗುರುದೇವರಡಿಗೆ, ದೇಜಗೌ ಚುಟುಕುಗಳು

ಕನ್ನಡ ನಾಡು-ನುಡಿಗಳಿಗೆ ಸಂಬಂಧಿಸಿದ ಕೃತಿಗಳು : ಕನ್ನಡಕ್ಕಾಗಿ ಕೈಯೆತ್ತು, ಕನ್ನಡಕ್ಕೆ ನಮನ, ಕನ್ನಡಿಗರೇ ಎಚ್ಚರಗೊಳ್ಳಿ

ಐತಿಹಾಸಿಕ ಕಾದಂಬರಿಗಳು : ಕಡುಗಲಿ ಕುಮಾರ ರಾಮ, ಬೆಂಗಳೂರು ಕೆಂಪೇಗೌಡ

ಸಾಮಾಜಿಕ : ನಗ್ನ ಚಿತ್ರಗಳು

ಅನುವಾದಗಳು : ಅಕ್ಬರ, ಗುರುನಾನಕ್, ಟಾಲ್‌ಸ್ಟಾಯ್ ಅವರ ಎರಡು ನಾಟಕಗಳು, ನೆನಪು ಕಹಿಯಲ್ಲ, ಪುನರುತ್ಥಾನ, ಭಾರತದ ಜಾನಪದ ಕಥೆಗಳು, ವಿಷವೃಕ್ಷ ನಾಟಕ, ಯುದ್ಧ ಮತ್ತು ಶಾಂತಿ, ಹಮ್ಮು-ಬಿಮ್ಮು, ಅನ್ನಾ ಕರೆನಿನಾ.

(ಸುಮಾರು ಐದು ಸಾವಿರ ಪುಟಗಳಷ್ಟು ಅನುವಾದಿಸಿದ್ದಾರೆ, ಟಾಲ್‌ಸ್ಟಾಯ್ ಅವರ ಸರಿ ಸುಮಾರು ಎಲ್ಲಾ ಕೃತಿಗಳ ಅನುವಾದ ಮಾಡಿದ್ದಾರೆ.)

ಪ್ರಮುಖ ಸಂಪಾದಿತ ಕೃತಿಗಳು : ಗಂಗೋತ್ರಿ, ಸಿರಿಯೊಡಲು, ಸುವರ್ಣ ಮಂಡ್ಯ, ಸಹ್ಯಾದ್ರಿ, ಪುತಿನ ಅಭಿನಂದನ ಗ್ರಂಥ, ಕಬ್ಬಿನ ಹಾಲು, ಅಜಿತ ತೀರ್ಥಕರ ಪುರಾಣ ತಿಲಕಂ, ಕನಕ ಸಾಹಿತ್ಯ ದರ್ಶನ ಸಂಪುಟ-1, 2, ಕಬ್ಬಿರ ಕಾವ್ಯ ಕಟ್ಟೀಮನಿ ಬದುಕು ಬರಹ, ಕವಿದರ್ಶನ, ಕಾನೂನು ಮಿತ್ರ, ಕುವೆಂಪು ಕವನಗಳು ಅನ್ವಯಿಕ ವಿಮರ್ಶೆ, ಕುವೆಂಪು ನಾಟಕ ವಿಹಾರ ಗ್ರಂಥಾಮೃತ, ಗಿರಿಜಾ ಕಲ್ಯಾಣ ಮಹಾ ಪ್ರಬಂಧಂ, ಚಿಕ್ಕುಪಾಧ್ಯಾಯನ, ರುಕ್ಮಾಂಗದ ಚರಿತ್ರೆ ಜಾನಪದ ಗೀತಾಂಜಲಿ, ಜೈಮಿನಿ ಭಾರತ ಸಂಗ್ರಹ ಧರ್ಮಾಮೃತ ಸಂಗ್ರಹ, ನಳ ಚರಿತ್ರೆ, ನೆನಪಿನ ದೋಣಿಯಲ್ಲಿ ಯಾತ್ರೆ, ಪುಣ್ಯಾಸ್ರವ, ಬಸವ ಸಂಹಿತೆ, ರಾಮಧಾನ್ಯ ಚರಿತ್ರೆ, ಲೀಲಾವತಿ ಪ್ರಬಂಧಂ, ವಜ್ರದೀಪ್ತಿ, ಶ್ರೀ ಕುವೆಂಪು ಶಿಶು ಸಾಹಿತ್ಯ ಶ್ರೀಮತಿ ಹೇಮಾವತಿ ಕುವೆಂಪು, ಶ್ರೀ ರಾಮಾಯಣದರ್ಶನಂ ಉಪನ್ಯಾಸ ಮಾಲೆ, ಸಾಹಿತ್ಯಾರಾಧನೆ, ಸುವರ್ಣ ಸಂಚಯ, ಹೊಸಗನ್ನಡ ಕಥಾ ಸಂಗ್ರಹ, ಕುವೆಂಪು ದೃಷ್ಟಿಯಲ್ಲಿ ಶ್ರೀ ಬಸವೇಶ್ವರ.

ಇತರೆ : ಪ್ರತಿಧ್ವನಿ : ಯುಗೇ ಯುಗೇ ಸಂಭವಾಮಿ : ರಾಷ್ಟ್ರೀಯ ಮೂಲಭೂತ ಸಮಸ್ಯೆಗಳು; ಸುಲಭ ಭಾಷಾಂತರ ಪಾಠಗಳು 1, 2, 3

ಇಂಗ್ಲೀಷ್ ಕೃತಿಗಳು : Culture, Education and Society
Oxford Picture dictionary (with Shashikala Chandrashekar)
Selected Poems of Kuvempu edited with Pradhana Gurudatta; Village names of Mysore District,
A stuty of Karnataka Culture and Folklore

ದೇಜಗೌ ಅವರು ರೂಪಿಸಿದ ಶೈಕ್ಷಣಿಕ-ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಗಳು

೧. ಬೃಂದಾವನ ಪ್ರೌಢಶಾಲೆ, ಬೃಂದಾವನ ಬಡಾವಣೆ, ಮೈಸೂರು ೧೯೭೫ರಿಂದ

೨. ಕುವೆಂಪು ಪ್ರೌಢಶಾಲೆ, ಕುವೆಂಪುನಗರ, ಮೈಸೂರು ೧೯೮೦ರಿಂದ

೩. ಶ್ರೀ ವಿವೇಕಾನಂದ ಪ್ರೌಢಶಾಲೆ, ಜಯಲಕ್ಷ್ಮೀಪುರಂ, ಮೈಸೂರು ೧೯೮೫ರಿಂದ

೪. ವಿಶ್ವಕವಿ ಕುವೆಂಪು ವಸತಿ ಪ್ರೌಢಶಾಲೆ, ಬೆಳಕೆರೆ, ಚನ್ನಪಟ್ಟಣ ತಾಲ್ಲೂಕು (ಗ್ರಾಮಾಂತರ)

೫. ಶ್ರೀ ವಿವೇಕಾನಂದ ಸಂಯುಕ್ತ ಪದವಿಪೂರ್ವ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು ೧೯೯೦

೬. ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು ೧೯೯೬

೭. ಸಂಶೋಧನಾಲಯ, ಕುವೆಂಪು ವಿದ್ಯಾ ಪರಿಷತ್ತು, ಮೈಸೂರು

೮. ಸಹ್ಯಾದ್ರಿ ಪ್ರಕಾಶನ, ಜಯಲಕ್ಷ್ಮೀಪುರಂ, ಮೈಸೂರು

೯. ದೇಜಗೌ ಸಾರ್ವಜನಿಕ ಗ್ರಂಥಾಲಯದಲ್ಲಿ ೨೦,೦೦೦ ಪುಸ್ತಕಗಳ ಸಂಗ್ರಹವಿದೆ.

೧೦. ಕುವೆಂಪು ಮಾಹಿತಿ ಕೇಂದ್ರ, ಜಯಲಕ್ಷ್ಮೀಪುರಂ, ಮೈಸೂರು

೧೧. ಕುವೆಂಪು ವಸ್ತುಸಂಗ್ರಹಾಲಯ, ಜಯಲಕ್ಷ್ಮೀಪುರಂ, ಮೈಸೂರು

೧೨. ಕುವೆಂಪು ಜನ್ಮೋತ್ಸವ-ಪ್ರತಿ ವರ್ಷ ೨ ದಿನಗಳ ಕಾರ್ಯಕ್ರಮ ೨೦ ವರ್ಷಗಳಿಂದ ನಡೆಯುತ್ತಿದೆ.

೧೩. ದೇಜಗೌ ಟ್ರಸ್ಟ್‌ನ ವತಿಯಿಂದ ವಿಶ್ವಮಾನವ ಪ್ರಶಸ್ತಿ

ಆಕರ ಗ್ರಂಥಗಳು

೧. ಅಮೃತ ವರ್ಷ : (ಸಂ)ಹ.ಕ.ರಾಜೇಗೌಡ, ಡಾ.ಡಿ.ಕೆ.ರಾಜೇಂದ್ರ, ೧೯೯೫, ದೇಜಗೌ ೭೫ ಅಭಿನಂದನ ಸಮಿತಿ, ಬೆಂಗಳೂರು.

೨. ಅಪೂರ್ವ : ದೇಜಗೌ ಅಭಿನಂದನಾ ಗ್ರಂಥ (ಸಂ) ಎಂ.ಎನ್.ಲಿಂಗಪ್ಪ, ೨೦೦೦, ಅಭಿ ಪ್ರಕಾಶನ, ಮೈಸೂರು.

೩. ಕನ್ನಡ ಹೋರಾಟ : ಬರಗೂರು ರಾಮಚಂದ್ರಪ್ಪ, ೧೯೭೯, ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ, ಬೆಂಗಳೂರು.

೪. ಕನ್ನಡ ಸಂಸ್ಕೃತಿ : ಪ್ರಸಾರಾಂಗ, ೨೦೦೧, ಬೆಂ. ವಿ. ವಿ.

೫. ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಡಾ. ಎಚ್. ತಿಪ್ಪೇರುದ್ರ ಸ್ವಾಮಿ, ೧೯೬೮, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೬. ಕವಿ ವಿಭೂತಿ ಮತ್ತು ಇತರ ಲೇಖನಗಳು : ದೇಜಗೌ ೨೦೦೨, ಮೈಸೂರು.

೭. ಕನ್ನಡ ಹೋರಾಟಗಳು ಒಂದು ನೋಟ : ರಾ.ನಂ.ಚಂದ್ರಶೇಖರ, ೧೯೯೯, ಕನ್ನಡ ಗೆಳೆಯರ ಬಳಗ,ಬೆಂಗಳೂರು ೨೭.

೮. ಕನ್ನಡ ಚಿಂತನೆ : ದೇಜಗೌ ೨೦೦೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೯. ಕುಲಪತಿಯ ಪತ್ರಗಳು : ದೇಜಗೌ, ೧೯೭೫, ನೆಲಮನೆ ಪ್ರಕಾಶನ, ಮೈಸೂರು.

೧೦. ಕುಲಪತಿಯ ದಿನಚರಿ : ದೇಜಗೌ, ೧೯೭೮, ತ.ವೆ.ಸ್ಮಾರಕ ಗ್ರಂಥಮಾಲೆ, ಮೈಸೂರು.

೧೧. ಗುಡಸಲಿನಿಂದ ಗಂಗೋತ್ರಿಗೆ : ಕೆ.ಆರ್.ಕಮಲೇಶ, ೧೯೮೦, ಶಿವರಂಜನಿ ಪಬ್ಲಿಕೇಷನ್ಸ್, ಮೈಸೂರು.

೧೨. ತುಡಿತ : ದೇಜಗೌ, ೧೯೭೯, ಸವಿತಾರ ಪ್ರಕಾಶನ, ಮೈಸೂರು.

೧೩. ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ : (ಸಂ.) ಹಾ. ಮಾ. ನಾಯಕ ೧೯೬೮, ದೇಜಗೌ ಗೆಳೆಯರ ಬಳಗದ ಪ್ರಕಟಣೆ, ಮೈಸೂರು.

೧೪. ದೇಜಗೌ ಸೂಕ್ತಿಗಳು : ದೇಜಗೌ ೨೦೦೧, ವೈದ್ಯವಾರ್ತಾ ಪ್ರಕಾಶನ, ಮೈಸೂರು.

೧೫. ಪದ್ಮಶ್ರೀ ದೇಜಗೌ : (ಸಂ) ತ.ಚಿ.ಚಲುವೇಗೌಡ, ೨೦೦೫, ತಳಗವಾದಿ ಪ್ರಕಾಶನ, ಮೈಸೂರು.

೧೬. ನಮ್ಮ ನಾಡೋಜ : (ಸಂ) ಸೋಮಶೇಖರಗೌಡ, ಪದ್ಮಾಶೇಖರ, ೨೦೦೦, ಸಂವಹನ, ಮೈಸೂರು.

೧೭. ಪುಸ್ತಕ ಪ್ರಪಂಚ : ದೇಜಗೌ ವಿಶೇಷ ಸಂಚಿಕೆ ಜುಲೈ-ಆಗಸ್ಟ್ ೧೯೯೯, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

೧೮. ಶಿಕ್ಷಣ ಮತ್ತು ಕನ್ನಡ ಕೆಲವು ಚಿಂತನೆಗಳು : ದೇಜಗೌ, ೨೦೦೬, ತಳಗವಾದಿ ಪ್ರಕಾಶನ, ಮೈಸೂರು.

೧೯. ರಸಷಷ್ಠಿ : (ಸಂ.) ಕೆ.ವಿ.ಶಂಕರಗೌಡ ೧೯೮೦, ದೇಜಗೌ ಷಷ್ಟ್ಯಭಿನಂದನ ಸಮಿತಿ, ಮೈಸೂರು.

೨೦. ಹೋರಾಟದ ಬದುಕು : ದೇಜಗೌ ಅವರ ಆತ್ಮಕಥೆ, ೨೦೦೫, ತಳಗವಾದಿ ಪ್ರಕಾಶನ, ಮೈಸೂರು ೦೯.